10. ಚುನಾವಣಾ ಪ್ರಸ್ತಾವ

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಕುಟುಂಬ ಕಲ್ಯಾಣ ಮತ್ತು ವಾರ್ತಾ ಸಚಿವರು) ಮಾನ್ಯ ಅಧ್ಯಕ್ಷರೆ,ಹಾಗೂ ಕಾನೂನು ಸಂಸದೀಯ ವ್ಯವಹಾರಗಳ ಸಚಿವರ ಪರವಾಗಿ : ಈಗಾಗಲೇ 16ನೇ ಜುಲೈ 2002ರಂದು ಕರ್ನಾಟಕ ವಿಧಾನಮಂಡಲದ ವಿವಿಧ ಸ್ಥಾಯಿ ಸಮಿತಿಗಳಿಗೆ ಹಾಗೂ ಕನ್ನಡ ವಿಶ್ವವಿದ್ಯಾನಿಲಯದ ಆಡಳಿತ ಮಂಡಳಿಗೆ ಚುನಾವಣಾ ಪ್ರಸ್ತಾವನೆ ಮಂಡಿಸಿದ್ದು, ಚುನಾವಣಾ ಕಾರ್ಯ ವೇಳಾಪಟ್ಟಿಯನ್ನು ಹೊರಡಿಸಲಾಗಿರುತ್ತದೆ. ಈ ಕುರಿತು ವಿವಿಧ ಪಕ್ಷಗಳ ಸಚೇತರುಗಳು ನೀಡಿರುವ ಒಡಂಬಡಿಕೆ ಪಟ್ಟಿಯ ರೀತ್ಯ ಮಾನ್ಯ ವಿಧಾನಸಭಾ ಸದಸ್ಯರುಗಳನ್ನೊಳಗೊಂಡ ವಿವಿಧ ಸಮಿತಿಗಳನ್ನು ರಚಿಸಲು ಹಾಗೂ ಕನ್ನಡ ವಿಶ್ವವಿದ್ಯಾನಿಲಯದ ಆಡಳಿತ ಮಂಡಳಿಗೆ ಮಾನ್ಯ ಸದಸ್ಯರನ್ನು ನೇಮಿಸಲಗು ಮಾನ್ಯ ವಿಧಾನಸಭಾಧ್ಯಕ್ಷರಿಗೆ ಅಧಿಕಾರವನ್ನು ಈ ಸದನವು ನೀಡಬೇಕೆಂದು ಕೋರುತ್ತೇನೆ.

ಪ್ರಸ್ತಾವ ಮಂಡಿಸಲ್ಪಟ್ಟಿತು.

ಅಧ್ಯಕ್ಷರು : ಪ್ರಾಸ್ತಾವ ಏನೆಂದರೆ, "16ನೇ ಜುಲೈ 2002ರಂದು ಕರ್ನಾಟಕ ವಿಧಾನಮಂಡಲದ ವಿವಿಧ ಸ್ಥಾಯಿ ಸಮಿತಿಗಳಿಗೆ ಹಾಗೂ ಕನ್ನಡ ವಿಶ್ವವಿದ್ಯಾನಿಲಯದ ಆಡಳಿತ ಮಂಡಳಿಗೆ ಚುನಾವಣಾ ಪ್ರಸ್ತಾವನೆ ಮಂಡಿಸಿದ್ದು, ಚುನಾವಣಾ ಕಾರ್ಯ ವೇಳಾಪಟ್ಟಿಯನ್ನು ಹೊರಡಿಸಲಾಗಿರುತ್ತದೆ. ಈ ಕುರಿತು ವಿವಿಧ ಪಕ್ಷಗಳ ಸಚೇತರುಗಳು ನೀಡಿರುವ ಒಡಂಬಡಿಕೆ ಪಟ್ಟಿಯ ರೀತ್ಯ ಮಾನ್ಯ ವಿಧಾನಸಭಾ ಸದಸ್ಯರುಗಳನ್ನೊಳಗೊಂಡ ವಿವಿಧ ಸಮಿತಿಗಳನ್ನು ರಚಿಸಲು ಹಾಗೂ ಕನ್ನಡ ವಿಶ್ವವಿದ್ಯಾನಿಲಯದ ಆಡಳಿತ ಮಂಡಳಿಗೆ ಮಾನ್ಯ ಸದಸ್ಯರನ್ನು ನೇಮಿಸಲು ಮಾನ್ಯ ವಿಧಾನಸಭಾಧ್ಯಕ್ಷರಿಗೆ ಈ ಸದನವು ಅಧಿಕಾರವನ್ನು ನೀಡುವುದು."

ಪ್ರಸ್ತಾವವನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು

11. ಶಾಸನ ರಚನೆ

ಅ. ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) ವಿಧೇಯಕ, 2002

ಆ. ಪರ್ಯಾಲೋಚನಾ ಪ್ರಸ್ತಾವ

+ ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು : ಮಾನ್ಯ ಅಧ್ಯಕ್ಷರೆ, "2002ರ ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವ ಮಂಡಿಸಲ್ಪಟ್ಟಿತು

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯ ಒಂದು ಪ್ರೋಗ್ರೆಸಿವ್ ಇಂಡಸ್ಟ್ರಿಯಲ್ ಸ್ಟೇಟ್ ಆಗಿದೆ. ಸರ್ ಎಂ. ವಿಶ್ವೇಶ್ವರಯ್ಯನವರ ಕಾಲದಿಂದಲೂ ರಾಜ್ಯದಲ್ಲಿ ಕೈಗಾರಿಕೆಗಳು ಬೆಳೆಯುತ್ತಾ ಬಂದಿದೆ. ಅದೇ ಪ್ರಕಾರ ಸಕ್ಸೆಸಿವ್ ಗೌವರ್ನಮೆಂಟ್ ಈ ರಾಜ್ಯದಲ್ಲಿ ಕೈಗಾರಿಕೆ ಬೆಳೆಯಬೇಕೆಂಬ ಉದ್ದೇಶದಿಂದ ಉತ್ತೇಜನ ನೀಡುತ್ತಾ ಬರುತ್ತಿದೆ. ಆದರೆ, ಇವೊತ್ತಿನ 21ನೇ ಶತಮಾನದಲ್ಲಿ ಪಾರದರ್ಶಕತೆ ಮತ್ತು ಸಿಂಪ್ಲಿಸಿಟಿ ಎಷ್ಟು ಸಾಧ್ಯವೋ ಅಷ್ಟು ತರುವುದು ಸರ್ಕಾರದ ಜವಾಬ್ದಾರಿಯಾಗಿರುತ್ತದೆ. ಏಕೆಂದರೆ, ಯಾರು ಇನ್‌ವೆಸ್ಟ್ ಮಾಡಲು ಬರುತ್ತಾರೆ, ಮುಖ್ಯವಾಗಿ ಟೆಕ್ನೊಕ್ರಾಟ್ಸ್ ಇರಬಹುದು, ಸಣ್ಣ ಕೈಗಾರಿಕೆಗಳಿರಬಹುದು, ದೊಡ್ಡ

ಕೈಗಾರಿಕೆಗಳಿರಬಹುದು, ಅವರಲ್ಲಿ ವಿಶ್ವಾಸ ಬರುವಂಥ ವಾತಾವರಣವನ್ನು ಸರ್ಕಾರ ನಿರ್ಮಿಸುತ್ತಿದೆ, ನಿರ್ಮಿಸಬೇಕಾಗುತ್ತದೆ. ಯಾವುದೇ ಕೈಗಾರಿಕೆಯ ಪ್ರಸ್ತಾಪ ನಮ್ಮ ಮುಂದೆ ಬಂದಾಗ ಆದಷ್ಟು ಬೇಗ ನಾವು ನಿರ್ಣಯ ಮಾಡುತ್ತೇವೆ, ಪಾರದರ್ಶಕತೆ ಇಡುತ್ತೇವೆ ಮತ್ತು ಸರಳೀಕರಣದಿಂದ ನಾವು ನಿರ್ಣಯ ಮಾಡುತ್ತೇವೆಂದು ಅವರಲ್ಲಿ ವಿಶ್ವಾಸ ಮೂಡಿಸಬೇಕಾಗುತ್ತದೆ. ಹಾಗಾಗಿ, ಭಾರತ ದೇಶದಲ್ಲಿ ಮೊದಲನೆಯ ಬಾರಿ ಕರ್ನಾಟಕ ಇದನ್ನು ಲೀಡ್ ತೆಗೆದುಕೊಂಡು ಈ ಒಂದು ಮಸೂದೆಯನ್ನು ಗೌರವಾನ್ವಿತ ಸದನದ ಸದಸ್ಯರ ಮುಂದಿಟ್ಟಿದ್ದೇನೆ. ಇದರಲ್ಲಿ ಮುಖ್ಯವಾಗಿ ಏನಿದೆಯೆಂದರೆ, ಹೈಪವರ್ ಕಮಿಟಿ ಇದೆ, ಸಿಂಗಲ್ ವಿಂಡೋ ಏಜೆನ್ಸಿ ಇದೆ, ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಕಮಿಟಿಯೂ ಇದೆ. ಆದರೆ, ಅದು ರೂಲ್ಸ್ ಮುಖಾಂತರ ಈ ಕಮಿಟಿಗೆ ಹೆಚ್ಚಿನ ಶಕ್ತಿ ಕೊಡಲು ನಾವು ಪ್ರಯತ್ನ ಮಾಡುತ್ತಿದ್ದೇವೆ. ಏಕೆಂದರೆ, ಯಾವುದೋ ಒಂದು ಹೈಪವರ್ ಕಮಿಟಿ ಅಥವಾ ಸಿಂಗಲ್ ಡಿಸೀಷನ್ ಆದಾಗ ಪುನಃ 4 ತಿಂಗಳು, 6 ತಿಂಗಳು ಬೇರೆ ಬೇರೆ ಇಲಾಖೆಗಳಿಗೆ ಹೋಗಿ ವಿಳಂಬವಾಗುತ್ತದೆ. ಇದರಲ್ಲಿ ಇನ್ನು ಮುಂದೆ ವಿಳಂಬ ಮಾಡುವುದಕ್ಕಾಗುವುದಿಲ್ಲ, ಎಸ್ ಹೇಳಿ ಅಥವಾ ನೋ ಹೇಳಿ, ಜನರಿಗೆ ತಕ್ಷಣ ನಿರ್ಣಯ ಬೇಕು. ಆ ಉದ್ದೇಶದಿಂದ ಈ ಸಮಿತಿಗೆ ಹೆಚ್ಚಿನ ಶಕ್ತಿ ತರುವ ಪ್ರಯತ್ನ ಈ ಬಿಲ್‌ನಲ್ಲಿ ನಾವು ಮಾಡಿದ್ದೇವೆ. ಅದೇ ಪ್ರಕಾರ ಮುಖ್ಯವಾಗಿ ಒಂದು ಕೈಗಾರಿಕೆಯನ್ನು ಸ್ಥಾಪನೆ ಮಾಡಬೇಕಾದರೆ 14 ಅರ್ಜಿಗಳನ್ನು ತುಂಬಬೇಕಾಗುತ್ತದೆ. ಬೇರೆ ಬೇರೆ ಇಲಾಖೆಗಳಿಗೆ 14 ಅರ್ಜಿಗಳನ್ನು ತುಂಬಿಕೊಡಬೇಕಾಗುತ್ತದೆ. 14 ಏಜೆನ್ಸಿಗಳ ಕಡೆಗೆ ಅವರು ಮಾನ್ಯತೆ ಪಡೆದುಕೊಳ್ಳುವುದಕ್ಕೆ ಹೋಗಬೇಕು. ಹಾಗಾಗಿ, ಇದರಲ್ಲಿ ಸಿಂಪ್ಲಿಸಿಟಿ ತರುವುದಕ್ಕೆ ಇದರ ಮುಂದೆ ಒಂದೇ ಒಂದು ನೋಡಲ್ ಏಜೆನ್ಸಿ 'ಉದ್ಯೋಗ ಮಿತ್ರ' ಮಾಡಿದ್ದೇವೆ. 14 ಅರ್ಜಿಗಳೇನಿದ್ದವು, ಅದನ್ನು ಕನ್ಸಾಲಿಡೇಟ್ ಮಾಡಿ ಒಂದು ಕಪೋಸಿಟ್ ಫಾರ್ಮ್ ಮಾಡಿದ್ದೇವೆ. ಮೂರು ಫಾರ್ಮ್‌ಗಳನ್ನು ಸೇರಿಸಿ ಒಂದು ಕಂಪೋಸಿಟ್ ಫಾರ್ಮ್ ಮಾಡಿದ್ದೇವೆ. ಹೀಗಾಗಿ ಇವೊತ್ತು 14 ಕಡೆಗಳಿಗೆ ಓಡಾಡುವ ಅವಶ್ಯಕತೆಯಿಲ್ಲ, ಒಂದೇ ಒಂದು ರಾಜ್ಯಮಟ್ಟದಲ್ಲಿ 'ಉದ್ಯೋಗ ಮಿತ್ರ', ಜಿಲ್ಲಾ ಮಟ್ಟದಲ್ಲಿ ಡಿಐಸಿ, ಜನರಲ್ ಮ್ಯಾನೇಜರ್, ಅಲ್ಲಿಗೆ ಹೋಗಿ ಒಂದೇ ಒಂದು ಕಂಪೋಸಿಟ್ ಅಪ್ಲಿಕೇಶನ್ ತುಂಬಿದರೆ ಸಾಕು. ಸೇಲ್ಸ್ ಟ್ಯಾಕ್ಸ್ ಕಡೆಗೆ ಹೋಗುವುದು, ಫ್ಯಾಕ್ಟರಿ ಇನ್ಸ್‌ಪೆಕ್ಟರ್‌ಗಳು ಹೋಗುವುದು, ಫ್ಯಾಕ್ಟರಿ ಬಾಯ್ಲರ್ ಇನ್ಸ್‌ಪೆಕ್ಟರ್ ಹೋಗುವುದು, ಇವೊತ್ತು ಇವೆಲ್ಲದರ ಅವಶ್ಯಕತೆಯಿಲ್ಲ, 14 ಅಪ್ಲಿಕೇಶನ್‌ಗಳನ್ನು ಸೇರಿಸಿ ಒಂದೇ ಒಂದು ಕಂಪೋಸಿಟ್ ಅಪ್ಲಿಕೇಶನ್ ಮಾಡಿದ್ದೇವೆ. ಮಾನ್ಯ ಗೌರವಾನ್ವಿತ ಸದಸ್ಯರು ಈ ಬಿಲ್ ಅನ್ನು ಸ್ವಾಗತಿಸುತ್ತಾರೆಂಬ ಬಗ್ಗೆ ನನಗೆ ವಿಶ್ವಾಸವಿದೆ. ಅದೇ ರೀತಿ ಪ್ರಾಜೆಕ್ಟ್ ಕೊಟ್ಟ ನಂತರ ಕೆಲವೊಮ್ಮೆ 3 ತಿಂಗಳು ಇಲ್ಲವೇ 6 ತಿಂಗಳಾದರೂ ನಿರ್ಣಯವಾಗುವುದಿಲ್ಲ, ಬಹಳಷ್ಟು ಕೈಗಾರಿಕೆಗಳ ಮಾಲೀಕರುಗಳು ಏನು ನಡೆಯುತ್ತಿದೆ? ನಮ್ಮ ಕೈಗಾರಿಕೆ ಪ್ರಾಜೆಕ್ಟ್ ಏಕೆ ಕ್ಲಿಯರ್ ಮಾಡಿಲ್ಲವೆಂದು ಕೇಳುತ್ತಾರೆ. ಅದಕ್ಕೋಸ್ಕರ ಡೀಮ್ಡ್ ಕ್ಲಿಯರೆನ್ಸ್‌ಗೆ ಒಂದು ಪ್ರಾವಿಶನ್ ಮಾಡಿದ್ದೇವೆ. ರಾಜ್ಯ ಮತ್ತು ಕೇಂದ್ರ ಸರ್ಕಾರದ ಕಾನೂನುಗಳೇನಿವೆ, ಆ ಕಾನೂನುಗಳ ಪ್ರಕಾರ ಅವರು ಪ್ರಪೋಸಲ್ ಕೊಟ್ಟರೆ ಆ ಪ್ರಪೋಸಲ್ ಜೊತೆ ಅವರು ಸರ್ಟಿಫೈ ಮಾಡಿದರೆ ಇದೆಲ್ಲವೂ ಸರಿಯಾಗಿದೆ, ಇದರಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಯಾವುದೇ ಕಾನೂನುಗಳ ಉಲ್ಲಂಘನೆ ಮಾಡಿಲ್ಲವೆಂದು ಕೊಟ್ಟರೆ 35 ದಿವಸದೊಳಗಾಗಿ ಅಂದರೆ, ಇದು ರೂಲ್ಸ್‌ನಲ್ಲಿ ಬರುತ್ತದೆ. ಇದನ್ನು ನಾವು ನಿಗಧಿತ ಅವಧಿಯೊಳಗೆ ಕ್ಲಿಯರ್

ಮಾಡಬೇಕಾಗುತ್ತದೆ. ಆ ನಿಗದಿತ ಅವಧಿಯೊಳಗೆ ಕ್ಲಿಯರ್ ಮಾಡಲಿಲ್ಲವೆಂದರೆ they will get a deemed clearance. ಪುನಃ ಅವರು ಕೈಗಾರಿಕೆ ಇಲಾಖೆಗೆ ಬಂದು ನಮಗೆ ಏಕೆ ಇನ್ನೂ ಕ್ಲಿಯರ್ ಮಾಡಿಕೊಟ್ಟಿಲ್ಲವೆಂದು ಕೇಳುವ ಅವಶ್ಯಕತೆಯಿಲ್ಲ, ಅದೇ ಪ್ರಕಾರ ಒಂದು ದೂರು ಇದೆ. ಇನ್ಸ್‌ಪೆಕ್ಟರ್ ರಾಜ್ಯ ಇದೆ, ಇನ್ಸ್‌ಪೆಕ್ಟರ್‌ಗಳು ಮನಸ್ಸು ಬಂದಂತೆ ಬರುತ್ತಾರೆ, ಒಮ್ಮೆ ಬಾಯ್ಲರ್ ಇನ್ಸ್‌ಪೆಕ್ಟರ್ ಬರುತ್ತಾರೆ, ಒಮ್ಮೆ ಫ್ಯಾಕ್ಟರಿ ಇನ್ಸ್‌ಪೆಕ್ಟರ್ ಬರುತ್ತಾರೆ, ಒಮ್ಮೆ ಪೊಲೀಸ್ ಇನ್ಸ್‌ಪೆಕ್ಟರ್ ಬರುತ್ತಾರೆ. ವಿಶೇಷವಾಗಿ ಸಣ್ಣ ಕೈಗಾರಿಕೆಯಿಂದ ಟೈನಿ ಇಂಡಸ್ಟ್ರೀಸ್ ದೂರಿದೆ. ಹಾಗಾಗಿ ಇದನ್ನು ರೆಗ್ಯುಲೇಟ್ ಮಾಡಬೇಕೆಂದು ಹೇಳಿದ್ದಾರೆ. ಮನಸ್ಸು ಬಂದಾಗ ಅಧಿಕಾರಿಗಳು ಹೋಗಬಾರದು, ಪಾರದರ್ಶಕತೆ ಇರಬೇಕೆಂದು ಕಂಪ್ಯೂಟರೈಸ್ಡ್ ಮಾಡಿ ರ್‍ಯಾಂಡಮ್ ಸರ್ವೆ ಮಾಡಿ ಅವರು ವಿಸಿಟ್ ಮಾಡಬೇಕು. ಅಲ್ಲದೆ, ವಿಸಿಟ್ ಮಾಡಬೇಕಿದ್ದರೂ ಸಹ ಎಲ್ಲರೂ ಒಟ್ಟುಗೂಡಿ ಹೋಗಬೇಕೇ ವಿನಾ ಪ್ರತ್ಯೇಕವಾಗಿ ಹೋಗಬಾರದು. ಆದುದರಿಂದ, ಪಾರದರ್ಶಕತೆ ಹೆಚ್ಚು ಇದರಲ್ಲಿ ಬರಬಹುದೆಂದು ನಾನು ಭಾವಿಸುತ್ತೇವೆ. ಕೈಗಾರಿಕೆಗಳು ಈ ರಾಜ್ಯದಲ್ಲಿ ಬೆಳೆಯಬೇಕೆಂಬುದು ಎಲ್ಲರ ಸದಿಚ್ಛೆ ಇದೆ. ಕೈಗಾರಿಕೆಗಳು ಬೆಳೆಯಬೇಕಾದರೆ ಸರಳೀಕರಣ, ಪಾರದರ್ಶಕತೆಯ ಅವಶ್ಯಕತೆ ಇದೆಯಾದ್ದರಿಂದ ಇವೆರಡನ್ನೂ ನಾನು ಈ ಮಸೂದೆಯ ಮುಖಾಯಂತರ ತಂದಿದ್ದೇನೆ. ಇದನ್ನು ಮಾನ್ಯ ಗೌರವಾನ್ವಿತ ಸದಸ್ಯರು ಒಪ್ಪಿಕೊಳ್ಳಬೇಕೆಂದು ಅವರಲ್ಲಿ ತಮ್ಮ ಮುಕಾಂತರ ವಿನಂತಿ ಮಾಡುತ್ತೇನೆ. ಈ ಕುರಿತಂತೆ ಸಲಹೆಗಳನ್ನು ನೀಡಬೇಕೆಂದು ಕೋರುತ್ತೇನೆ.

+ ಶ್ರೀ ಪಾಟೀಲ್ ಶಿವಾನಂದ ಸಿದ್ರಾಮಗೌಡ (ಕಕೋಟಾ) : ಮಾನ್ಯ ಅಧ್ಯಕ್ಷರೆ, ಈ ಬಿಲ್ಲನ್ನು ನಾನು ಸ್ವಾಗತಿಸುತ್ತೇನೆ. ಆದರೆ, ಇನ್ನೊಂದು ಕಡೆ ನಾನು ತಮ್ಮ ಮುಖಾಂತರ ಸನ್ಮಾನ್ಯ ಸಚಿವರನ್ನು ಕೇಳುವುದಕ್ಕೆ ಇಚ್ಚಿಸುವುದೇನೆಂದರೆ, ಈಗಾಗಲೇ ಇಂತಹ ಉದ್ದೇಶಗಳಿಂದ ಸಿಂಗಲ್ ವಿಂಡೋ ಕಮಿಟಿ ಮತ್ತು ಹೈಲೆವೆಲ್ ಎಂಪವರ್ ಕಮಿಟಿ ಮಾಡಿದ್ದಾರೆ. The projects which are coming under below Rs. 50 crores. ಅವುಗಳಲ್ಲಿ ಬಹಳಷ್ಟು ನಮ್ಮ ಶುಗರ್ ಇಂಡಸ್ಟ್ರೀಸ್ ಬರುತ್ತವೆ. ಸಕ್ಕರೆ ಉದ್ದಿಮೆ ಸಲುವಾಗಿ ನಾನು ಕಳೆದ ಒಂದೂವರೆ ವರ್ಷದಿಂದ ಸನ್ಮಾನ್ಯ ಸಚಿವರ ಹತ್ತಿರ ಹೋಗುತ್ತಾ ಬರುತ್ತಿದ್ದೇನೆ. ಏಕೆಂದರೆ, ಇದು ಎರಡು ಕಡೆ ಬರುತ್ತಿದೆ. ಒಂದು ಕಡೆ ಶುಗರ್ ಮಿನಿಸ್ಟರ್‌ಗೂ ಬರುತ್ತದೆ, ಮತ್ತೊಂದು ಕಡೆ ಇಂಡಸ್ಟ್ರಿಯಲ್ ಕ್ಲಿಯರೆನ್ಸ್‌ಗೆ ಇವರ ಕಡೆ ಹೋಗುತ್ತದೆ. ಸಿಂಗಲ್ ವಿಂಡೋ ಏಜೆನ್ಸಿಯಲ್ಲಿ ಇವೊತ್ತು ಏನಾಗುತ್ತಿದೆಯೆಂದರೆ, ನಾನು ಈ ಕುರಿತು ಚಾರ್ಜ್ ಮಾಡುವುದಕ್ಕೆ ಹೋಗುವುದಿಲ್ಲ. ನಮ್ಮ ಜಿಲ್ಲೆಯಲ್ಲಿ ಮಾತ್ರ ಬಹುತೇಕ ಶುಗರ್ ಇಂಡಸ್ಟ್ರಿಗಳು ಬರುತ್ತಿದೆಯೆಂದು ಭಾವಿಸುತ್ತೇನೆ. ಇನ್ನೂ ಎರಡು ಕಡೆ ಬಂದಿದೆ. ಮಾನ್ಯ ಮುಖ್ಯಮಂತ್ರಿಗಳ ಜಿಲ್ಲೆಯಲ್ಲಿ ಬರುತ್ತಿದೆ. ಅದೇ ರೀತಿ ಬೇರೆ ಬೇರೆ ಜಿಲ್ಲೆಗಳಲ್ಲೂ ಕೆಲವು ಬರುತ್ತಿದೆ. ವಿಶೇಷವಾಗಿ ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಶುಗರ್ ಇಂಡಸ್ಟ್ರೀಸ್ ಬರುತ್ತಿದೆ. ಆದರೆ, ಡಿಪಾರ್ಟ್‌ಮೆಂಟ್‌ನಲ್ಲಿ ಆಗತಕ್ಕಂಥ ನ್ಯೂನತೆ ಏನೆಂದರೆ, ಗವರ್ನಮೆಂಟ್ ಆಫ್ ಇಂಡಿಯಾದವರು ಕ್ಲಿಯರೆನ್ಸ್ ಕೊಟ್ಟ ಮೇಲೆ ಏರಿಯಲ್ ಡಿಸ್ಟೆನ್ಸ್ ಮೇಲೆ ಒಂದು ಶುಗರ್ ಫ್ಯಾಕ್ಟರಿಯಿಂದ ಮತ್ತೊಂದು ಶುಗರ್ ಫ್ಯಾಕ್ಟರಿಗೆ ಇಂತಿಷ್ಟು ಅಂತರವಿರಬೇಕೆಂದು ಒಂದು ಕಾನೂನು ಇದೆ. ಆ ಕಾನೂನನ್ನು ಅವರು ಪಾಲನೆ ಮಾಡಿ ಅವಕಾಶ ಕೊಟ್ಟ ಮೇಲೆ ಆ ಪರ್ಮಿಶನ್ ಇವರ ಸಿಂಗಲ್ ವಿಂಡೋ ಏಜೆನ್ಸಿ

ಮೀಟಿಂಗ್‌ನಲ್ಲಿ ಬಂದರೆ ಆಗ ಇವರು ಅದಕ್ಕೆ ಯಾವ ರೀತಿಯ ಕ್ಲಿಯರೆನ್ಸ್ ಕೊಡುತ್ತಾರೆಂದರೆ, ನಾನು ಬಹಳ ನೊಂದು ಈ ಮಾತನ್ನು ಹೇಳುತ್ತಿದ್ದೇನೆ ಅಕಸ್ಮಾತ್ ಆ ಇಂಡಸ್ಟ್ರಿಯನ್ನು ಸ್ಟಾರ್ಟ್ ಮಾಡತಕ್ಕಂಥ ಯಾರಾದರೂ ಒಂದು ಪಕ್ಷದ ಸಚಿವರು ಅಥವಾ ಶಾಸಕರು ಇದ್ದರೆ ಮಾತ್ರ ಕ್ಲಿಯರ್ ಆಗುತ್ತದೆ. ಬೇರೆ ಪಕ್ಷದವರು ಇದ್ದರೆ ಅದು ಕ್ಲಿಯರ್ ಆಗುವುದಿಲ್ಲ. ಇದಕ್ಕೆ ನಾನು ಉದಾಹರಣೆ ಕೊಟ್ಟು ಹೇಳುತ್ತೇನೆ. ನಮ್ಮ ಜಿಲ್ಲೆಯಲ್ಲಿ ಮೂರು ಜನ ನಾವು ಈ ಸಿಂಗಲ್ ವಿಂಡೋ ಏಜೆನ್ಸಿ ಎದುರಿಗೆ ಅಪ್ಲಿಕೇಶನ್ಸ್ ಹಾಕಿಕೊಂಡು ಕುಳಿತಿದ್ದೇವೆ. ಒಂದು ಇಂಡಿ ತಾಲ್ಲೋಕಿನಲ್ಲಿದೆ. ಸನ್ಮಾನ್ಯ ಸಚಿವರಿಗೂ ಗೊತ್ತಿದೆ. ಇವೊತ್ತು ನಮ್ಮ ಕೇಂದ್ರದ ಸಚಿವರಾಗಿರತಕ್ಕಂಥ ಮಾನ್ಯ ಬಸನಗೌಡ ಪಾಟೀಲ್‌ರವರು ಕನಿಷ್ಠ ಒಂದು ಐದು ಬಾರಿ ಅವರ ಮನೆಗೆ ಹೋಗಿರಬಹುದು, ಒಂತು ಹತ್ತು ಸಾರಿ ಮಾತಾಡಿರಬಹುದು.

1.30 ಪಿ.ಎಂ.

ಆ ಫ್ಯಾಕ್ಟರಿ ಸುತ್ತಮುತ್ತಲೂ 30-40 ಕಿ.ಮೀ. ವ್ಯಾಪ್ತಿಯಲ್ಲಿ ಯಾವುದೂ ಫ್ಯಾಕ್ಟರಿ ಇಲ್ಲ. ಆದರೆ ಆ ಫ್ಯಾಕ್ಟರಿಗೆ ಅನುಮತಿ ಕೊಡದೇ, ಕನಿಷ್ಟ ಒಂದೂವರೆ ವರ್ಷದಿಂದ ಇವರು ಅವರನ್ನು ಎಡತಾಕಿಸುತ್ತಿದ್ದಾರೆ. ಆದರೆ ಅಲ್ಲೇ, ಅದೇ ಜಿಲ್ಲೆಯಲ್ಲಿ, ಇವರ ಪಕ್ಷದ ಒಬ್ಬ ಸಚಿವರು, ನಾನು ಹೆಸರು ತೆಗೆದುಕೊಂಡು ಹೇಳುತ್ತೇನೆ, ಚಿಮ್ಮನಕಟ್ಟಿಯವರದ್ದು ಇತ್ತು, ಅದು ಮೂರೇ ತಿಂಗಳಲ್ಲಿ ಕ್ಲಿಯರ್ ಆಯಿತು. ಇವರ ಪಕ್ಷದ ಮಾನ್ಯ ಆರ್.ಎಸ್.ಪಾಟೀಲ್ ಎಂಬ ಎಂ.ಪಿ. ಇದ್ದಾರೆ. ಅವರು ಇಂಡಸ್ಟ್ರಿಯಲ್ ಸೆಕ್ರೆಟರಿ ಇದ್ದರು, ಇವರು ಅವರ ಅಣ್ಣನ. ಅದರ ಸಲುವಾಗಿ ಅದೂ ಮೂರೇ ತಿಂಗಳಿನಲ್ಲಿ ಕ್ಲಿಯರ್ ಆಯಿತು. ಇನ್ನೊಬ್ಬರು ಎಸ್.ಆರ್.ಪಾಟೀಲ್ ಎನ್ನುವಂತಹ ಇವರ ಪಕ್ಷದವರಾದ ಶಾಸಕರೊಬ್ಬರು ಮೇಲ್ಮನೆಯಲ್ಲಿ ಇದ್ದಾರೆ. ಅವರದ್ದು ಒಂದೇ ತಿಂಗಳಿನಲ್ಲಿ ಕ್ಲಿಯರ್ ಆಯಿತು. ಆದರೆ ಇವರು ನಾವು ಹಾಕಿದಂತಹ ಒಂದು ಅಪ್ಲಿಕೇಷನ್ ಏನಿದೆ, ಅದರ ನಂತರ ಹಾಕಿದ್ದಾರೆ. ನೀವು ಅಜೆಂಡಾ ಪ್ರಿಯಾರಿಟಿ ಬೇಕಾದರೆ ಅವರ ಕಡೆಯಿಂದ ತರಿಸಿ ನೋಡಿ. ಅವರ ಅರ್ಜಿಗಿಂತಲೂ ನಮ್ಮವು ಮೊದಲು ಹೋಗಿದ್ದಾವೋ ಇಲ್ಲವೋ ಎಂಬುದು ಗೊತ್ತಾಗುತ್ತದೆ. ಅವು ಅಲ್ಲಿಗೆ ಅವರದಕ್ಕಿಂತ ಆರ್‍ಯಾರು ತಿಂಗಳು-ಎಂಟೆಂಟು ತಿಂಗಳು ಮೊದಲು ಹೋಗಿರುತ್ತವೆ, ಅವು ಕ್ಲಿಯರ್ ಆಗುವುದಿಲ್ಲ, ಯಾವುವು ....

ಶ್ರೀ ಬಿ.ಬಿ. ಚಿಮ್ಮನಕಟ್ಟಿ : ಮಾನ್ಯ ಶಿವಾನಂದ ಪಾಟೀಲ್‌ರವರೇ, ಒಂದು ನಿಮಿಷ ....

ಶ್ರೀ ಶಿವಾನಂದ ಪಾಟೀಲ್ : ಮೊದಲು ನಾನು ಮುಗಿಸುತ್ತೇನೆ, ಅನಂತರ ತಾವು ಮಾತನಾಡುವಿರಂತೆ.

ಶ್ರೀ ಎಂ. ಮಹದೇವ್ : ತಾವು ಈಲ್ಡ್ ಆಗುವುದಾದರೆ ನಾನೂ ಕೂಡ ಒಂದು ನಿಮಿಷ ಮಾತನಾಡುತ್ತೇನೆ.

ಶ್ರೀ ಶಿವಾನಂದ ಪಾಟೀಲ್ : ನನ್ನ ಸಬ್‌ಮಿಷನ್ ಮುಗಿದ ಮೇಲೆ ನೀವು ಮಾತನಾಡುವಿರಂತೆ.

ಅಧ್ಯಕ್ಷರು : ಮಾನ್ಯ ಚಿಮ್ಮನಕಟ್ಟಿ ಮತ್ತು ಮಾನ್ಯ ಮಹದೇವ್‌ರವರೇ, ತಾವಿಬ್ಬರೂ ಅನಂತರ ಮಾತನಾಡಿ. ನಾನು ನಿಮಗೆ ಮಾತನಾಡಲು ಅನಂತರ ಅವಕಾಶ ಕೊಡುತ್ತೇನೆ. Without asking the permission of the Chair, ನೀವು ಹೇಗೆ ಮಾತನಾಡುತ್ತೀರಿ?

I can't understand. You must take the permission from the Chair. ನೀವು ನೀವೇ ಮಾತನಾಡಿದರೆ ಹೇಗೆ? ಮಾನ್ಯ ಶಿವಾನಂದ ಪಾಟೀಲ್‌ರವರು ಒಂದು ನಿಮಿಷದಲ್ಲಿ ಮಾತನಾಡಿ ಮುಗಿಸಿದ ನಂತರ ಮಾನ್ಯ ಮಹದೇವ್‌ರವರು ಏನಾದರೂ ಹೇಳುವುದಿದ್ದರೆ ನಂತರ ಹೇಳಿ. ಅದನ್ನು ಬಿಟ್ಟು ಮಧ್ಯದಲ್ಲಿ ಏಕೆ ಮಾತನಾಡುತ್ತೀರಿ. ಮಾನ್ಯ ಚಿಮ್ಮನಕಟ್ಟಿಯವರ ನೇಮ್ ಮೆನ್‌ಷನ್ ಮಾಡಿರುವುದರಿಂದ ಅವರೂ ಉತ್ತರ ಹೇಳಲಿ. Since he has mentioned the name of Chimmanakatti, he has to answer as a self explanation. ಶಿವಾನಂದ ಪಾಟೀಲರೇ, ತಾವು ಮಾತನಾಡುವುದನ್ನು ಮುಗಿಸಿ.

ಶ್ರೀ ಶಿವಾನಂದ ಪಾಟೀಲ್ : ಅವರ ಅಪ್ಲಿಕೇಷನ್ ಏನಿದೆ, ಅಲ್ಲಿ ಯಾವುದೂ ಆಬ್ಜೆಕ್ಷನ್ ಇಲ್ಲ. ನಾನು ನಿಮಗೆ ಹೇಳಬೇಕೆಂದರೆ, 13 ಸಾವಿರ ಹೆಕ್ಟೇರ್‌ನಷ್ಟು, ಕಬ್ಬು ಇದೆ ಇಂಡಿಯಲ್ಲಿ. ಒಂದು ಸಹಕಾರಿ ಸಕ್ಕರೆ ಕಾರ್ಖಾನೆ ಬರಬೇಕಾಗಿತ್ತು. ಕಳೆದ ಐದಾರು ವರ್ಷಗಳಿಂದ ಬರಲಿಲ್ಲ. ಅಲ್ಲಿ ಜನ ಕಬ್ಬು ಬೆಳೆದು ಮಹಾರಾಷ್ಟ್ರಕ್ಕೆ ಒಯ್ಯುತ್ತಾರೆ. ನಿಮಗೆ ಗೊತ್ತಿದೆ, ಮಹಾರಾಷ್ಟ್ರಕ್ಕೆ ಇವತ್ತು ತೆಗೆದುಕೊಂಡು ಹೋಗತಕ್ಕಂಥ ಪರಿಸ್ಥಿತಿ ಬಂದಿದೆ. ಅಲ್ಲಿ ಅವರು ಯಾವ ರೇಟ್ ಕೊಡುತ್ತಾರೋ ಅದಕ್ಕೆ ಕಣ್ಣು ಮುಚ್ಚಿ ಕೊಟ್ಟು ಬರುತ್ತಾರೆ. ಇಲ್ಲದಿದ್ದರೆ ಉರಿ ಹಚ್ಚಿ ಬಿಡುತ್ತಾರೆ. ಅಂತಹ ಫ್ಯಾಕ್ಟರಿಗೆ ನೀವು ಪರ್ಮಿಷನ್ ಕೊಡದೇ ಆರ್‍ಯಾರು ತಿಂಗಳಲ್ಲ, ಎರಡೆರಡು ವರ್ಷದಿಂದ ತಾವು ಕಾಡುತ್ತಿದ್ದೀರಿ. ಇನ್ನೊಂದು ಕಡೆ ನನ್ನದೇ ಒಂದು ಉದಾಹರಣೆಯನ್ನು ಹೇಳಿ ಬಿಡುತ್ತೇನೆ. ನಾನೂ ಒಂದು ಪ್ರಪೋಸಲ್ ಇವರ ಮುಂದೆ ಇಟ್ಟಿದ್ದೇನೆ, ಜಮಖಂಡಿ ತಾಲ್ಲೂಕಿನಲ್ಲಿ, ನನ್ನ ನಂತರ ಮೂರು ಮಂದಿ ಅರ್ಜಿಗಳು ಹೋದವು. ನಾನು ಹೇಳಿದೆನಲ್ಲಾ ಈ ಮೂರು ವ್ಯಕ್ತಿಗಳದ್ದು ನನ್ನ ನಂತರ ಹೋದವು. ನಮ್ಮ ಅಪ್ಲಿಕೇಷನ್ ಅವರ ಮುಂದೆ ಎರಡು ವರ್ಷದಿಂದ ಇತ್ತು. ಆದರೆ ನನ್ನದು ಕ್ಲಿಯರ್ ಆಗುವುದಿಲ್ಲ, ಅವರದ್ದು ಕ್ಲಿಯರ್ ಆಗುತ್ತದೆ. ಇದು ಯಾವ ನ್ಯಾಯ ಎಂಬುದನ್ನು ನನಗೆ ಸನ್ಮಾನ್ಯ ಸಚಿವರು ಹೇಳಬೇಕು. ಅದಕ್ಕೆ ಏನಾದರೂ ಜಸ್ಟಿಫಿಕೇಷನ್ ಇದೆಯೇ? ಎಲ್ಲರೂ ಫ್ಯಾಕ್ಟರಿ ಹಾಕಿದರೆ ಕಬ್ಬು ಎಲ್ಲಿಂದ ಬರಬೇಕು ಎಂದು ನಿಮ್ಮ ಉತ್ತರದಲ್ಲಿ ನೀವು ಹೇಳುತ್ತೀರಿ ಎಂಬುದು ನನಗೆ ಗೊತ್ತಿದೆ. ಅವರಿಗೆ ಎಲ್ಲಿಂದ ಬರುತ್ತದೆ? ನಮಗ್ಯಾಕೆ ಬರುವುದಿಲ್ಲ ಅದು. ನಿಮ್ಮ ಉತ್ತರ ಇದೇ, ನನಗೆ ಗ್ಯಾರಂಟಿ ಗೊತ್ತಿದೆ. ಮತ್ತೊಂದು ಹೇಳುತ್ತೇನೆ, ನಾವೇನೂ ನಿಮ್ಮ ಸರ್ಕಾರದ ಈಕ್ವಿಟಿ ಕೇಳುತ್ತಿಲ್ಲ, ನಾವು ಪ್ರೈವೇಟ್ ಶುಗರ್ ಇಂಡಸ್ಟ್ರಿ ಮಾಡುವವರಿಗೆ ಎನ್‌ಕರೇಜ್ ಮಾಡಿದ್ದೇವೆ, ಕೋ-ಆಪರೇಟಿವ್ ಮಾಡುವವರಿಗೆ ಎನ್‌ಕರೇಜ್ ಮಾಡಿಲ್ಲ, ಏಕೆಂದರೆ ನಾಳೆ ಅವು ನಿಮ್ಮ ಮನೆ ಮುಂದೆ ಬಂದು ಅಥವಾ ನಿಮ್ಮ ಸರ್ಕಾರದ ಮುಂದೆ ಬಂದು ಅತ್ತುಕೊಂಡು ಕೂಡುತ್ತವೆ ಎಂಬುದು ನಮಗೆ ಗೊತ್ತಿದೆ. ಅಟ್‌ಲೀಸ್ಟ್ ಅಂತಹವರಿಗಾದರೂ, ಒಂದು ಕಡೆ ಸಕ್ಕರೆ ಉದ್ಯಮ ಬಿಟ್ಟು ನಮ್ಮ ಬಿಜಾಪುರ ಜಿಲ್ಲೆ, ಬಾಗಲಕೋಟೆ ಜಿಲ್ಲೆಯಲ್ಲಿ ಬೇರೆ ಇಂಡಸ್ಟ್ರಿ ನಾವು ಮಾಡುವುದಕ್ಕಾಗುವುದಿಲ್ಲ. ಬಹಳ ಅಂದರೆ ಫುಡ್ ಪ್ರೋಸೆಸಿಂಗ್ ಮಾಡಬಹುದು, ಅದೂ ನೀವು ಅನುಮತಿ ಕೊಟ್ಟರೆ. ನೀವು ಅನುಮತಿ ಕೊಡದಿದ್ದರೆ ಅದೂ ನಮ್ಮ ಹಣೆಬರಹ, ಇಲ್ಲವೇ ಇಲ್ಲ, ನೀವು ಕೊಡುವುದೂ ಇಲ್ಲ, ನನಗೆ ಗೊತ್ತಾಗಿ ಬಿಟ್ಟಿದೆ. ಅದಕ್ಕೆ ಇಂತಹ ಇಂಡಸ್ಟ್ರಿಗೆ ನೀವು ಅವಕಾಶ ಮಾಡಿ ಕೊಡತಕ್ಕಂಥದ್ದರಲ್ಲಿ ಏನು ತಾರತಮ್ಯ ತಾವು ಮಾಡುತ್ತಿದ್ದೀರಿ. ದಯಮಾಡಿ ಇದನ್ನು ಏನಾದರೂ ತಿದ್ದಿಕೊಳ್ಳಲಿಕ್ಕೆ ತಮಗೆ ದೇವರು ಸದುದ್ದೇಶ ಅಥವಾ ಸದ್ಬುದ್ಧಿ ಕೊಟ್ಟಿದ್ದರೆ ಇನ್ನು ಮೇಲಾದರೂ ತಿದ್ದಿಕೊಳ್ಳಿ ಎಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ಮಾನ್ಯ ಚಿಮ್ಮನಕಟ್ಟಿಯವರೇ, ಒಂದು ನಿಮಿಷ, ಮಾನ್ಯ ಸಿಂಧ್ಯಾರವರು ಮಾತನಾಡಲಿ. ಮಾನ್ಯ ಸಿಂಧ್ಯಾರವರೇ, ಅವರು ಏನು ಹೇಳಿದ್ದಾರೆ ಎಂದರೆ ಚಿಮ್ಮನಕಟ್ಟಿ ....

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೇ, ಮಾನ್ಯ ಚಿಮ್ಮನಕಟ್ಟಿಯವರು ಅಥವಾ ಈ ಸದನದಲ್ಲಿ ಇರತಕ್ಕಂಥ ಸದಸ್ಯರುಗಳು ಮಾತನಾಡುವುದಕ್ಕೆ ತಾವು ಅವಕಾಶ ಕೊಡಲೇ ಬೇಕು, ಕೊಡಿ ಸ್ವಾಮಿ. ನನಗೆ ಅನುಮತಿ ಕೊಟ್ಟರೆ ನಾನು ಮಾತನಾಡುತ್ತೇನೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ : ಸಾರ್, ಒಂದು ನಿಮಿಷ ....

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರು ಹೇಗೆ ಹೇಳುತ್ತಾರೋ ಆ ರೀತಿ ನಾನು ನಡೆದುಕೊಳ್ಳುತ್ತೇನೆ. ನನಗೇನೂ ಮಾತನಾಡಬೇಕೆಂಬ ತೆವಲೇನೂ ಇಲ್ಲ.

ಅಧ್ಯಕ್ಷರು : ಮಾನ್ಯ ಚಿಮ್ಮನಕಟ್ಟಿಯವರೇ, ಮಾನ್ಯ ಸಿಂಧ್ಯಾರವರದು ಆದ ಮೇಲೆ ತಾವು ಮಾತನಾಡಿ. ಈಗ ಮಾನ್ಯ ಸಿಂಧ್ಯಾರವರು ಮಾತನಾಡಿ.

\+ ಶ್ರೀ ಪಿ.ಜಿ.ಆರ್ ಸಿಂಧ್ಯಾ (ಕನಕಪುರ) : ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯದ ಕೈಗಾರಿಕಾ ಸಚಿವರು ಬಹಳ ಉತ್ಸಾಹದಿಂದ ಕರ್ನಾಟಕದಲ್ಲಿ ಕೈಗಾರಿಕಾ ಕ್ರಾಂತಿಯನ್ನು ಮಾಡಲಿಕ್ಕೆ ಹೊರಟಿದ್ದಾರೆ. ಈ ಕರ್ನಾಟಕ ಕೈಗಾರಿಕಾ ಸೌಲಭ್ಯಗಳ ವಿಧೇಯಕ ಏನಿದೆ, ಇದು ಸಂಪೂರ್ಣವಾಗಿ ಒಂದು ಅನಾವಶ್ಯಕವಾಗಿರತಕ್ಕಂಥ ಮಸೂದೆಯಾಗಿದೆ. ಇದು ಸರ್ಕಾರದ ಕಾರ್ಯಕ್ರಮಗಳನ್ನು, ಮಂತ್ರಿಗಳನ್ನು ವೈಭವೀಕರಣಗೊಳಿಸಿಕೊಳ್ಳುವುದಕ್ಕೆ ಮಾಡಿರತಕ್ಕಂಥ ಒಂದು ಮಸೂದೆಯೇ ಹೊರತು ಬೇರೇನೂ ಅಲ್ಲ. ನಾನು ಇತ್ತೀಚಿನ ದಿನಗಳಲ್ಲಿ ಈ ಸರ್ಕಾರದ ಒಂದು ಚಪಲವನ್ನು ನೋಡುತ್ತಿದ್ದೇನೆ. ವೈಭವೀಕರಣಗೊಳಿಸಿಕೊಳ್ಳತಕ್ಕಂಥದ್ದು, ಪತ್ರಿಕೆಗಳ ಮುಖಪುಟಗಳಲ್ಲಿ ಜಾಹೀರಾತುಗಳನ್ನು ಕೊಡಿಸಿಕೊಳ್ಳತಕ್ಕಂಥದ್ದು, ಮಾಧ್ಯಮಗಳಲ್ಲಿ ಪ್ರಚಾರವನ್ನು ಪಡೆಯತಕ್ಕಂಥದ್ದು, ಈ ಚಪಲಕ್ಕೆ ಒಳಗಾಗಿ ಇವರು ಈ ಒಂದು ಮಸೂದೆಯನ್ನು ಇವತ್ತು ಮಂಡಿಸಿದ್ದಾರೆ. ಈ ಕಾನೂನು ಇಲಾಖೆಯ ಅಧಿಕಾರಿಗಳಿಗೂ ಸಹಿತ ಪಾಪ ಇವರು ಹೋಗಿ ಒತ್ತಡ ಹಾಕುತ್ತಲೇ ಇರುತ್ತಾರೆ. ಅವರು ನಮಗೆ ಬೇರೆ ಕೆಲಸಗಳಿವೆ, ಬೇರೆ ಕೆಲಸಗಳಿವೆ ಎಂದು ಹೇಳಿದರೂ ಕೂಡ ನಮ್ಮ ಮಸೂದೆ ಬರಲಿಲ್ಲ, ನಮ್ಮ ಮಸೂದೆ ಬರಲಿಲ್ಲ ಎಂದು ಹೇಳಿ ತಂಟೆ ತಕರಾರು ತೆಗೆಯುತ್ತಿರುತ್ತಾರೆ. ಪಾಪ ಅಧಿಕಾರಿಗಳು ಇವರ ರಾಜಕೀಯ ಶಕ್ತಿಯನ್ನು ನೋಡಿಕೊಂಡು ಇವರ ಒತ್ತಡಕ್ಕೆ ಒಳಗಾಗಿ ಇದನ್ನೆಲ್ಲಾ ತೆಗೆದುಕೊಂಡು ಬಂದಿದ್ದಾರೆ. ಇದೊಂದು ತೀರಾ ಅನಾವಶ್ಯಕವಾಗಿರತಕ್ಕಂಥ ಯಾವುದೇ ಪ್ರಯೋಜನ ಆಗದೇ ಇರತಕ್ಕಂಥ ಒಂದು ವಿಧೇಯಕ ಸ್ವಾಮಿ. ಈ ವಿಧೇಯಕದ ಬಗ್ಗೆ ನನಗೆ ಮುಂಚೆ ಗೊತ್ತಿದ್ದರೆ, ನಾನು ಒಂದು ಖಾಸಗಿ ಮಸೂದೆಯನ್ನು ಮಂಡಿಸುತ್ತಿದ್ದೆ. ಏನು ಅಂತ ಹೇಳಿದರೆ, ಕರ್ನಾಟಕದಲ್ಲಿ ಇರತಕ್ಕಂಥ ಕೈಗಾರಿಕೆಗಳು ಏನು ಸಾಯುತ್ತಿವೆ, ಏನು ಕಾರ್ಮಿಕರು ಬೀದಿಪಾಲಾಗುತ್ತಿದ್ದಾರೆ, ಏನು ಸರ್ಕಾರ ಹೂಡಿರತಕ್ಕಂಥ ಬಂಡವಾಳ ಇವತ್ತು ಸರ್ವಸ್ವವಾಗಿ ಮುಳುಗುತ್ತಿದೆ, ಅದನ್ನು ಪುನಃಶ್ಚೇತನಗೊಳಿಸಲಿಕ್ಕೆ ಒಂದು ವಿಧೇಯಕವನ್ನು ಶ್ರೀಮಾನ್ ದೇಶಪಾಂಡೆಯವರು ತೆಗೆದುಕೊಂಡು ಬಂದಿದ್ದರೆ ನಾನು ಅವರಿಗೆ ಬೆನ್ನು ತಟ್ಟುತ್ತಿದ್ದೆ, ನಮ್ಮ ಪಕ್ಷದವರೆಲ್ಲಾ ಅವರಿಗೆ ಮಲ್ಲಿಗೆ ಹೂವಿನ ಹಾರ ಹಾಕಿ ಇನ್ನೊಮ್ಮೆ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದರು. ಬಹಳ ಮುಖ್ಯವಾದಂತಹ ವಿಚಾರ ನನಗೆ ಗೊತ್ತಿದೆ. ಅದು ಏನೆಂದರೆ, ಸಚಿವ ಸಂಪುಟದಲ್ಲಿ ಇವರು ಮಾಡತಕ್ಕಂಥ ಅನೇಕ ಚಟುವಟಿಕೆಗಳ ಬಗ್ಗೆ ತೀವ್ರವಾದ ವಿರೋಧ ಇದೆ

ಸ್ವಾಮಿ. ಹೇಗೆ ಎಂದು ನಾನು ಹೇಳುತ್ತೇನೆ. ಭಿನ್ನಾಭಿಪ್ರಾಯಗಳಿವೆ, ಖಾಸಗೀಕರಣದ ಬಗ್ಗೆ ನನಗೆ ಗೊತ್ತಿದೆ ಅನೇಕ ಜನ ಹಿರಿಯ ಸಚಿವರುಗಳು ನೀವು ಮಾಡುತ್ತಿರುವುದು ಸರಿಯಲ್ಲ ಎಂದು ಹೇಳುತ್ತಾರೆ. ಅದ್ಯಾಕೋ ಇವರಿಗೊಂದು ಚಪಲ. ಮೊನ್ನೆ ಒಂದು ಬಿಲ್ ಪಾಸ್ ಮಾಡಿಸಿಕೊಂಡರಲ್ಲಾ, ಈ ಬಜೆಟ್ ಅನ್ನು ಟ್ರಾನ್ಸ್‌ಪರೆಂಟ್ ಮಾಡುತ್ತೇವೆ ಎಂದು ಹೇಳಿ.

ಅಧ್ಯಕ್ಷರು : ಅದೇನು ಟ್ರಾನ್ಸ್‌ಪರೆನ್ಸಿಯೋ ಕರೆನ್ಸಿಯೋ ಅನೇಕ ಸಂದರ್ಭಗಳಲ್ಲಿ. ನಮಗೆ ಅರ್ಥವೇ ಆಗುವುದಿಲ್ಲ ನನಗೆ ಅದು ಕರೆಕ್ಟಗಿ ಗೊತ್ತಾಗುವುದಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ತಪ್ಪು ತಿಳಿದುಕೊಳ್ಳಬೇಡಿ. ಒಂದು ಸಾರಿಯಾದರೂ ನೇರವಾಗಿ ಬಿಲ್ಲಿನ ಬಗ್ಗೆ ಏನಾದರೂ ಮಾತನಾಡಿದ್ದೀರಾ? ಚುಚ್ಚುವುದು ಏಕೆ? ಕೊನೆಯ ದಿವಸವಾದರೂ ಸ್ವಲ್ಪ ಸಂತೋಷವಾಗಿ ಹೋಗೋಣ ಸ್ವಾಮಿ. ಚುಚ್ಚುವುದನ್ನು ಬಿಟ್ಟು, ಒಳ್ಳೆಯ ಮಾತನಾಡಿ. ಸಂತೋಷವಾಗಿ ಬಿಲ್ ಪಾಸ್ ಮಾಡಿಕೊಡಿ. ಮಾನ್ಯ ಶ್ರೀಕಂಠಯ್ಯನವರು ಎಲ್ಲರನ್ನೂ ಊಟಕ್ಕೆ ಕರೆದಿದ್ದಾರೆ. ಸೊಗಸಾಗಿ ಊಟ ಮಾಡಿ ಎಲ್ಲಾ ಸಂತೋಷವಾಗಿ ಹೋಗೋಣ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಸ್ವಾಮಿ, ನನಗೆ ಈ ನಮ್ಮ ಜಾಲಪ್ಪನವರು ಇದಾರಲ್ಲಾ, ಹಿರಿಯ ಕಾಂಗ್ರೆಸ್ಸಿನ ಸಂಸತ್ ಸದಸ್ಯರು, ಅವರು ಒಂದು ವಿಚಾರ ಹೇಳುತ್ತಿದ್ದರು. ಅವರೇನು ಹೇಳುತ್ತಿದ್ದರು ಎಂದರೆ, ಅವರು ಎಸ್.ಎಲ್.ಡಿ. ಬ್ಯಾಂಕಿನ ಅಧ್ಯಕ್ಷರಾಗಿದ್ದಂತೆ. ಅವರು ಮಾನ್ಯ ಶ್ರೀಕಂಠಯ್ಯನವರು ಮತ್ತು ಮಾನ್ಯ ದೇಶಪಾಂಡೆಯವರಿಗೆಲ್ಲಾ ಬಹಳ ಆಪ್ತರು. ಅವರು ಏನು ಮಾಡುತ್ತಿದ್ದರು ಎಂದರೆ,

ಶ್ರೀ ಆರ್. ವಿ. ದೇಶಪಾಂಡೆ : ಅವರು ನಿಮಗೂ ಆಪ್ತರು.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಅವರು ನಮ್ಮ ಗುರುಗಳು.

ಶ್ರೀ ಆರ್.ವಿ. ದೇಶಪಾಂಡೆ : ಅವರು ನಿಮ್ಮ ಗುರುಗಳು ಮತ್ತು ಆಪ್ತರು. ಹೀಗಿರುವಾಗ ನೀವೇ ಅವರನ್ನು ಬಿಟ್ಟು ಕೊಟ್ಟರೆ ಹೇಗೆ?

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಅದು ಗೊತ್ತಿದೆ, ನಿಮಗೂ ಗೊತ್ತು ಆ ವ್ಯವಹಾರ, ನನಗೂ ಗೊತ್ತು ಶ್ರೀಕಂಠಯ್ಯನವರೇ, ದೇಶಪಾಂಡೆಗೆ ಗೊತ್ತಿಲ್ಲ ಅದು ಪಾಪ. ಜಾಲಪ್ಪನವರು ಏನು ಮಾಡುತ್ತಿದ್ದರು ಎಂದರೆ, ಅವರು ಎಸ್.ಎಲ್.ಡಿ.ಬ್ಯಾಂಕ್ ಅಧ್ಯಕ್ಷರಾಗಿದ್ದಂತೆ. ಅವರಿಗೆ ಯಾವ ರೆಸಲ್ಯೂಷನ್‌ಗಳು ಬೇಕೋ ಆ ರೆಸಲ್ಯೂಷನ್‌ಗಳನ್ನು ಕೊನೆಯಲ್ಲಿ ಇಟ್ಟುಕೊಳ್ಳುತ್ತಿದ್ದರು. ಯಾವುವು ಬೇಡವಾಗಿದ್ದವೋ ಅವುಗಳನ್ನೆಲ್ಲಾ ಮುಂಚಿನಿಂದಲೇ ಪಾಸ್ ಮಾಡಿಕೊಂಡು, ಡಿಸ್ಕಷನ್ ಮಾಡಿ, ತಿಂಡಿ ಕಾಫಿಗಳೆಲ್ಲಾ ಆದಮೇಲೆ ಕೊನೆಯಲ್ಲಿ ಇನ್ನೇನು ಮೀಟಿಂಗ್ ಮುಗಿಯಿತು ಎನ್ನುವ ಸಂದರ್ಭದಲ್ಲಿ ಪಾಸ್ ಆಯಿತು ಎಂದು ಎದ್ದು ಹೊರಟು ಹೋಗುತ್ತಿದ್ದರು. ಹಾಗೆ ನಮ್ಮ ಮಾನ್ಯ ಚಂದ್ರೇಗೌಡರು ಈ ಸಂಸದೀಯ ವ್ಯವಹಾರಗಳನ್ನು, ನೂರು ದಿನ ಅಧಿವೇಶನ ನಡೆಸುತ್ತೇವೆ ಎಂದು ಹೇಳಿ, ಪಾಪ ಏಕಾದರೂ ಹೇಳುವುದಕ್ಕೆ ಹೋದರೋ? ಇವರು ಸಿಕ್ಕಿ ಹಾಕಿಕೊಂಡು ಬಿಟ್ಟರು. ಅದು ಹೇಳದೇ ಹೋಗಿದ್ದರೆ ಬಹಳ ಚೆನ್ನಾಗಿರುತ್ತಿತ್ತು. ಸಿಕ್ಕಿ ಹಾಕಿಕೊಂಡು, ನೋಡಿ ಇವತ್ತು ಸುಮಾರು 16 ಮಸೂದೆಗಳನ್ನು ಮಂಡಿಸಿ ನಮ್ಮ ಬಾಯಿಯಲ್ಲಿ ತುರುಕುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ, ಕೇಳಿ ಹೇಳಿ ಅಂತ. ಮಾನ್ಯ ಅಧ್ಯಕ್ಷರೇ, ನಿಮಗೆ ಅನಿವಾರ್ಯ, ನೀವು ಏನೂ

ಮಾಡುವುದಕ್ಕಾಗುವುದೇ ಇಲ್ಲ, ಆ ಸ್ಥಾನದಲ್ಲಿ ಕುಳಿತುಕೊಂಡ ಮೇಲೆ ನೀವು ಅವರ ಮಾತೇ ಕೇಳಬೇಕಾಗುತ್ತದೆ, ಅಲ್ಟಿಮೇಟ್ಲಿ. ಆದರೆ ನಮ್ಮ ಮಾತು ಹೇಳುವುದಕ್ಕೆ .....

ಅಧ್ಯಕ್ಷರು : ನಾನು ಎರಡು ಕಡೆಯಲ್ಲೂ ಕೇಳಬೇಕಾಗುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನಾನು ಹೇಳುವುದನ್ನು ಕೇಳುವುದಕ್ಕೆ ನೀವು ತಯಾರಿಲ್ಲವಲ್ಲಾ. ಈಗ ನೀವು ಅವರ ಮಾತನ್ನೇ ಕೇಳಬೇಕಾಗುತ್ತದೆ ಅಂತ ಹೇಳಿದರೆ, ನಾವು ಹೇಳುವುದಕ್ಕೆ ಅವಕಾಶ ಕೊಟ್ಟಿದ್ದೀರಿ ಅಂತ ನಾನು ಹೇಳುವುದಕ್ಕೆ ಮುಂದುವರೆದಿರುವುದು. ನಾವು ಹೇಳುವುದಕ್ಕೆ ಅವಕಾಶ ಕೊಟ್ಟು ಆಮೇಲೆ ಅವರ ಮಾತನ್ನು ಕೇಳಿದ್ದೀರಿ ನೀವು. ಬಹುಮತ ಇರುವುದರಿಂದಾಗಿ ಸರ್ಕಾರ ಎಂದು ಮೇಲೆ ನೀವು ಕೇಳಲೇಬೇಕಾಗುತ್ತದೆ. ಇನ್ನು ವಿಷಯಕ್ಕೆ ಬರುವುದಾದರೆ, ಇದೊಂದು ಅನಾವಶ್ಯಕವಾಗಿರತಕ್ಕಂಥ ಮಸೂದೆ.

ಶ್ರೀ ಡಿ.ಬಿ. ಚಂದ್ರೇಗೌಡ : ಈ ಸಾರಿ ಬಿಲ್‌ಗಳ ಬಗ್ಗೆ ಬಹಳಷ್ಟು ಚರ್ಚೆಗಳನ್ನು ಮಾಡಿದ್ದೀರಿ.

ಅಧ್ಯಕ್ಷರು : ಬೇಕಾದಷ್ಟು ಮಾಡಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನಾನೇ ಮಾಡಿದ್ದೇನೆ ಸ್ವಾಮಿ.

ಅಧ್ಯಕ್ಷರು : ಈ ಸಲ ಫ್ರೂಟ್‌ಫುಲ್ ಡಿಸ್ಕಷನ್ ಆಗಿದೆ.

ಶ್ರೀ ಡಿ.ಬಿ. ಚಂದ್ರೇಗೌಡ : ಚರ್ಚೆ ಇಲ್ಲದೇ ನಾವು ರಷ್ ಥ್ರೂ ಮಾಡೇ ಇಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಆ ಕ್ರೆಡಿಟನ್ನೆಲ್ಲಾ ನೀವೇ ತೆಗೆದುಕೊಳ್ಳಬೇಕೆಂದಿದ್ದೀರೋ?

ಶ್ರೀ ಡಿ.ಬಿ. ಚಂದ್ರೇಗೌಡ : ನಾವು ತೆಗೆದುಕೊಳ್ಳುತ್ತಿಲ್ಲ, ಅದು ಅಧ್ಯಕ್ಷರಿಗೆ ಅಂತ ನಾನು ಹೇಳುತ್ತಿದ್ದೆ. ನಿಮಗೆ ಮಾತನಾಡಲಿಕ್ಕೆ ಅವಕಾಶವೇ ಕೊಡುತ್ತಿಲ್ಲವೆಂದರೆ ಹೇಗೆ?

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನಾನು ಆ ರೀತಿ ಎಲ್ಲಿ ಹೇಳಿದೆ ಪಾಪ ಛೇ ಛೇ ಛೇ, ಅಧ್ಯಕ್ಷರು ನಾನು ನಿಂತುಕೊಂಡರೆ ಬೆಲ್ಲೇ ಹೊಡೆಯುವುದಿಲ್ಲ. ಮಾನ್ಯ ಅಧ್ಯಕ್ಷರೇ, ನಾನು ಮತ್ತು ಮಾನ್ಯ ದೇಶಪಾಂಡೆಯವರು ಮಾನ್ಯ ಚಿಮನ್‌ಭಾಯಿ ಪಟೇಲ್ ಬದುಕಿದ್ದಾಗ ಗುಜರಾತ್‌ಗೆ ಹೋಗಿದ್ದೆವು. ಆಗ ಅವರು ಇನ್ನೂ ವಿರೋಧ ಪಕ್ಷದ ನಾಯಕರಾಗಿರಲಿಲ್ಲ. ನಾನು ವಿರೋಧ ಪಕ್ಷದ ಉಪ ನಾಯಕನಾಗಿದ್ದೆ. ಮಾನ್ಯ ಚಂದ್ರೇಗೌಡರು ಆಗ ವಿರೋಧ ಪಕ್ಷದ ನಾಯಕರಾಗಿದ್ದರು. ನಾವು ಅಲ್ಲಿಗೆ 1991-92ರಲ್ಲಿ ಹೋಗಿದ್ದೆವು. ಹತ್ತು ವರ್ಷದ ಮೇಲೆ ಆ ಗುಜರಾತ್ ಬಿಲ್ಲನ್ನು ಕಾಪಿ ಮಾಡಿಕೊಂಡು ಈಗ ಇದೊಂದು ಕ್ರೆಡಿಟ್ ತೆಗೆದುಕೊಳ್ಳುವುದಕ್ಕೆ ಇಲ್ಲಿಗೆ ಬಂದಿದ್ದಾರೆ ಅವರು. ಇದರಲ್ಲಿ ಏನೂ ಹೊಸದು ಇಲ್ಲ. ಉಪ್ಪು, ಹುಳಿ, ಖಾರ ಮತ್ತು ಹುಣಸೇಕಾಯಿ ಏನೂ ಇಲ್ಲ ಇದರಲ್ಲಿ , ಎಷ್ಟೊಂದು ಪ್ರಚಾರ ಗೊತ್ತಾ? ನಾಳೆ ದಿನ ಪತ್ರಿಕೆಯಲ್ಲಿ ಮುಖ ಪುಟಗಳಲ್ಲಿ ಕೈಗಾರಿಕೆಗಳಿಗೆ ಒಂದು ಹೊಸ ಶಕ್ತಿ ಏನಿದೆ ಇದರಲ್ಲಿ ಹೊಸ ಶಕ್ತಿ? ನಾವು ಅವರನ್ನೇಕೆ ಮಂತ್ರಿಗಳನ್ನಾಗಿ ಮಾಡಿದ್ದು?

ಶ್ರೀ ಆರ್.ವಿ. ದೇಶಪಾಂಡೆ : ನಾನು ಬಿಲ್ ಇಂಟ್ರಡ್ಯೂಸ್ ಮಾಡಿದ ಸಂದರ್ಭದಲ್ಲಿ ಕೆಲವು ವಿಚಾರಗಳನ್ನು ಹೇಳುವಾಗ ನಮ್ಮ ಸ್ನೇಹಿತರು ಇಲ್ಲಿ ಇದ್ದಿಲ್ಲ. ಅವರು ಕೇಳಲಿಲ್ಲ. ಅವರು ಕೇಳಿದ್ದರೆ ಈ ತರಹ ಮಾತನಾಡುತ್ತಿರಲಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನಾನು ಇನ್ನು ಡೆಫ್ ಅಂಡ್ ಡಮ್ ಸ್ಕೂಲ್‌ಗೆ ಹೋಗುವ ಸನ್ನಿವೇಶ ಬಂದಿಲ್ಲ. ನಾನು ಡೆಫ್ ಅಂಡ್ ಡಮ್ ಸ್ಕೂಲ್‌ಗೆ ಹೋದ ಸನ್ನಿವೇಶದಲ್ಲಿ

ಮಾನ್ಯ ದೇಶಪಾಂಡೆಯವರೂ ಬರುತ್ತಾರೆ. ಬರಲಿ ಆಗ ಬೇಕಾದರೆ ಇದನ್ನು ಮಾತನಾಡಲಿ. ಅವರು ನಮ್ಮ ಪರ್ಮನೆಂಟ್ ನಾಯಕರು ಯಾವಾಗಲೂ ಗುಜರಾತ್ ಮಾದರಿಯಲ್ಲಿ ಇದನ್ನು ತೆಗೆದುಕೊಂಡು ಬಂದಿದ್ದೀರಿ, ಇದರಲ್ಲಿ ಏನೂ ಹೊಸದಿಲ್ಲ. ಇದು ಅನಾವಶ್ಯಕ. ನಾನು ಹೇಳುತ್ತೇನೆ ಪಾಪ, ಲಾ ಡಿಪಾರ್ಟ್‌ಮೆಂಟ್ ಅಧಿಕಾರಿಗಳಿಗೆ ಸುಮ್ಮನೆ ತೊಂದರೆ ಕೊಡುವುದಕ್ಕೆ ಮಾಡಿದ್ದೀರಿ. ಇದರಲ್ಲಿ ಏನೂ ಇಲ್ಲ. ಸುಮ್ಮನೆ ಪಾಸ್ ಮಾಡಿ ಬಿಡಬಹುದು. ಆದರೆ ಅವಕಾಶವನ್ನು ಉಪಯೋಗಿಸಿಕೊಂಡು ನಿಮ್ಮ ಕೆಲವು ಬಂಡವಾಳಗಳ ಬಗ್ಗೆ ನಾನು ಮಾತನಾಡಬೇಕಾಗುತ್ತದೆ. ನಿಮಗೆ ಕೈಗಾರಿಕಾ ಮಂತ್ರಿಗಳು ಮಾಡಿದ್ದು ಏಕೆ ಎಂದು ನಾನು ಕೇಳುವುದು? ಬೆಂಗಳೂರಿನ ನಮ್ಮ ಮಾನ್ಯ ರೋಷನ್ ಬೇಗ್‌ಗೆ ಮಾಡಬಹುದಾಗಿತ್ತು, ಮಾನ್ಯ ರೇವಣ್ಣನವರಿಗೆ ಮಾಡಬಹುದಾಗಿತ್ತು, ನಮ್ಮ ತಾಲ್ಲೂಕಿನ ಮಾನ್ಯ ಶಿವಕುಮಾರ್‌ರವರಿಗೆ ಮಾಡಬಹುದಾಗಿತ್ತು, ಮಾನ್ಯ ಕೃಷ್ಣಪ್ಪನವರಿಗೆ ಮಾಡಬಹುದಾಗಿತ್ತು. ಇವರಿಗೆ ಏಕೆ ನಾವು ಮಾಡಿದ್ದು ಎಂದರೆ, ಉತ್ತರ ಕರ್ನಾಟಕದ ಬೀದರ್, ಗುಲ್ಬರ್ಗ, ರಾಯಚೂರು, ಬಳ್ಳಾರಿ, ಬಿಜಾಪುರ, ಕಾರವಾರ, ಬೆಳಗಾಂ, ಧಾರವಾಡದವರಾಗಿದ್ದರಿಂದ ನಿಮಗೆ ಮಂತ್ರಿ ಮಾಡಿರುವುದು. ಎಲ್ಲಾ ಸರ್ಕಾರಗಳಲ್ಲೂ ನೀವೇ ಕೈಗಾರಿಕಾ ಮಂತ್ರಿಗಳಾಗಿದ್ದೀರಿ. ಈ ಬಗ್ಗೆ ಬಹಳ ಜನರಿಗೆ ಹೊಟ್ಟೆಕಿಚ್ಚು ಇದೆ. ನನಗೆ ಅಂತೂ ಇಲ್ಲ. ಏಕೆಂದರೆ ಆ ಭಾಗದವರು, ಆ ಭಾಗದ ಬಗ್ಗೆ ನಾನು ಗೌರವ ಪ್ರೀತಿ ವಿಶ್ವಾಸ ಇಟ್ಟುಕೊಂಡಿರುವವನು. ಆ ಭಾಗ ಬೆಳೆಯಲಿ. ನಾನು ಅಲ್ಲಿಗೆ ಹೋಗಿದ್ದೆ. ಏನೂ ಬೆಳೆದಿಲ್ಲ. ನಾನು ನಿಮಗೆ ಹೇಳುತ್ತೇನೆ, ಅಲ್ಲಿರುವ ಎಲ್ಲಾ ಕೈಗಾರಿಕೆಗಳನ್ನು ಮುಚ್ಚಿಕೊಂಡು ಬರುತ್ತಿದ್ದಾರೆ. ಅವರು ಬಹಳ ಕಷ್ಟಪಟ್ಟು ಹುಬ್ಬಳ್ಳಿಯಲ್ಲಿ ಇನ್‌ಫೋಸಿಸ್ ನಾರಾಯಣ ಮೂರ್ತಿಯವರ ಮೇಲೆ ಪಾಪ ಒಂದು ಕರುಣೆ ತೋರಿಸಿದ್ದಾರೆ. ಇನ್‌ಫೋಸಿಸ್ ನಾರಾಯಣಮೂರ್ತಿಯವರಿಗೆ ನಾನು ಅನೇಕ ಸಂದರ್ಭಗಳಲ್ಲಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಕೆಲವು ವಿಚಾರಗಳಲ್ಲಿ ಅವರು ಮತ್ತು ಅವರ ಶ್ರೀಮತಿಯವರಿಂದ ಪಾಠ ಕಲಿಯಬೇಕು. ನಾನು ಬೆಳಿಗ್ಗೆ ಏಕೆ ಮಾತನಾಡುವುದಕ್ಕೆ ನಿಂತುಕೊಂಡಿದ್ದೆ ಎಂದರೆ, ಕೆಲವರಿಗೆ ಬಹಳ ಸಿಟ್ಟು ಬಂದಿತ್ತು, ಅದಕ್ಕೆ ನಾನು ಕುಳಿತುಕೊಂಡೆ. ಇನ್‌ಫೋಸಿಸ್ ನಾರಾಯಣಮೂರ್ತಿಯವರ ಹೆಂಡತಿ ಶ್ರೀಮತಿ ಸುಧಾಮೂರ್ತಿಯವರಿಗೆ ನಾನು ನಮನಗಳನ್ನು ಸಲ್ಲಿಸುತ್ತೇನೆ. ವಿಧಾನ ಸಭೆ ನಡೆಯುತ್ತಿದೆ, 224 ಜನ ಕರ್ನಾಟಕದ ಐದೂವರೆ ಕೋಟಿ ಜನಗಳ ಪರವಾಗಿ ನಾವು ಇಲ್ಲಿ ಕುಳಿತುಕೊಂಡಿದ್ದೇವೆ. ಇಬ್ಬರು ವೀರ ಯೋಧರು ಹೋದ ವಾರ ಶ್ರೀನಗರದಲ್ಲಿ ಉಗ್ರಗಾಮಿಗಳ ಗುಂಡಿಗೆ ಬಲಿಯಾದರು. ಹಾಗೆ ಸತ್ತವರಿಗೆ ಸರ್ಕಾರದ ಪರವಾಗಿ ಕನಿಷ್ಠ ಒಬ್ಬ ಮಂತ್ರಿಯಾಗಲಿ, ಆ ಮಹಾ ಪೌರರಾಗಲಿ ಆ ಶವ ಸಂಸ್ಕಾರಕ್ಕೆ ಹೋಗಿ ಹಾರ ಹಾಕತಕ್ಕಂತಹ ಸೌಜನ್ಯವಾಗಲೀ, ಕರುಣೆ ಆಗಲಿ ಸರ್ಕಾರಕ್ಕೆ ಮತ್ತು ಅವರಿಗೆ ಇಲ್ಲ.

ಶ್ರೀ ಎ. ಕೃಷ್ಣಪ್ಪ : ಸರ್ಕಾರದ ಕಡೆಯಿಂದ ನಾನು ಎರಡು ಸಾರಿ ಹೋಗಿದ್ದೇನೆ. ಹಾಗೂ ಗೌರವಾದರಗಳನ್ನು ತೋರಿಸಿದ್ದೇನೆ. ನಾವು ನಮ್ಮ ನಮನಗಳನ್ನು ಸಲ್ಲಿಸಿದ್ದೇವೆ.

SRI P.G.R. SCINDIA: I congratulate you.

SRI A. KRISHNAPPA: Thank you. ರಾಜ್ಯದ ಜನತೆಗೆ ಈ ಅಭಿಪ್ರಾಯ ಬರುವುದು ಬೇಡ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಆಯಿತು, ಮಾನ್ಯ ಕೃಷ್ಣಪ್ಪನವರು ಹೋಗಿದ್ದರು. ಬಹಳ ಸಂತೋಷ. ನಿಮ್ಮ ಈ ಚಟುವಟಿಕೆಗೆ ನಮ್ಮ ಸ್ವಾಗತ ಇದೆ. ಆ ವೀರ ಯೋಧರಿಗೆ ಇನ್ ಫೋಸಿಸ್‌ನ ಶ್ರೀಮತಿ ಸುಧಾ ನಾರಾಯಣ ಮೂರ್ತಿಯವರು ಹೋಗಿ ಒಂದಷ್ಟು ಹಣ ಕೊಟ್ಟಿದ್ದಾರೆ. ಇಂತಹದನ್ನು ನೀವು ಸ್ವಲ್ಪ ಕಲಿಯಿರಿ. ದುಡ್ಡು ಕೊಟ್ಟ ಹಾಗೆ ಕಾಣುತ್ತದೆ. ಅದನ್ನೆಲ್ಲಾ ನೋಡಿದೆ. ಸರ್ಕಾರದಿಂದ ಏನು ಕೊಟ್ಟಿದ್ದಾರೆಯೋ ಗೊತ್ತಿಲ್ಲ. ಮಾನ್ಯ ಕೃಷ್ಣಪ್ಪನವರೇ, ನೀವು ಆಮೇಲೆ ಹೇಳಿ.

ಶ್ರೀ ಎ. ಕೃಷ್ಣಪ್ಪ : 11ನೇ ದಿನದ ಸೆರ್‌ಮನಿ ಆದಮೇಲೆ ಅವರನ್ನು ಮಾನ್ಯ ಮುಖ್ಯಮಂತ್ರಿಗಳ ಜೊತೆ ಭೇಟಿ ಮಾಡಿಸಿ, ಮುಖ್ಯಮಂತ್ರಿಗಳಿಂದ ಕಮಾಂಡೆಂಟ್ ಹತ್ತಿರ ಮಾತನಾಡಿ ಅವರಿಗೆ ಬಹಳ ಜರೂರಾಗಿ ಏನು ಸೌಕರ್ಯಗಳು ಬೇಕಾಗಿದೆ ಅದನ್ನು ಕೊಡಿಸಲು ಪ್ರಯತ್ನ ಮಾಡುತ್ತೇವೆ. ಕಮಾಂಡೆಂಟ್ ಶ್ರೀ ರೆಡ್ಡಿಯವರ ಜಾಗದಲ್ಲಿ ಶ್ರೀಮಾನ್ ಸಿಂಗ್ ಎನ್ನುವವರು ಬಂದಿದ್ದಾರೆ. ಅವರಿಗೆ ನಾವು ಸರ್ಕಾರದ ಇಚ್ಛೆಯನ್ನು ಹೇಳಿದ್ದೇವೆ. ಅವರಿಗೆ ಏನು ಪ್ರಿಯಾರಿಟಿ ಬೇಕೆಂದು ಕೇಳಿ 11ನೇ ದಿನದ ಸೆರ್‌ಮನಿ ಆದನಂತರ ಸರ್ಕಾರಕ್ಕೆ ತಿಳಿಸಿ, ಸರ್ಕಾರ ನಿಮ್ಮ ಪರವಾಗಿ ಇದೆ. ನಾವು ನಿಮ್ಮ ಕಷ್ಟವನ್ನು ಹಂಚಿಕೊಳ್ಳುವುದಕ್ಕೆ ತಯಾರಿದ್ದೇವೆಂದು ಸರ್ಕಾರದ ಪರವಾಗಿ ನಾವು ಹೇಳಿದ್ದೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಸತ್ತು ಹೋಗಿರುವವರು ಯೋಧರು, ಇಬ್ಬರು ಯೋಧರು ಇಬ್ಬರಿಗೂ ಸ್ವಂತ ಮನೆ ಇಲ್ಲ. ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾದ ಶ್ರೀ ಕುಸುಮಾಕರ ದೇಸಾಯಿಯವರಿಗೆ 20 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ. ಆ ತರಹ ಆ ಸ್ವರ್ಗವಾಸಿ ವೀರ ಯೋಧರ ಮನೆಗಳಿಗೆ ಅಷ್ಟು ಹಣ ಕೊಟ್ಟರೆ ಉತ್ತಮ. ಬಹಳ ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾದ ದೇಸಾಯಿ ಅವರಿಗೆ 20 ಲಕ್ಷ ರೂಪಾಯಿಗಳನ್ನು ಕೊಟ್ಟು ಬಿಟ್ಟಿದ್ದಾರೆ. ಮಾನ್ಯ ಕೌಜಲಗಿಯವರ ಗಮನಕ್ಕೆ ಅದು ಬಂದಿಲ್ಲವೆಂದು ಕಾಣುತ್ತದೆ. ಇವರಿಗೆ ಅಷ್ಟು ದುಡ್ಡು ಕೊಡಿ ಎಂದು ಕೇಳುವುದಕ್ಕೆ ನಾನು ಹೇಳುವುದು ಇಷ್ಟೆ. ನಾನು ಏಕೆ ನಿಮಗೆ ಇದನ್ನು ಹೇಳುತ್ತಿದ್ದೇನೆ ಎಂದರೆ, ಇನ್ ಫೋಸಿಸ್‌ನವರು ಆ ಕಡೆ ಏನು ಮಾಡಿದ್ದಾರೆ ಎಂದು ನಾನು ಗಮನಿಸಿದೆ. ಹುಬ್ಬಳ್ಳಿಯಲ್ಲಿ ನಗರಪಾಲಿಕೆ ಮೇಯರ್‌ರವರು ಒಂದು ಹೇಳಿಕೆ ಕೊಟ್ಟರು. ಉದಯ ಟಿವಿಯಲ್ಲಿ ಅದನ್ನು ನಾನು ನೋಡಿದೆ. 15ನೇ ತಾರೀಖು ಓಪನ್ ಮಾಡುತ್ತೇವೆಂದು ಹೇಳಿದ್ದಾರೆ. 9 ರಿಂದ 10 ಜಿಲ್ಲೆಗಳಲ್ಲಿ ಎಷ್ಟು ಕೈಗಾರಿಕೆಗಳು ಪ್ರಾರಂಭವಾಗಿವೆ ಎನ್ನುವುದನ್ನು ಪ್ರಾಮಾಣಿಕವಾಗಿ ತಿಳಿಸುವ ಬದಲು, ಎಷ್ಟು ಕೈಗಾರಿಕೆಗಳನ್ನು ಮುಚ್ಚಿದ್ದೀರಿ ಎಂದು ದಯವಿಟ್ಟು ಈ ಸದನಕ್ಕೆ ತಿಳಿಸಬೇಕು. ಕೈಗಾರಿಕೆಗಳು ಪ್ರಾರಂಭವಾಗಿರುವುದರ ಬಗ್ಗೆ ತಿಳಿಸುವುದು ನಮಗೆ ಗೊತ್ತಿದೆ. ಎಷ್ಟು ಕಾರ್ಖಾನೆಗಳನ್ನು ಮುಚ್ಚಿದ್ದೀರಿ, ಎಷ್ಟು ಕಾರ್ಮಿಕರಿಗೆ ವಾಲೆಂಟರಿ ರಿಟೈರ್‌ಮೆಂಟ್ ಕೊಟ್ಟು ಮನೆಗೆ ಕಳುಹಿಸಿದ್ದೀರಿ? ಎಷ್ಟು ಜನರಿಗೆ ವಾಲೆಂಟರಿ ರಿಟೈರ್‌ಮೆಂಟ್ ಕೊಟ್ಟು ಕಾರ್ಖಾನೆಗಳನ್ನು ಮುಚ್ಚಿ ಹಾಕಿದ್ದೀರಿ ಎಂಬುದನ್ನು ತಿಳಿಸಿದರೆ ಬಹಳ ಉಪಯೋಗವಾಗುತ್ತದೆ ಎಂದು ನಾನು ಈ ಸಂದರ್ಭದಲ್ಲಿ ನಿಮ್ಮಲ್ಲಿ ಒತ್ತಾಯ ಮಾಡುತ್ತೇನೆ. ಸರ್ಕಾರಿ ಕಾರ್ಖಾನೆಗಳನ್ನು ಎಷ್ಟು ಮುಚ್ಚಿದ್ದೀರಿ? ಸಹಕಾರಿ ಕಾರ್ಖಾನೆಗಳು ಎಷ್ಟು ಮುಚ್ಚಿ ಹೋಗಿವೆ? ಇದನ್ನು ತಿಳಿಸಿದರೆ ರಾಜ್ಯದ ಜನತೆಗೆ ಬಹಳ ಅನುಕೂಲವಾಗುತ್ತದೆ. ಈಗ ಎಲ್ಲರೂ ವಾಪಸ್ ಬರುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಮುಂದಿನ ಅಧಿವೇಶನದಲ್ಲಿ ಈ ವಿಚಾರ ತೆಗೆದುಕೊಳ್ಳುತ್ತೇವೆಂದು ಹಿಂದೆ ಹೇಳಿದ್ದಿರಿ. ಈ ಅಧಿವೇಶನದಲ್ಲಿ

ನಾವೆಲ್ಲಾ ಅಪೋಸಿಷನ್‌ನವರು ದಡ್ಡರಾಗಿ ಬಿಟ್ಟೆವು. ಕರೆಕ್ಟಾಗಿ ಟೈಮ್ ಯುಟಿಲೈಸ್ ಮಾಡಿಕೊಂಡಿಲ್ಲ. ಕರೆಕ್ಟಾಗಿ ಟೈಮ್ ಯುಟಿಲೈಸ್ ಮಾಡಿಕೊಂಡಿದ್ದರೆ ಮೊದಲ 100 ದಿನಗಳಲ್ಲಿ ಏನು ಭಾಷಣಗಳನ್ನು ಮಾಡಿದ್ದಾರೆ, ಭ್ರಷ್ಟಾಚಾರದ ಮೇಲೆ ಧರ್ಮ ಯುದ್ಧ ಏನೂ ಕೈಗಾರಿಕಾ ಕ್ರಾಂತಿ ಏನು? ಹಣಕಾಸಿನ ಕ್ರಾಂತಿ ಏನು? ವೆಸ್ಟ್ ಎಂಡ್ ಹೋಟೆಲ್ ಅನ್ನು ಎಷ್ಟು ದಿನ ಬುಕ್ ಮಾಡಿದ್ದು, ಆ ವೆಸ್ಟ್ ಎಂಡ್ ಹೋಟೆಲ್‌ನಲ್ಲಿ ನಡೆದಿರುವ ವ್ಯವಹಾರಗಳು ಏನು? ಈಗ ನಡೆಯುತ್ತಿರುವ ವ್ಯವಹಾರಗಳೇನು? ಪಾಪಾ ಮಾನ್ಯ ಶ್ರೀಕಂಠಯ್ಯನವರಿಗೆ ಏನೂ ಗೊತ್ತಾಗುವುದಿಲ್ಲ. (ಪಾಪಾ) ಹಾಸನದ ವಿಚಾರವೇ ಅವರಿಗೆ ಕರೆಕ್ಟಾಗಿ ಗೊತ್ತಾಗುವುದಿಲ್ಲ. he is too good persons to understand all those things. ಆ ವ್ಯವಹಾರಗಳೇನು? ಎಷ್ಟು ದಿನ ಕಾನ್‌ಫರೆನ್ಸ್ ನಡೆದದ್ದು ಮಾನ್ಯ ರೇವಣ್ಣನವರೇ ಎಮ್‌ಎನ್‌ಪಿ, ಸಿಎನ್‌ಪಿಗಳು ಇಂಗ್ಲೀಷ್‌ನಲ್ಲಿ ಇರತಕ್ಕಂತಹ 26 ಅಕ್ಷರಮಾಲೆಯ ಎಲ್ಲಾ 26 ಶಬ್ದಗಳನ್ನು ಉಪಯೋಗಿಸಿ ಏರ್ ಪೋರ್ಟ್‌ನಿಂದ ಹಿಡಿದು ವೆಸ್ಟ್ ಎಂಡ್ ಹೋಟೆಲ್‌ವರೆಗೆ ಸಹಿತ ರತ್ನಗಂಬಳಿ ಹಾಕಿದ್ದೆ ಹಾಕಿದ್ದು. ಇದು ಏಕೆ ವೆಸ್ಟ್ ಎಂಡ್ ಹೋಟೆಲ್‌ನಲ್ಲಿನ ಈ ವ್ಯವಹಾರಗಳು? ಯಾರೋ ವಿಧಾನ ಪರಿಷತ್ತಿನ ಸದಸ್ಯರು ಕೇಳುತ್ತಿದ್ದರಂತೆ ಐಎಎಸ್, ಟಿಸಿಎಸ್ ಅಧಿಕಾರಿಗಳನ್ನು ಬೆಳಿಗ್ಗೆ ಹೊತ್ತಿನಲ್ಲಿ ನೋಡಬೇಕು. ಅಲ್ಲಿ ಹಾರಿ ಹೋಗಿ ನೋಡಿ ನಾರಾಯಣ ನಮ್ಮ ನಾರಾಯಣ ನಮಃ, ನಾರಾಯಣ ನಮಃ ಎಂದು ಹೇಳಬಹುದಂತೆ, ಆಮೇಲೆ ನಾರಾಯಣ ನಮಃ ಎಂಬುವರು ಕೃಷ್ಣಾರ್ಪಣಮಸ್ತು ಕೃಷ್ಣಾರ್ಪಣಮಸ್ತು ಎಂದು ಹೇಳಿದ ಮೇಲೆ ಸಹಿಗಳಾಗುತ್ತವಂತೆ ವಿಧಾನಸೌಧದಲ್ಲಿ ಈ ತರಹಕೇಳಿಕೊಂಡಿದ್ದು. ನನಗೆ ಈ ವ್ಯವಹಾರಗಳು ಗೊತ್ತಿಲ್ಲ. ವಿಚಾರ ಹೇಳಿದ್ದು ನಾನು. ಈ ರೀತಿ ಕಾನ್‌ಫರೆನ್ಸ್ ಆಗುತ್ತವೆ. ನೀವು 50 ಲಕ್ಷ ರೂಪಾಯಿಗಳು ಕೋಟಿ ರೂಪಾಯಿಗಳು ಎಂದರೆ, ಅದರಲ್ಲಿ ಸೊನ್ನೆಗಳಿಗೆ ಬೆಲೆಯೇ ಇಲ್ಲ. ಬಂದಿದ್ದು, ಬಂದಿದ್ದೇ ಬಂಡವಾಳ! ಅದು ಎಷ್ಟು ಬಂಡವಾಳ ಬಂದಿತು ಎಂದು ನಮಗೆ ಅಂತೂ ಗೊತ್ತಿಲ್ಲ. ನಿಮಗೇನಾದರೂ ಗೊತ್ತಿದ್ದರೆ ತಿಳಿಸಬೇಕು. ಗಂಗಾವತಿ ಸಕ್ಕರೆ ಕಾರ್ಖಾನೆ ಮುಚ್ಚಬೇಕೆಂದು ಹೊರಟಿದ್ದೀರಿ, ಅಲ್ಲಿನ ಮೆಷನರಿಗಳನ್ನೆಲ್ಲ ಮದ್ದೂರಿಗೆ ಸಾಗಿಸುತ್ತಿದ್ದೀರಿ ಎಂದು ತಿಳಿದುಬಂದಿದೆ. ಅದು ಏಕೆ ಎಂದು ನಮಗೆ ಇನ್ನೂ ಅರ್ಥವಾಗುತ್ತಿಲ್ಲ. ಗಂಗಾವತಿ ಸಕ್ಕರೆ ಕಾರ್ಖಾನೆಯ (ಒರಿಜನಲ್) ಸ್ಪೇರ್ ಪಾರ್ಟ್ಸ್ ಸ್ಪೇ ಪಾರ್ಟ್ಸ್ ಎಲ್ಲಾ ಮದ್ದೂರಿಗೆ ಬರುತ್ತಿದೆ ಎಂದು ತಿಳಿದಿದೆ, ಏಕೆ ಬರುತ್ತಿದೆ ಎಂದು, ನಮಗೆ ಕರೆಕ್ಟಾಗಿ ಗೊತ್ತಿಲ್ಲ. ತಾವು ಇಂಡಸ್ಟ್ರೀಸ್ ಮಿನಿಸ್ಟರ್ ಆಗಿರುವುದರಿಂದ ಅದನ್ನು ನಮಗೆ ತಿಳಿಸಬೇಕು. ಮಾನ್ಯ ಅರಗ ಜ್ಞಾನೇಂದ್ರರವರು ಇಲ್ಲಿಯೇ ಇದ್ದಾರೆ. ಮೈಸೂರು ಪೇಪರ್ ಮಿಲ್ ಬಹಳ ಚೆನ್ನಾಗಿ ಕೆಲಸ ಮಾಡುತ್ತಿದೆ. ಇದನ್ನು ಮುಚ್ಚಿ ಹಾಕಲಿಕ್ಕೆ ಹೊರಟಿದ್ದಾರೆ. ಮುಚ್ಚಿ ಹಾಕುವುದರಲ್ಲಿ ಶೂರರು ಇವರು. ಈ ಮಸೂದೆ ತರುವ ಬದಲು, ಮುಚ್ಚಿ ಹಾಕುವ ಮಸೂದೆ ತಂದು ಆದಷ್ಟು ಬೇಗ ಮುಗಿಸಿದ ಬಿಟ್ಟು ನಿಮ್ಮದು ಏನು ವ್ಯಾಪಾರ ಇದೆ ಅದನ್ನು ಮಾಡಿಕೊಂಡು ಹೊರಟು ಹೋಗಿ, ಎಂದು ಹೇಳುವುದಕ್ಕೆ ನಾನು ಎದ್ದು ನಿಂತಿದ್ದೇನೆಯೇ ಹೊರತು, ಬೇರೆ ಇನ್ನೇನೂ ಇಲ್ಲ. ದಯವಿಟ್ಟು ಎನ್ ಜಿ ಇಎಫ್ ನೆಲದ ಮಾರಾಟ ಏನಿದೆ, ಮಾನ್ಯ ರೋಷನ್ ಬೇಗ್, ನೀವು ಇದರ ಬಗ್ಗೆ ಸ್ವಲ್ಪ ಕಣ್ಣು ಇಟ್ಟಿರಬೇಕು. ಯಾವ ಕಡೆ ಇದ್ದರೂ ಮುಂದೆ ಎಮ್‌ಎಲ್‌ಎ ಆಗುವವರು, ಮಂತ್ರಿಗಳಾಗುವವರು. ತಾವು ಸ್ವಲ್ಪ ಇದನ್ನು ಗಮನದಲ್ಲಿಟ್ಟುಕೊಳ್ಳಿ. ಎನ್‌ಜಿಇಎಫ್ ನೆಲವನ್ನು ಜಡ್ಜಸ್ ಸೊಸೈಟಿಗೆ (ಸ್ಕೇರ್) ಫೀಟ್‌ಗೆ

ಎಷ್ಟು ಕೊಟ್ಟಿದ್ದಾರೆ? ಈಗ ಎಷ್ಟು ಕೊಟ್ಟಿದ್ದಾರೆ? ಇದರ ಬಗ್ಗೆ ಸ್ವಲ್ಪ ಯೋಚನೆ ಮಾಡಿ. ಇವೆಲ್ಲಾ ಆದಮೇಲೆ ಇನ್ನು ಎರಡು ವಿಚಾರ ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಒಂದು, ಮಾನ್ಯ ಪ್ರಭಾಕರ ರೆಡ್ಡಿಯವರು ನಮ್ಮ ಕನ್ನಡ ಚಳುವಳಿ ಹೋರಾಟಗಾರರು, ಹಿಂದೆ ಈ ಸದನದ ಶಾಸಕರಾಗಿದ್ದವರು. ಅನೇಕ ಕನ್ನಡ ಪರ ಚಳುವಳಿಗಾರರು ಶ್ರೀಮತಿ ಸರೋಜಿನಿ ಮಹಿಷಿ ವರದಿಯನ್ನು ಜಾರಿಗೆ ತರಬೇಕೆಂದು ಬಹಳ ಖಂಡತುಂಡಾಗಿ ತೆಗೆದುಕೊಂಡು ಬಂದಿದ್ದಾರೆ. ಮಾನ್ಯ ದೇಶಪಾಂಡೆಯವರೇ ದಯವಿಟ್ಟು ಬೇಸರ ಮಾಡಿಕೊಳ್ಳಬೇಡಿ. ನಿಮಗೆ ವಿಶ್ವಾಸ ಇರುವ ಯಾರಾದರೂ ಒಬ್ಬ ಅಧಿಕಾರಿಯನ್ನು ಕಳುಹಿಸಿಕೊಡಿ (40 ವರ್ಷಗಳಿದ್ದು, 50 ವರ್ಷಗಳದ್ದು ಬೇಡ.) ಹೊಸದಾಗಿ ಕಾರ್ಖಾನೆಗಳನ್ನು ಪ್ರಾರಂಭ ಮಾಡುತ್ತಾರಲ್ಲಾ ಅದು ಮತ್ತು 15 ವರ್ಷ, 20 ವರ್ಷಗಳ ಹಿಂದೆ ಬಂದಿರತಕ್ಕಂಥ ಕೈಗಾರಿಕೆಗಳಲ್ಲಿ ಎಷ್ಟು ಜನ ಕನ್ನಡದ ಯುವಕರಿಗೆ ಉದ್ಯೋಗ ಕೊಟ್ಟಿದ್ದಾರೆ ಎಂಬುದನ್ನು ಸ್ವಲ್ಪ ತಾವು ದಯವಿಟ್ಟು ಪತ್ತೆ ಮಾಡಿಸುತ್ತೀರಾ? ಅದರ ಬಗ್ಗೆ ವರದಿ ಏನಾದರೂ ಮಾಡಿದ್ದೀರಾ? ಮಾನ್ಯ ಮುಖ್ಯಮಂತ್ರಿಗಳು ನಿನ್ನೆ ಒಂದು ಮಸೂದೆಯನ್ನು ಮಂಡನೆ ಮಾಡಿ ಬಜೆಟ್ ಟ್ರಾನ್ಸ್‌ಫರೆನ್ಸಿ ಎಂದು ಹೇಳಿದರಲ್ಲಾ, ಅಂದರೆ ಬಜೆಟ್‌ಗೆ ಮುಂಚೆಯೇ ನಾನೆಲ್ಲಾ ಟ್ರಾನ್ಸ್ ಫರೆಂಟ್ ಆಗಿ ಡಿಸ್‌ಕಸ್ ಮಾಡುತ್ತೇನೆ ಎಂದು ಹೇಳಿ, ಆ ರೀತಿ ಒಂದು ಟ್ರಾನ್ಸ್‌ಫರೆನ್ಸ್ ಯನ್ನು ನೀವು ತೋರಿಸಿ ಕೊಟ್ಟಿದ್ದರೆ ಬಹಳ ಚೆನ್ನಾಗಿರುತ್ತಿತ್ತು. ಅಟ್ಲೀಸ್ಟ್ ಸೆಕ್ಸ್ಟ ಟೈಮ್ ಆದರೂ ಸಹ ಈ ಸರೋಜಿನಿ ಮಹಿಷಿ ವರದಿ ಕಡೆ ಗಮನ ಕೊಡಬೇಕು. ಅಲ್ಲಿ ಕಾರ್ಮಿಕ ಹಿತರಕ್ಷಣೆ ಮಾತ್ರ ಆಗುತ್ತಿಲ್ಲ. ಇವೊತ್ತು ನಿಜವಾಗಿಯೂ ಹೇಳಬೇಕೆಂದರೆ, ತಾವೇ ಹೊಸದಾಗಿ ಗೆದ್ದು ಬಂದಾಗ, ಆ ಕಡೆ ಕುಳಿತಿದ್ದಾಗ ತಮಗೆ ಗೊತ್ತಿದೆ, ಮಾನ್ಯ ಸೂರ್ಯನಾರಾಯಣರಾವ್, ಮಾನ್ಯ ಎಂ.ಎಸ್. ಕೃಷ್ಣನ್, ಆರ್. ವೆಂಕಟರಾಮಯ್ಯ ಮಾನ್ಯ ಪಂಪಾಪತಿ, ಮಾನ್ಯ ಮೈಕೇಲ್ ಫರ್ನಾಂಡಿಸ್, ಇವರೆಲ್ಲಾ ಎಷ್ಟೊಂದು ಹೋರಾಟ ಮಾಡುತ್ತಾ ಇದ್ದರು ಎಂದು ಹೇಳಿ ಗೊತ್ತಿದೆ. ಇವೊತ್ತು ಮಾನ್ಯ ಆರ್. ವೆಂಕಟರಾಮಯ್ಯನವರ ಕಥೆ ಏನಾಗಿದೆ ಎನ್ನುವುದನ್ನು ತಾವು ಲೆಕ್ಕ ಹಾಕಿಕೊಳ್ಳಿ. ಅದರ ಹಿತರಕ್ಷಣೆ ಮಾಡತಕ್ಕಂಥಾದ್ದು ಇದರಲ್ಲಿ ಏನೂ ಇಲ್ಲ. ಈಗ ನನಗೆ ಇನ್ನೊಂದು ಏನು ಅನ್ನಿಸುತ್ತಿದೆ ಎಂದರೆ, ಇದು ಸುಮ್ಮನೆ ವೈಭವೀಕರಣ ಎನ್ನುವಂತಿದೆ. ಈಗಾಗಲೇ ಬೇಕಾದಷ್ಟು ಕಮಿಟಿಗಳಿವೆ. ಈಗ 50 ಕೋಟಿ ರೂ.ಗೂ ಹೆಚ್ಚು ಇರತಕ್ಕಂಥಾದ್ದು, again it has to go before the cabinet. ಇನ್ನು ಮೇಲೆ ಕ್ಯಾಬಿನೆಟ್ 50 ಕೋಟಿ ಈಗ ನಿಮ್ಮಿಂದ ಒಂದು ಕ್ಲಾರಿಫಿಕೇಷನ್ ನನಗೆ ಬೇಕು. ರಾಜ್ಯ ಉನ್ನತಮಟ್ಟದ ಒಪ್ಪಿಗೆ ನೀಡುವ ಸಮಿತಿ ಎಂದು ಹೇಳಿ ಇವರೇ ಇದಕ್ಕೆ ಅಧ್ಯಕ್ಷರು. ಏಳೆಂಟು ಜನ ಮಂತ್ರಿಗಳು ಇದಕ್ಕೆ ಸದಸ್ಯರು. ಇವರೇನು ಮಾಡಿಕೊಂಡಿದ್ದಾರೆ ಎಂದರೆ ಮೂರು ಕೋಟಿ ರೂ. ಮೇಲಿನ ವ್ಯವಹಾರವೆಲ್ಲವನ್ನೂ ನಾವು ಕ್ಲಿಯರ್ ಮಾಡುತ್ತೇವೆ ಎಂದು ಹೇಳಿದ್ದಾರೆ. ಇದು ಕ್ಯಾಬಿನೆಟ್‌ಗೆ ಹೋಗುತ್ತೋ, ಇಲ್ಲವೋ ಅಥವಾ ನಿಮ್ಮ ವ್ಯವಹಾರದಲ್ಲಿಯೇ ಇದು ಮುಗಿದುಹೋಗಿಬಿಡುತ್ತದೋ ಎಂಬ ಬಗ್ಗೆ ನಮಗೆ ಗೊತ್ತಾಗಬೇಕು. ಆಮೇಲೆ ಈ ಮೂರು ಕೋಟಿ ರೂ. ಕೆಳಗಡೆ ಇರತಕ್ಕಂಥಾದ್ದನ್ನು ಮಾತ್ರ ಈಗ ಕೆಲವು ಅಧಿಕಾರಿಗಳಿಗೆ ಕೊಟ್ಟಿದ್ದೀರಿ. ಇದೂ ಸಹ ಉಪಯೋಗ ಇಲ್ಲವೆಂದು ಹೇಳಿ, ಇನ್ನು ಸಣ್ಣ ಕೈಗಾರಿಕೆಗಳಿಗೆ ಸಂಬಂಧಪಟ್ಟ ಹಾಗೆ ಈ ಮಾತನಾಡುವುದಕ್ಕೆ ಆಗದೇ ಇರುವುದರಿಂದಾಗಿ ತಾವು ದೊಡ್ಡ ಕೈಗಾರಿಕೆಗಳಿಗೆ ಸಂಬಂಧಪಟ್ಟ

ಮಂತ್ರಿಗಳಾಗಿರುವುದರಿಂದ ಈ ದೊಡ್ಡ ದೊಡ್ಡ ವಿಚಾರಗಳ ಬಗ್ಗೆಯೇ ಎರಡ್ಮೂರು ವಿಷಯಗಳನ್ನು ಹೇಳಿದ್ದೇನೆ. ಇದಕ್ಕೆ ತಾವು ಉತ್ತರ ಕೊಡಬೇಕೆಂದು ತಮ್ಮಲ್ಲಿ ಬೇಡಿಕೊಳ್ಳುತ್ತೇನೆ.

ಅಧ್ಯಕ್ಷರು : ವಿರೋಧ ಪಕ್ಷದ ನಾಯಕರೆ, ನಿಮಗೆ ಮಾತನಾಡುವುದಕ್ಕೆ ಎಷ್ಟು ನಿಮಿಷಗಳು ಬೇಕು?

ಶ್ರೀ ಜಗದೀಶ್ ಶೆಟ್ಟರ್ : ಹತ್ತರಿಂದ ಹದಿನೈದು ನಿಮಿಷಗಳು ಬೇಕು.

ಅಧ್ಯಕ್ಷರು : ಪಾಪ, ಮಾನ್ಯ ಶ್ರೀಕಂಠಯ್ಯನವರು ಕಾಯ್ತಾ ಇದ್ದಾರೆ ಊಟಕ್ಕೆ.

ಶ್ರೀ ಜಗದೀಶ್ ಶೆಟ್ಟರ್ : ನಾನು 3.00 ಗಂಟೆಗೆ ಮಾತನಾಡುತ್ತೇನೆ.

ಅಧ್ಯಕ್ಷರು : ರೈಟ್ ಮಾನ್ಯ ಶ್ರೀಕಂಠಯ್ಯನವರೆ, ಏನು ಸ್ವಾಮಿ, ಊಟಕ್ಕೆ ಕರೆದುಬಿಟ್ಟು ನೀವು ಇಲ್ಲೇ ಸುಮ್ನೆ ಕುಳಿತಿದ್ದೀರಲ್ಲಾ. ಈಗ ಸದನವನ್ನು 3.00 ಗಂಟೆವರೆಗೆ ಮುಂದೂಡುತ್ತಿದ್ದೇನೆ.

(ಸದನವು ಮಧ್ಯಾಹ್ನ ಒಂದು ಗಂಟೆ ಐವತ್ತೊಂದು ನಿಮಿಷಕ್ಕೆ ಮುಂದೂಲ್ಪಟ್ಟು ಮತ್ತೆ ಮಧ್ಯಾಹ್ನ 3.00 ಗಂಟೆಗೆ ಪುನರ್ ಸಮಾವೇಶಗೊಳ್ಳಲು ನಿಶ್ಚಯಿಸಿತು.)

(ಸದನವು ಪುನಃ ಮಧ್ಯಾಹ್ನ 3 ಗಂಟೆ 10 ನಿಮಿಷಕ್ಕೆ ಸಮಾವೇಶಗೊಂಡಿತ್ತು. ಮಾನ್ಯ ಸಭಾಧ್ಯಕ್ಷರು (ಶ್ರೀ ಎಂ. ವಿ. ವೆಂಕಟಪ್ಪನವರು) ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಿದ್ದರು)

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರು ನಮಗೆ ಸಮಯಕೊಟ್ಟಿದ್ದಕ್ಕಾಗಿ ನಾವು ಅಲ್ಲಿಗೆ ಹೋಗಿದ್ದೆವು; ತಾವು ಸದನವನ್ನು ಮುಂದೂಡಿ ಒಳಗೆ ಹೋಗಿ ಬಂದಮೇಲೆ, ಏನು ತೀರ್ಮಾನ ತೆಗೆದುಕೊಂಡಿದ್ದೀರಿ? ಏಕೆಂದರೆ ನಿನ್ನೆ ಆ ಪೀಠದ ಗೌರವ ಉಳಿದಿಲ್ಲವೆಂಬುದು ನಮ್ಮ ನೋವಾಗಿದೆ, ಇವರ್‍ಯಾರು ಆ ಪೀಠದ ಗೌರವನ್ನು ಉಳಿಸಿಲ್ಲ, ತಮಗೆ ಎಷ್ಟು ನೋವಾಗಿದೆ? ನಮಗೆ ಉಳಿದ ರಾಜಕೀಯ ಬೇಕಾಗಿಲ್ಲ, ಈ ಸದನ ಹೇಗೆ ನಡೆಯಬೇಕಾಗಿತ್ತು? ಅದನ್ನು ತಾವು ಮಾಡಿ.

ಅಧ್ಯಕ್ಷರು : ತಾವು ಒಂದು ಕೆಲಸ ಮಾಡಿ. ನಾನು ಈ ಬಿಲ್ ಪಾಸ್ ಉಳಿದ ಆದ ತಕ್ಷಣ ಒಳಗಡೆಗೆ ಹೋಗಿ, ಎಲ್ಲಾ ನಾಯಕರನ್ನು ಕರೆಯಿಸುತ್ತೇನೆ.

+ ಶ್ರೀ ಜಗದೀಶ್ ಶೆಟ್ಟರ್ (ವಿರೋಧಪಕ್ಷದ ನಾಯಕರು) : ಮಾನ್ಯ ದೇಶಪಾಂಡೆಯವರು ಇವೊತ್ತು ಕರ್ನಾಟಕ ಕೈಗಾರಿಕೆಗಳ ಸೌಲಭ್ಯ ವಿಧೇಯಕವನ್ನು ಇವತ್ತು ಮಂಡನೆ ಮಾಡಿದ್ದಾರೆ. ಕೈಗಾರಿಕೆಗಳ ಬಗ್ಗೆ ಸರ್ಕಾರದ ನೀತಿ, ಕೈಗಾರಿಕೆ ಉದ್ದಿಮೆಗಳಿಗೆ ಏನು ತೊಂದರೆಯಾಗುತ್ತದೆ ಎನ್ನುವ ಬಗ್ಗೆ ಸಾಕಷ್ಟು ವಿಚಾರಗಳನ್ನು ಕೂಡ ಹೇಳಿದ್ದಾರೆ. ನಮ್ಮ ಹಿರಿಯ ಸದಸ್ಯರಾದ ಮಾನ್ಯ ಸಿಂಧ್ಯಾರವರು, ತಮ್ಮ ಹಾಸ್ಯಪ್ರಜ್ಞೆಯ ಜೊತೆಗೆ ಬಹಳ ಗಂಭೀರವಾದ ವಿಚಾರಗಳನ್ನು ಮಂಡನೆ ಮಾಡಿದ್ದಾರೆ. ಇವತ್ತು ಕೈಗಾರಿಕೆ ನಮ್ಮಲ್ಲಿ ಹೇಗೆ ನಶಿಸಿ ಹೋಗುತ್ತಿದೆ, ಮಾನ್ಯ ದೇಶಪಾಂಡೆಯವರ ಕಾಲದಲ್ಲಿ ಹೀಗಾಗುತ್ತಿದೆಯಲ್ಲಾ ಎನ್ನುವ ಕೊರಗನ್ನು, ಅವರು ವ್ಯಕ್ತಪಡಿಸಿದ್ದರೆ, ನಾನು ಮಾಡಿ ವ್ಯಕ್ತಪಡಿಸುತ್ತಿದ್ದೇನೆ. ಅದರಲ್ಲಿ ಪ್ರಮುಖವಾಗಿ ಅವರು ಉತ್ತರ ಕರ್ನಾಟಕ ಭಾಗದಿಂದ ಬಂದವರು 8 ವರ್ಷಗಳಿಂದ ಕೈಗಾರಿಕಾ ಸಚಿವರಾಗಿ ಸಾರ್ವಜನಿಕ ರಂಗದಲ್ಲಿ ಕೆಲಸ ಮಾಡಿಕೊಂಡು ಬಂದಿದ್ದಾರೆ ಉತ್ತರ ಕರ್ನಾಟಕ ಬೇಡ, ಇವತ್ತು ಅವರ ಕ್ಷೇತ್ರವಾದ ಧಾಂಡೇಲಿಯಲ್ಲಿ ಪ್ರಮುಖವಾದ ಮೂರ್‍ನಾಲ್ಕು ಕೈಗಾರಿಕೆಗಳನ್ನು ಮುಚ್ಚಲಾಗಿದೆ. ಅಂದರೆ ಅವರು ತಮ್ಮ ಸ್ವಕ್ಷೇತ್ರದಲ್ಲಿ ಕೈಗಾರಿಕೆಗಳನ್ನು ಉಳಿಸಿಕೊಳ್ಳಲಾಗಲಿಲ್ಲ. ಹುಬ್ಬಳ್ಳಿ-ಧಾರವಾಡ ಮಹಾ ನಗರದಲ್ಲಿ ಐದಾರು ಕೈಗಾರಿಕೆಗಳು ಮುಚ್ಚಿ ಹೋಗಿದ್ದಾವೆ. ಹಾಗೆ ಬೇರೆ ಬೇರೆ

ಭಾಗಗಳಲ್ಲಿಯೂ ಸಹ ಮುಚ್ಚಿ ಹೋಗಿದ್ದಾವೆ, ಬಹುಶಃ ಇವರ ಕಾಲದಲ್ಲಿ ಎಷ್ಟು ಕೈಗಾರಿಕೆಗಳು ಮುಚ್ಚಿದ್ದಾವೆ ಎಷ್ಟು ಆರಂಭವಾಗಿದ್ದಾವೆ ಎನ್ನುವ ಲೆಕ್ಕವನ್ನು ಕೊಟ್ಟರೆ ಬಹುಶಃ ಈ ವಿಧೇಯಕಕ್ಕೆ ಮಹತ್ವ ಬರಲಿಕ್ಕೆ ಸಾಧ್ಯವಿದೆ. ಇಲ್ಲದಿದ್ದರೆ ಇದಕ್ಕೆ ಮಹತ್ವ ಬರುವುದಕ್ಕೆ ಸಾಧ್ಯವಿಲ್ಲ. ಮತ್ತೊಂದು ವಿಚಾರ, ಏನೆಂದರೆ, ಮಾನ್ಯ ದೇಶಪಾಂಡಿಯವರು ಗ್ಲೋಬಲ್ ಇನ್‌ವೆಸ್ಟರ್ ಮೀಟ್ ಮಾಡಿದರು. 25 ಸಾವಿರ ಕೋಟಿ ರೂಪಾಯಿಗಳ ಬಂಡವಾಳವನ್ನು ಬೇರೆ ದೇಶದ ಕೈಗಾರಿಕೋದ್ಯಮಿಗಳಿಂದ ತರುತ್ತೇವೆಂದು ಹೇಳಿದರು, ಅವರಿಗೆಲ್ಲಾ ರಾಜೋಪಚಾರವನ್ನು ಮಾಡಿದರು, ಕೊನೆಗೆ ಸರ್ಕಾರ ಹೇಳಿದ ಮಾಹಿತಿಯ ಪ್ರಕಾರ 9-10 ಸಾವಿರ ಚಾಲು ಆಗಿದೆ ಎನ್ನುವ ಮಾತನ್ನು ಹೇಳಿದರು. ಕೋಟಿ ರೂಪಾಯಿಗಳಷ್ಟು ಬಂಡವಾಳ ಹೂಡಿಕೆಯ ಬಗ್ಗೆ ಮಾತ್ರ ಈಗಾಗಲೇ ಅಪ್ರೂವಲ್ ಆಗಿದೆ. ಅಷ್ಟೊಂದು ಕ್ರಿಯಾಯೋಜನೆ 25 ಸಾವಿರ ಕೋಟಿ ರೂಪಾಯಿಗಳೂ ಬರಲಿಲ್ಲ. ಗ್ಲೋಬಲ್ ಇನ್‌ವೆಸ್ಟರ್ ಮೀಟ್, ಅದು ಇದು ಎಂದು ಬೇಕಾದಷ್ಟು ಪ್ರಚಾರವನ್ನು ತೆಗೆದುಕೊಂಡರು. ಅದರ ಬದಲಾಗಿ ನಮ್ಮಲ್ಲಿದ್ದ ಕೈಗಾರಿಕೋದ್ಯಮಿಗಳ ಬಗ್ಗೆ ಹೆಚ್ಚಿನ ಕಾಳಜಿಯನ್ನು ವಹಿಸಿ ಅವರಿಗೆ ಸಹಾಯ ಮಾಡುವುದಕ್ಕೆ ಪ್ರಯತ್ನ ಮಾಡಿದ್ದರೆ ಅದರಿಂದ ಅನುಕೂಲವಾಗುತ್ತಿತ್ತು. ಬಹುಶಃ ಈ ಗ್ಲೋಬಲ್ ಇನ್‌ವೆಸ್ಟ್‌ಮೆಂಟ್ ಇದೆಲ್ಲಾ ಮಾಡುವುದು ಬೇಕಾಗಿರಲಿಲ್ಲ. ಈ ಸಣ್ಣ ಕೈಗಾರಿಕೆಗಳಿಗೆ 300 ಕೋಟಿ ರೂಪಾಯಿಗಳಷ್ಟು ಸಬ್ಸಿಡಿ ಕೊಡುವುದಿದೆ; ತಾವು ಅಧಿಕಾರಕ್ಕೆ ಬಂದು ಎರಡೂವರೆ ವರ್ಷಗಳಾಗಿವೆ, ಈ ಸಣ್ಣ ಕೈಗಾರಿಕೆ ಇಲಾಖೆ ಬೇರೆಯವರಿಗೆ ಬರಬಹುದು, ಆದರೂ ಅದೂ ಕೂಡ ಕೈಗಾರಿಕೆಯಾಗಿದೆ, ಏನು ಬೃಹತ್ ಕೈಗಾರಿಕೆಗಳಿದ್ದಾವೆ ಅವುಗಳ ಹಿಂದೆಯೇ ಸಾವಿರಾರು ಸಣ್ಣ ಸಣ್ಣ ಕೈಗಾರಿಕೆಗಳು ನಡೆಯುತ್ತವೆ, ಎಷ್ಟೋ ಬೃಹತ್ ಕೈಗಾರಿಕೆಗಳು ಮುಚ್ಚಿದ್ದರಿಂದ ಈ ಸಣ್ಣ ಕೈಗಾರಿಕೆಗಳು ನಶಿಸಿ ಹೋದವು ಶೇಕಡ 60ಕ್ಕಿಂತ ಹೆಚ್ಚು ಸಣ್ಣ ಕೈಗಾರಿಕೆಗಳು ಮುಚ್ಚಿ ಹೋಗಿದ್ದಾವೆ, ಅವುಗಳಿಗೆ ಸಬ್ಸಿಡಿಯನ್ನು ಕೊಡಲಿಲ್ಲ. ನಿಮಗೆ ಸಣ್ಣ ಕೈಗಾರಿಕೆಗಳನ್ನು ಬೆಳೆಸುವಂತಹ ಕಾಳಜಿ ಇಲ್ಲದಿದ್ದರೆ ಈ ರೀತಿಯ ಸಿಂಗಲ್ ವಿಂಡೊ ಸಿಸ್ಟಂ ಆಗಲಿ ಅಥವಾ ರಾಜ್ಯಮಟ್ಟದಲ್ಲಿ ಒಂದು ಸಮಿತಿಯನ್ನು ಮಾಡಿ, ಅದರ ಮುಖಾಂತರ ಕ್ಲಿಯರೆನ್ಸ್ ಮಾಡುವುದಾಗಲಿ, ಹಾಗೆ ಮಾಡದಿದ್ದರೆ, ಇದರಿಂದ ಏನೂ ಪ್ರಯೋಜನವಿಲ್ಲವೆಂದು ನಾನು ಹೇಳಬಯಸುತ್ತೇನೆ. ಆದಕ್ಕಾಗಿ ಈ ಬಗ್ಗೆ ನಾನು ಒಂದೆರಡು ಉದಾಹರಣೆಗಳನ್ನು ಹೇಳಬಯಸುತ್ತೇನೆ. ಇವತ್ತು ನಮ್ಮ ಬೆಂಗಳೂರಿನಲ್ಲಿರುವ ಎನ್‌ಜಿಇಎಫ್ ಮುಚ್ಚು ಹೋಯಿತು, ಈಗ ಬಿಐಎಫ್‌ಆರ್ ಮುಂದಿದೆ, ಅಲ್ಲಿರುವ ನೌಕರರಿಗೆ ವಿಆರ್‌ಎಸ್ ತೆಗೆದುಕೊಂಡು ಮನೆಗೆ ಹೋಗಿ ಎಂದು ಅವರಿಗೆ ನೋಟೀಸ್ ಕೊಡುತ್ತಿದ್ದೀರಿ. ಎನ್‌ಜಿಇಎಫ್ ಬಹುಶಃ ನನಗನ್ನಿಸುತ್ತಿದೆ ನಮ್ಮ ಭಾರತದಲ್ಲೇ ತಾಂತ್ರಿಕ ಕೌಶಲ್ಯವನ್ನು ಹೊಂದಿರುವ ಯಾವುದಾದರೂ ಕೈಗಾರಿಕೆ ಇದ್ದರೆ, ಅದಿ ಎನ್‌ಜಿಇಎಫ್, ಸರ್ಕಾರಿ ಸ್ವಾಮ್ಯದ್ದು, ಆ ರೀತಿಯಾದ ಟೆಕ್ನಿಕಲ್ ನೊಹೌ ಇದ್ದದ್ದು ಯಾವುದೂ ಇಲ್ಲ. ಮತ್ತೆ ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರಸಿದ್ಧಿಯನ್ನು ಪಡೆದ ಕೈಗಾರಿಕೆಯಾಗಿದೆ. ಇದೂ ಮುಚ್ಚಿಹೋಗುವಂತಹ ಪರಿಸ್ಥಿತಿ ನಿರ್ಮಾಣವಾಯಿತು, ಮುಚ್ಚುಹೋಗಲು ಕಾರಣವೇನೆಂಬುದನ್ನು ಹುಡುಕಬೇಕಾಗಿದೆ. ಸಾರಾಸಗಟಾಗಿ ಅದನ್ನು ಮುಚ್ಚುವುದು ಮತ್ತು ಅದನ್ನು ಖಾಸಗೀಕರಣ ಮಾಡುತ್ತೇವೆಂದು ತಾವೇನು ಒಂದು ಹಂತದಲ್ಲಿ ಹೇಳಿದ್ದಿರಿ, ಅದೂ ಆಗಲಿಲ್ಲ. ನಂತರ ಇವತ್ತು ಅದನ್ನು ಮುಚ್ಚುವಂತಹ ಕೆಲಸ ನಡೆಯುತ್ತಿದೆ, ವೆಸ್ಟೆಡ್ ಇನ್‌ಟೆರೆಸ್ಟ್‌ಗೆ ಅದರ ಆಸ್ತಿಯನ್ನು ಪರಭಾರೆ ಮಾಡುವ ಕೆಲಸ ನಡೆಯುತ್ತಿದೆ, ಈ ಬಗ್ಗೆ ಹೆಚ್ಚು ಚರ್ಚೆ ವಿಧಾನ ಪರಿಷತ್ತಿನಲ್ಲಿ ಆಗಿದೆ. ಆ ಬಗ್ಗೆ ನಾನು ಹೆಚ್ಚಿಗೆ

ಮಾತನಾಡುವುದಿಲ್ಲ. ನನಗೆ ಏನು ಬೇಕಾಗಿದೆ ಅಂದರೆ, ಇಂತಹ ಸರ್ಕಾರಿ ಸ್ವಾಮ್ಯದ ಎನ್‌ಜಿಇಎಫ್ ಉಳಿಯ ಬೇಕೆಂಬುದು ನನ್ನ ಕಳಕಳಿಯಾಗಿದೆ, ಬಹುಶಃ ಮಾನ್ಯ ದೇಶಪಾಂಡೆಯವರು ಏನಾದರೂ ಮನಸ್ಸು ಮಾಡಿದ್ದರೆ ಈ ಎನ್‌ಜಿಇಎಫ್ ಅನ್ನು ಉಳಿಸಬಹುದಾಗಿತ್ತು. ಅವರು ಏತಕ್ಕೆ ಮನಸ್ಸು ಮಾಡಿಲಿಲ್ಲವೆಂಬುದು ನನಗೆ ಗೊತ್ತಾಗುತ್ತಿಲ್ಲ. ನನಗೆ ಬಂದ ಮಾಹಿತಿ ಪ್ರಕಾರ ಕಳೆದ ಕೆಲವು ವರ್ಷಗಳಿಂದ ಅದು ನಷ್ಟದಲ್ಲಿದೆ, ಏಕೆ ಲಾಸ್ ಆಯಿತು? ಈ ಐಎಎಸ್ ಆಫೀಸರ್ ಅನ್ನು ಅಡ್ಮಿನಿಸ್ಟ್ರೇಟಿವ್ ಎಂದು ನೀವು ನೇಮಕ ಮಾಡಿದ್ದರಿಂದ ಅಲ್ಲಿ ನಷ್ಟವಾಯಿತು, ಒಬ್ಬ ನುರಿತ ಟೆಕ್ನಿಕಲ್ ಹ್ಯಾಂಡ್ ಅನ್ನು ಅಲ್ಲಿಗೆ ಹಾಕಿದ್ದರೆ ಬಹುಶಃ ಈ ಸಮಸ್ಯೆ ಬರುತ್ತಿರಲಿಲ್ಲ. ಹೀಗಾಗಿ ಆ ಐಎಎಸ್ ಅಧಿಕಾರಿಗಳಿಗೆ ಟೆಕ್ನಿಕಲ್ ಆಗಿ ಏನೂ ಗೊತ್ತಿಲ್ಲ, ಆ ಕಾರಣದಿಂದ ಆ ಕೈಗಾರಿಕೆ ನಷ್ಟದಲ್ಲಿ ನಡೆಯುತ್ತಾ ಬಂದು ಈಗ ಮುಚ್ಚುವಂತಹ ಪರಿಸ್ಥಿತಿಗೆ ಬಂತು. ಮತ್ತೆ ಅದರ ಮೇಲೆ ಇದುವರೆಗೆ ಏನು ಬರ್ಡನ್ ಇತ್ತು ಎಂದರೆ, ಅಲ್ಲಿ 6 ಸಾವಿರ ನೌಕರರು ಇದ್ದರು, ಬಹುತೇಕ ನೌಕರರನ್ನು ತೆಗೆದುಹಾಕಿ ಈಗ 800 ಮಂದಿಗೆ ಇಳಿಸಿದ್ದೀರಿ, ಅದನ್ನು ನಿರ್ವಹಣೆ ಮಾಡಲು ಹೆಚ್ಚು ವೆಚ್ಚ ಈಗ ಬರುವುದಿಲ್ಲ, ಬಹುಶಃ ನನಗನ್ನಿಸುತ್ತದೆ ಸರ್ಕಾರದವರು 20 ಕೋಟಿ ರೂಪಾಯಿಗಳನ್ನು ಅದಕ್ಕೆ ಕೊಟ್ಟರೆ, ತಾತ್ಕಾಲಿಕವಾಗಿ ಆ ಕೈಗಾರಿಕೆಯನ್ನು ನಡೆಸುವ ಕೆಲಸವನ್ನು ಮಾಡಿದರೆ ಅಲ್ಲಿರುವ ಟೆಕ್ನಿಕಲ್ ನೊಔ ಕೂಡ ಉಳಿಯುತ್ತದೆ, ಮತ್ತೆ ದೇಶದಲ್ಲಿರುವ ಇನ್ನಿತರ ಕಂಪನಿಗಳಿಗೆ ಅಲ್ಲಿಯ ವಸ್ತುಗಳನ್ನು ಸರಬರಾಜು ಮಾಡಲು ಅನುಕೂಲವಾಗುತ್ತದೆ. ಅದನ್ನು ಉಳಿಸುವಂತಹ ಕೆಲಸವೂ ಕೂಡ ಆಗುತ್ತದೆ. ಒಂದು ರೀತಿಯಲ್ಲಿ ನೌಕರರ ಹಾಗೂ ಸರ್ಕಾರದ ಸ್ವಾಮ್ಯದ ಕೈಗಾರಿಕೆಯ ಹಿತಾಸಕ್ತಿಯನ್ನು ಕಾಪಾಡಿಕೊಳ್ಳಲು ಅನುಕೂಲವಾಗುತ್ತದೆ. ಅದು ಲಾಸ್‌ನಲ್ಲಿ ನಡೆಯುತ್ತಿದೆ, ಎಂದು ಮುಚ್ಚಲು ಮುಂದಾಗಿದ್ದೀರಿ. ಆದರೆ ಹುಬ್ಬಳ್ಳಿಯಲ್ಲಿ ಬೆಂಗಳೂರಿನ ಎನ್‌ಜಿಇಎಫ್-ನ ಒಂದು ಅಂಗ ಸಂಸ್ಥೆ ಇದೆ. ಅದು ಇವತ್ತಿನವರೆವಿಗೂ ಲಾಭದಲ್ಲಿದೆ, ಬೆಂಗಳೂರಿನದನ್ನು ಮುಚ್ಚುವುದರ ಜೊತೆಗೆ ಹುಬ್ಬಳ್ಳಿಯದ್ದನ್ನು ಕೂಡ ಮುಚ್ಚಲಿಕ್ಕೆ ಹೊರಟಿದ್ದೀರಿ. ಹುಬ್ಬಳ್ಳಿಯವರು ಏನು ಪಾಪ ಮಾಡಿದ್ದರು. ಏತಕ್ಕೆ ಮುಚ್ಚುತ್ತೀರಿ? ಅಲ್ಲಿರುವ ನೌಕರವರ್ಗದವರನ್ನು ಬೀದಿ ಪಾಲು ಮಾಡುತ್ತಿದ್ದೀರಿ, ಏಕೆ ಬೇಕಾಗಿತ್ತು? ಅದನ್ನಾದರೂ ಉಳಿಸ ಬಹುದಾಗಿತ್ತಲ್ಲಾ? ಅದೂ ಇಲ್ಲ. ಇವತ್ತು ಮಾನ್ಯ ದೇಶಪಾಂಡೆಯವರ ಬಗ್ಗೆ ಅವರೊಬ್ಬ ಎಫಿಷಿಯೆಂಟ್, ಗುಡ್ ಪರ್ಫಾಮರ್, ಹೆಚ್ಚು ಶ್ರಮ ಪಡುತ್ತಾರೆ.(ಪಡುತ್ತಾರೆ ಎಂದು) ಅವರ ಬಗ್ಗೆ ಎಲ್ಲರೂ ಒಳ್ಳೆಯ ಮಾತುಗಳನ್ನು ಹೇಳುತ್ತಾರೆ, ನಾನು ಕೂಡ ಅದನ್ನೇ ಹೇಳುತ್ತೇನೆ, ಅವರನ್ನು ನಾನು ಇವತ್ತೂ ಅಪ್ರಿಷಿಯೇಟ್ ಮಾಡುತ್ತೇನೆ. ಏಕೆ ಅವರು ಇದರ ಬಗ್ಗೆ ಕಾಳಜಿ ತೆಗೆದುಕೊಳ್ಳುತ್ತಿಲ್ಲ ಎಂದು ನನಗೆ ಅನ್ನಿಸುತ್ತಿದೆ. ಸರ್ಕಾರಿ ಸ್ವಾಮ್ಯದ ಇಂಡಸ್ಟ್ರಿ ಇರಬಹುದು. ಖಾಸಗೀ ಇಂಡಸ್ಟ್ರಿಗಳು ನಿಮ್ಮ ಕೈಯಲ್ಲಿ ಇಲ್ಲ. ಇದನ್ನು ನಾನು ಹೇಳಿದ ಮೇಲೆ ಮಾನ್ಯ ದೇಶಪಾಂಡೆಯವರು ಹೇಳುತ್ತಾರೆ. ಇಲ್ಲಿ, ಖಾಸಗೀ ಇಂಡಸ್ಟ್ರಿಯವರು, ನಾವು ಲಾಸ್‌ನಲ್ಲಿದ್ದೇವೆ, ನಮಗೆ ನಡೆಸಿಕೊಂಡು ಹೋಗಲು ಆಗುವುದಿಲ್ಲ ಎಂದು ಹೇಳಿದರೆ ನಾವೇನು ಮಾಡುವುದು ಎನ್ನುವ ಮಾತನ್ನು ಮಾನ್ಯ ದೇಶಪಾಂಡೆಯವರು ಹೇಳುತ್ತಾರೆ. ಏಕೆಂದರೆ, ಹರಿಹರದಲ್ಲಿದ್ದ ಕಿರ್ಲೋಸ್ಕರ್ ಕಾರ್ಖಾನೆ ಮುಚ್ಚಿ ಹೋಯಿತು. ಕಳೆದ 7-8 ತಿಂಗಳುಗಳಿಂದ ಅಲ್ಲಿನ ನೌಕರರಿಗೆ ಪಗಾರವಿಲ್ಲ. ಕೋ-ಆಪರೇಟಿವ್ ಬೇಸಿಸ್‌ನಲ್ಲಿ ನಾವೇ ಶೇರು ಹಾಕಿ, ನಾವೇ ನಡೆಸಿಕೊಂಡು ಹೋಗುತ್ತೇವೆ ಎನ್ನುವವರೆಗೂ ಆ ನೌಕರ ವರ್ಗದವರು ಬಂದಿದ್ದರು. ಅದಕ್ಕೂ ಅವಕಾಶ

ಸಿಗಲಿಲ್ಲ. ಖಾಸಗಿಯವರಿಗೆ ಬರುತ್ತೇವೆ ಎಂದು ಹೇಳಿದರು, ಅದಕ್ಕೂ ಅವಕಾಶ ಸಿಗಲಿಲ್ಲ. ಈ ಪರಿಸ್ಥಿತಿ ಇರುವುದರಿಂದ ಅದು ಮುಚ್ಚಿಹೋಗಿ ಸುಮಾರು 7-8 ತಿಂಗಳುಗಳಿಂದ, ಬಹುಶಃ ಅದು ಒಂದು ವರ್ಷ ಮೇಲೆಯೇ ಆಗಿರಬಹುದು, ಆಗಿನಿಂದ ನೌಕರ ವರ್ಗದವರಿಗೆ ಪಗಾರವಿಲ್ಲದೇ ಅರೆ ಹೊಟ್ಟೆಯಿಂದಿರುವ ಅಥವಾ ಉಪವಾಸ ಬೀಳುವಂಥ ಪರಿಸ್ಥಿತಿ ಮತ್ತು ಆತ್ಮಹತ್ಯೆ ಮಾಡಿಕೊಳ್ಳುವಂಥ ಪರಿಸ್ಥಿತಿ ಹರಿಹರದಲ್ಲಿ ಉಂಟಾಗಿದೆ. ಹರಿಹರ ಪಟ್ಟಣದಲ್ಲಿ ಕಿರ್ಲೋಸ್ಕರ್ ಇಂಡಸ್ಟ್ರಿ ಇದ್ದಿದ್ದರೆ, ಹರಿಹರ ಬೆಳವಣಿಗೆಯಾಗುತ್ತಿತ್ತು. ಆದರೆ ಈಗ ಹರಿಹರ ಸ್ಮಶಾನ ಮೌನದಿಂದ ಕೂಡಿದೆ. ಅಲ್ಲಿ ಎಲ್ಲಾ ವ್ಯವಹಾರಗಳೂ ಬಂದ್ ಆಗಿವೆ. ಬಹುಶಃ, ಮುಂದೆ ಹರಿಹರ ಪಟ್ಟಣ ಇಲ್ಲದೇ ಇರುವಂಥ ಪರಿಸ್ಥಿತಿ ನಿರ್ಮಾಣವಾಗಬಹುದು; ಕೆ.ಜಿ.ಎಫ್. ಆದ ಹಾಗೆ. ಅಂಥ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಹರಿಹರದಲ್ಲಿ ಇವತ್ತು ನೌಕರ ವರ್ಗದವರು ಎಲ್ಲಾ ಹೋರಾಟದ ಸ್ಥೈರ್ಯವನ್ನು ಕಳೆದುಕೊಂಡಿದ್ದು, ಅವರ ಕುಟುಂಬ ವರ್ಗದವರು ಹೆಂಡತಿ ಮಕ್ಕಳು ಬೀದಿಯಲ್ಲಿ ಹೋರಾಟವನ್ನು ಮಾಡುತ್ತಿದ್ದಾರೆ. ಹಾಗಾಗಿ ಇದರ ಬಗ್ಗೆ ಏನು ಕಾಳಜಿ ತೆಗೆದುಕೊಳ್ಳುತ್ತೀರಿ? ನೀವು ಒಂದು ಪಾಲಿಸಿ ಮಾಡಿದಿರಿ, ವಿಧೇಯಕವನ್ನು ತೆಗೆದುಕೊಂಡು ಬಂದಿರಿ. ಇದರಿಂದ ನಿಮಗೆ ಕ್ಲಿಯರೆನ್ಸ್ ಕೊಡುವಂಥಾದ್ದು, ನೀವು ಅಧಿಕಾರ ತೆಗೆದುಕೊಳ್ಳುವಂಥಾದ್ದೆಲ್ಲಾ ಆಗುತ್ತದೆ. ಮುಂದೆ, ಹೊಸದಾಗಿ ಇಂಡಸ್ಟ್ರಿ ಮಾಡಲು ಯಾರು ಮುಂದೆ ಬರುತ್ತಾರೆ ಅವರಿಗೆ ತೊಂದರೆಯಾಗದ ರೀತಿಯಲ್ಲಿ ಮಾಡಲು ಪ್ರಯತ್ನ ಮಾಡುತ್ತಿದ್ದೀರಿ. ನಾನು ಇದನ್ನು ಅಪ್ರೀಷಿಯೇಟ್ ಮಾಡುತ್ತೇನೆ. ಅದರ ಜೊತೆಗೆ, ಈಗಾಗಲೇ ಇರುವಂಥ ಇಂಡಸ್ಟ್ರಿಗಳನ್ನು ಉಳಿಸುವಂಥ ಮತ್ತು ಬೆಳೆಸುವಂಥ ಕೆಲಸವನ್ನು ನೀವು ಮಾಡಬೇಕಾಗಿದೆ. ಹೊಸ ಕೈಗಾರಿಕೆಗಳನ್ನು ತರುವಂಥಾದ್ದರ ಬಗ್ಗೆ ಮತ್ತು ಅವುಗಳ ಬೆಳವಣಿಗೆ ಮಾಡುವ ಬಗ್ಗೆ ನೀವು ಎಷ್ಟು ಕಾಳಜಿ ತೆಗೆದುಕೊಳ್ಳುತ್ತೀರೋ, ಅದಕ್ಕಿಂತ ಹೆಚ್ಚು ಕಾಳಜಿಯನ್ನು ಈಗಿರುವಂಥ ಕೈಗಾರಿಕೆಗಳನ್ನು ಮುಂದುವರೆಸಲು ವಹಿಸಿದರೆ, ಈ ವಿಧೇಯಕವೂ ಬೇಕಾಗಿರಲಿಲ್ಲ, ಮತ್ಯಾವುದೂ ಬೇಕಾಗಿರಲಿಲ್ಲ. ಆದ್ದರಿಂದ, ನಿಮ್ಮ ಎಫಿಷಿಯೆನ್ಸಿ, ಪರ್‌ಫಾರ್ಮೆನ್ಸ್, ಇಂಟೆಲಿಜೆನ್ಸಿ ಏಕೆ ಉಪಯೋಗಕ್ಕೆ ಬರುತ್ತಿಲ್ಲ ಎಂದು ಮಾನ್ಯ ದೇಶಪಾಂಡೆಯವರನ್ನು ನಾನು ಕೇಳಬಯಸುತ್ತಿದ್ದೇನೆ. ಅದರ ಬಗ್ಗೆ ಅವರು ಸ್ಪಷ್ಟೀಕಣ ನೀಡಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತಿದ್ದೇನೆ. ಅದೇ ರೀತಿ, ಮೈಸೂರು ಲ್ಯಾಂಪ್ಸ್ ಪರಿಸ್ಥಿತಿಯೂ ಇವತ್ತು ಹಾಗೇ ಆಗಿದೆ. ಅಲ್ಲಿ ವಿ.ಆರ್.ಎಸ್. ಸಲುವಾಗಿ ನೀವು 131 ಕೋಟಿ ರೂಪಾಯಿಗಳನ್ನು ಕೊಡಲು ತಯಾರಿದ್ದೀರಿ. ಹೀಗೆ ಅದನ್ನು ನೀವು ಮುಚ್ಚಲು ಹೊರಟಿದ್ದೀರಿ. ಆದರೆ ಆ ಕಾರ್ಖಾನೆಗೆ ಸಾಕಷ್ಟು ಆರ್ಡರ್‌ಗಳಿವೆ. ಅದಕ್ಕೆ ಬೇರೆಯವರು ಯಾರೂ ಆರ್ಡರ್ಸ್ ಕೊಡುವುದು ಬೇಡ, ಸರ್ಕಾರದ ಇಲಾಖೆಗಳು ಆರ್ಡರ್ಸ್ ಕೊಟ್ಟರೆ ಸಾಕು, ಮೈಸೂರು ಲ್ಯಾಂಪ್ಸ್ ಕಾರ್ಖಾನೆ ಬದುಕಿಕೊಳ್ಳುತ್ತದೆ. ಆ ಕಡೆ ನಿಮಗೆ ಕಾಳಜಿ ಇಲ್ಲ. ಆದರೆ ಸರ್ಕಾರೀ ಇಲಾಖೆಯವರು ಅದಕ್ಕೆ ತಯಾರಿಲ್ಲ. ಕಮೀಷನ್, ಪರ್ಸ್‌ಂಟೇಜ್ ಅಥವಾ ಮತ್ತೊಂದರ ಸಲುವಾಗಿ ಸರ್ಕಾರೀ ಇಲಾಖೆಗಳವರು ಬೇರೆ ಬೇರೆ ರಾಜ್ಯಗಳಲ್ಲಿರುವಂಥ ಯಾವ್ಯಾವುದೋ ಇಂಡಸ್ಟ್ರಿಗಳಿಗೆ ಆರ್ಡರ್ಸ್ ಕೊಡುತ್ತಾರೆ. ಆದರೆ ನಮ್ಮ ಇಂಡಸ್ಟ್ರಿಯನ್ನು ಉಳಿಸಿ, ಬೆಳೆಸುವ ಬಗ್ಗೆ ಅವರಿಗೆ ಕಾಳಜಿ ಇಲ್ಲ. ಆದ್ದರಿಂದ, ಈ ರೀತಿಯ ನ್ಯೂನತೆಗಳನ್ನು ನೀವು ಸರಿಯಾಗಿ ಹ್ಯಾಂಡಲ್ ಮಾಡಿದರೆ ಇಂಥ ಇಂಡಸ್ಟ್ರಿಗಳನ್ನು ಉಳಿಸಲು ಸಾಧ್ಯವಿದೆ ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತಿದ್ದೇನೆ. ಆದ್ದರಿಂದ, ಎನ್.ಜಿ.ಇ.ಎಫ್. ಗೆ ನೀವು ಸರ್ಕಾರದಿಂದ 20 ಕೋಟಿ

ರೂಪಾಯಿಗಳನ್ನು ಕೊಟ್ಟು, ಅದನ್ನು ಒಂದೆರಡು ವರ್ಷ ನಡೆಸಿದರೆ ಅದು ಪ್ರಾಫಿಟ್‌ಗೆ ಬರುತ್ತದೆ. ಒಂದು ರೆಫರೆನ್ಸ್ ಅನ್ನು ಮಾಡುತ್ತಿದ್ದೇನೆ. ಈ ರೀತಿ ಹೇಳುತ್ತಾ ಹೋದರೆ ಬಹಳಷ್ಟು ಇವೆ. ಆದರೆ ನಾನು 2-3ನ್ನು ಮಾತ್ರ ಹೇಳುತ್ತಿದ್ದೇನೆ. ಎನ್.ಜಿ.ಇ.ಎಫ್‌ಗೆ ಸಂಬಂಧಿಸಿದಂತೆ ಕೇಸು ಬಿ.ಐ.ಎಫ್.ಆರ್. ಮುಂದೆ ನಡೆಯುತ್ತಿದೆ. ಇದನ್ನು ಏನು ಮಾಡಬೇಕು? ಡಿಸಾಲ್ವ್ ಮಾಡಬೇಕೇ? ಮುಂದೆ ಏನು ಮಾಡಬೇಕು? ಇದರ ಬಗ್ಗೆ ಸರ್ಕಾರದ ಪಾಲಿಸಿ ಏನು ಎನ್ನುವ ಬಗ್ಗೆ ಅಲ್ಲಿ ಡಿಸ್ಕಷನ್ ನಡೆಯುತ್ತಿದೆ. ಕೆಲವರು ಅಬ್ಜಕ್ಷನ್ ಮಾಡಿದ್ದಾರೆ. ಅದು ಹಿಯರಿಂಗ್ ನಡೆಯುತ್ತಿದೆ. ನ್ಯೂಕ್ಲಿಯರ್ ಪವರ್ ಕಾರ್ಪೋರೇಷನ್ ಆಫ್ ಇಂಡಿಯಾ ಲಿಮಿಟೆಡ್‌ನವರು ಒಂದು ಅಬ್ಜಕ್ಷನ್ ಫೈಲ್ ಮಾಡಿದ್ದಾರೆ. ಈ ಕಾರ್ಖಾನೆಯನ್ನು ಉಳಿಸಿಕೊಂಡು ಹೋಗಿ, ಇದು ಮುಚ್ಚಿಹೋದರೆ, ಅವರು ಪ್ರೊಡಕ್ಷನ್ ಮಾಡುತ್ತಿದ್ದಂಥ ಐಟಂಗಳನ್ನು ನಮಗೆ ಸಪ್ಲೈ ಮಾಡುವವರು ಯಾರು ಎನ್ನುವಂಥ ಅವರ ಅಪ್ರೆಹೆನ್‌ಷನ್ ಅನ್ನು ವ್ಯಕ್ತಪಡಿಸಿದ್ದಾರೆ. ಇದನ್ನು ಮುಂದುವರೆಸಿಕೊಂಡು ಹೋಗಬೇಕು ಎಂದು ಹೇಳಿದ್ದಾರೆ. ಅವರು ಹೇಳಿರುವ ಒಂದೆರಡು ಮಾತುಗಳನ್ನು ಇಲ್ಲಿ ಹೇಳುತ್ತೇನೆ.

"At present, the NGEF is the only proven source of electric motors of the type and size required by NPCIL. The NPCIL is setting up new projects at Tarapur in Maharastra and Kaiga in Karnataka, for which it needs pumps along with motors. therefore, the orders were placed on M/s. KSD Pumps Ltd., Pune for the pump motor units, further sub-contractor of the manufacture of the electric motors oon NGEF." ನಾವು ಎನ್.ಜಿ.ಇ.ಎಫ್.ಗೆ ಆರ್ಡರ್ಸ್ ಕೊಡಲು ತಯಾರಿದ್ದೇವೆ ಎನ್ನುವುದನ್ನೂ ಅವರು ಹೇಳಿದ್ದಾರೆ. 43.24 ಕೋಟಿ ರೂಪಾಯಿಗಳ ಒಂದು ಆರ್ಡರ್, 3.25 ಕೋಟಿ ರೂಪಾಯಿಗಳ ಮತ್ತೊಂದು ಆರ್ಡರ್, 16.20 ಕೋಟಿ ರೂಪಾಯಿಗಳ ಇನ್ನೊಂದು ಆರ್ಡರ್, ಹೀಗೆ ಮೂರು ಐಟಂಗಳಿಗೆ ಆರ್ಡರ್ ಕೊಡಲು ಅವರು ತಯಾರಿದ್ದಾರೆ.

ಶ್ರೀ ಸಿ. ಭೈರೇಗೌಡ : ಮಾನ್ಯ ಅಧ್ಯಕ್ಷರೆ, ನ್ಯೂಕ್ಲಿಯರ್ ಪವರ್ ಕಾರ್ಪೊರೇಷನ್ನಿನವರು ಎನ್.ಜಿ.ಇ.ಎಫ್.ಗೆ ಅಡ್ವಾನ್ಸ್ ಕೊಟ್ಟಿದ್ದಾರೆ. ಅದನ್ನು ವಾಪಸ್ಸು ಕೊಡಲೂ ಇವತ್ತಿನ ದಿವಸ ಇವರಲ್ಲಿ ಹಣವಿಲ್ಲ. ಪವರ್ ಕೊರತೆಯಿರುವುದರಿಂದ, ಇವತ್ತು ನಾವು ಬೇರೆ ಬೇರೆ ವಿಧಾನಗಳಿಂದ ಪವರ್ ಜನರೇಷನ್ ಮಾಡಬೇಕಾಗುತ್ತದೆ. ನ್ಯೂಕ್ಲಿಯರ್ ಪವರ್ ಕಾರ್ಪೊರೇಷನ್ನಿಗೆ ಬೇಕಾದಂಥ ಮೋಟಾರ್‌ಗಳನ್ನು ಸಪ್ಲೈ ಮಾಡುತ್ತಿದ್ದ ಸಂಸ್ಥೆ ಇದೊಂದೇ. ಅವರಿಗೆ ಇರುವಂಥ ಸಮಸ್ಯೆಯೆಂದರೆ, ಅಲ್ಲಿ ರೇಡಿಯೇಷನ್ ಎಫೆಕ್ಟ್ ಇವೆಲ್ಲಾ ಆಗುವ ಕಾರಣದಿಂದ, ಫಿಟ್ ಅಂಡ್ ಫರ್ಗೆಟ್ ಎನ್ನುವಂತೆ ಒಂದು ಸಲ ಮೋಟಾರ್ ಅನ್ನು ಅಲ್ಲಿ ಇನ್‌ಸ್ಟಾಲ್ ಮಾಡಿ ಆದಮೇಲೆ ಅದರ ಕಡೆ ಹೋಗುವುದಕ್ಕೂ ಸಾಧ್ಯವಿಲ್ಲ. ಏಕೆಂದರೆ ಅಲ್ಲಿ ರೇಡಿಯೇಷನ್‌ಯೆಲ್ಲಾ ಇರುತ್ತದೆ. ಅಂಥ ವಿಶೇಷವಾದಂಥ ಮೋಟಾರುಗಳನ್ನು ತಯಾರು ಮಾಡತಕ್ಕಂಥ ಕಾರ್ಖಾನೆಯೆಂದರೆ ಎನ್.ಜಿ.ಇ.ಎಫ್. ಆ ಮೋಟಾರುಗಳನ್ನು ಬೇರೆಯವರು ತಯಾರು ಮಾಡದೇ ಇರುವ ಕಾರಣದಿಂದ ನ್ಯೂಕ್ಲಿಯರ್ ಪವರ್ ಕಾರ್ಪೊರೇಷನ್ನಿನವರು ಎನ್.ಜಿ.ಇ.ಎಫ್.ಗೆ ಇದನ್ನು ತಯಾರು ಮಾಡಿ ನಮಗೆ ಕೊಡಿ ಎಂದು ಅಡ್ವಾನ್ಸ್ ಕೊಟ್ಟಿದ್ದಾರೆ. ಎನ್.ಜಿ.ಇ.ಎಫ್. ಮುಚ್ಚಿಹೋದರೆ ಮುಂದೆ ಪವರ್ ಜನರೇಷನ್ ಸ್ಥಿತಿ ಏನಾಗುತ್ತದೆ? ನ್ಯೂಕ್ಲಿಯರ್ ಪವರ್

ಸ್ಟೇಷನ್ಸ್ ಹೇಗೆ ಬರುತ್ತವೆ? ಈ ರೀತಿ ಒಂದು ದೊಡ್ಡ ಪ್ರಶ್ನಾರ್ಥಕವಾಗಿರುವಂಥ ಪರಿಸ್ಥಿತಿ ಉಂಟಾಗುತ್ತಿದೆ. ಇದನ್ನೂ ಸಹ ಸರ್ಕಾರ ಗಮನಿಸಬೇಕಾದಂಥ ಅವಶ್ಯಕತೆ ಇದೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ದೇಶಪಾಂಡೆಯವರ ಗಮನಕ್ಕೆ ನಾನು ಒಂದು ವಿಷಯವನ್ನು ತೆಗೆದುಕೊಂಡು ಬರುತ್ತೇನೆ. ನ್ಯೂಕ್ಲಿಯರ್ ಪವರ್ ಕಾರ್ಪೊರೇಷನ್ನಿನವರು ತಮ್ಮ ಅಬ್ಜೆಕ್ಷನ್‌ನಲ್ಲಿ ಒಂದು ಮಾತನ್ನು ಹೇಳಿದ್ದಾರೆ.

"Impact of winding up of the NGEF on NPCIL- Item No.(1) - The company was re-asured by the Government of Karnataka and the NGEF management time and again that the order of NPCIL will be executed either by itself or through its new management ownership if it takes place."

ಅಂದರೆ ಇವರಿಗೆ ಬೇರೆ ಅಲ್ಟರ್ ನೇಟಿವ್, ಇಲ್ಲವೇ ಇಲ್ಲ. ಈಗ ಅವರು ಬೇರೆ ಕಡೆ ಎಲ್ಲಿಗೆ ಹೋಗಬೇಕು? ಹೀಗಾದರೆ ಅವರು ಹೊರದೇಶಕ್ಕೆ ಹೋಗಬೇಕಾಗುತ್ತದೆ. ಇಷ್ಟು ಆರ್ಡರ್ಸ್ ಇರುವಂಥ ಎನ್.ಜಿ.ಇ.ಎಫ್. ಕಾರ್ಖಾನೆಯ ಬಗ್ಗೆ, ಕಾರ್ಖಾನೆಯ ಮೇನೇಜ್‌ಮೆಂಟ್‌ನವರು ಮನಸ್ಸು ಮಾಡಿದರೆ ಮತ್ತು ಸರ್ಕಾರ ಮನಸ್ಸು ಮಾಡಿದರೆ, ಅದಕ್ಕೆ ತಕ್ಷಣವೇ 150 ಕೋಟಿ ರೂಪಾಯಿಗಳಿಗಿಂತ ಹೆಚ್ಚಿನ ಆರ್ಡರ್ಸ್ ಸಿಗುತ್ತದೆ. ಆದರೆ ಈಗ ಯಾವ ಹೊಸ ಆರ್ಡರ್ಸ್ ಅನ್ನೂ ಅಕ್ಸೆಪ್ಟ್ ಮಾಡಲು ತಯಾರಿಲ್ಲ. ಇದು ಎನ್.ಜಿ.ಇ.ಎಫ್.ನ ಪರಿಸ್ಥಿತಿಯಾಗಿದೆ. ಮಾನ್ಯ ದೇಶಪಾಂಡೆಯವರು ಇದಕ್ಕೆ ಏಕೆ ಮನಸ್ಸು ಮಾಡಿಲಿಲ್ಲ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಆದ್ದರಿಂದ, ಎನ್.ಜಿ.ಇ.ಎಫ್. ಅನ್ನು ಉಳಿಸುವಂಥ ಕೆಲಸವನ್ನು ಸರ್ಕಾರ ಈ ತಕ್ಷಣ ಮಾಡಬೇಕು. ಸರ್ಕಾರದಿಂದ ಅವರಿಗೆ 20 ಕೋಟಿ ರೂಪಾಯಿಗಳನ್ನು ಕೊಟ್ಟರೆ ಅದು ಉಳಿಯುತ್ತದೆ. ಅದರಿಂದ ಎಲ್ಲರಿಗೂ ಅನುಕೂಲವಾಗುತ್ತದೆ ಮತ್ತು ನಮ್ಮ ನಾಡಿನ ಒಂದು ಪ್ರಮುಖ ಉದ್ದಿಮೆ ಉಳಿಯುತ್ತದೆ ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತಿದ್ದೇನೆ. ಅದಕ್ಕೂ ಒಬ್ಬರು ಅಧ್ಯಕ್ಷರನ್ನು ಹಾಕಿದ್ದಾರೆ. ಕಾರ್ಖಾನೆ ಲಾಸ್‌ನಲ್ಲಿದೆ ಎಂದು ಹೇಳುವುದು, ಆದರೆ ನಿಗಮ ಮಂಡಳಿಗಳಿಗೆ ಅಧ್ಯಕ್ಷರನ್ನು ನೇಮಕ ಮಾಡುವ ಹಾಗೆ ಲಾಸ್‌ನಲ್ಲಿರುವ ಇದಕ್ಕೂ ಅಧ್ಯಕ್ಷರನ್ನು ನೇಮಿಸುವುದು. ಅವರಿಗೊಂದು ಕಾಂಟೆಸ್ಸಾ ಕಾರು, ಸ್ಟೇಟಸ್ಸು ಕೊಡುವಂಥಾದ್ದು ಆಗುತ್ತಿದೆ. ಮುಚ್ಚಲು ಹೊರಟಿರುವ ಈ ಎನ್.ಜಿ.ಇ.ಎಫ್‌ಗೂ ಒಬ್ಬರು ಅಧ್ಯಕ್ಷರನ್ನು ನೇಮಿಸಿದ್ದಾರೆ. ಈ ರೀತಿಯ ಪರಿಸ್ಥಿತಿ ನಮ್ಮ ರಾಜ್ಯದಲ್ಲಿದೆ. ಇದರ ಬಗ್ಗೆ ಮಾನ್ಯ ದೇಶಪಾಂಡೆಯವರ ಕಳಕಳಿ ಏನು ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಕೇಳಬಯಸುತ್ತಿದ್ದೇನೆ. ಪಟ್ಟಿ ಮಾಡುತ್ತಾ ಹೋದರೆ, ಈ ರೀತಿಯ ಉದ್ದಿಮೆಗಳು ಇನ್ನೂ ಬಹಳಷ್ಟು ಇವೆ. ಆದರೆ ಪ್ರಮುಖವಾದಂಥ ಹರಿಹರದ ಕಿರ್ಲೋಸ್ಕರ್, ಎನ್.ಜಿ.ಇ.ಎಫ್, ಮೈಸೂರು ಲ್ಯಾಂಪ್ಸ್‌ಗಳ ಬಗ್ಗೆ ನಾನು ಹೇಳಿದ್ದೇನೆ. ಶುಗರ್ ಫ್ಯಾಕ್ಟರಿಗಳ ಲೈಸೆನ್ಸ್ ವಿಚಾರದಲ್ಲಿ ಮಾನ್ಯ ಶಿವಾನಂದ ಪಾಟೀಲರು ಹೇಳಿದರು.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರ ಮುಖಾಂತರ ಮಾನ್ಯ ಸಚಿವರ ನಜರಿಗೆ ನಾನು ಒಂದು ವಿಚಾರವನ್ನು ತರುತ್ತೇನೆ. ಹೇಗೆ ಅಧಿಕಾರಿಗಳು ಹಾಳು ಮಾಡುತ್ತಾರೆ ಎನ್ನುವುದಕ್ಕೆ ಒಂದು ಉದಾಹರಣೆಯನ್ನು ಹೇಳುತ್ತೇನೆ. ಇವರು ಬರೀ ನೌಕರದಾರರ ಮೇಲೆಯೇ

ಹೇಳುತ್ತಾರೆ. ಗದುಗಿಗೆ ಶ್ರೀ ಎ.ಆರ್. ಪಟೇಲ್ ಎನ್ನುವ ಡಿ.ಸಿ. ಇದ್ದಾರೆ. ಅವರು ಮೈಸೂರು ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ಕಾರ್ಖಾನೆಗೆ ಅಧ್ಯಕ್ಷರಾಗಿದ್ದರು. ಹಿಂದಿನ ಸಲ ನನ್ನನ್ನು ಸಾರ್ವಜನಿರ ಉದ್ದಿಮೆಗಳ ಸಮಿತಿಗೆ ಸದಸ್ಯನನ್ನಾಗಿ ಮಾಡಿದ್ದರಿಂದ ಈ ವಿಷಯ ನನಗೆ ತಿಳಿಯಿತು. ಅವರು ಅಧ್ಯಕ್ಷರಾಗಿದ್ದಾಗ, 6 ಕೋಟಿ ರೂಪಾಯಿಗಳ ಲಾಭವನ್ನು ಮಾಡಿ, ಅದನ್ನು ಬ್ಯಾಂಕ್‌ನಲಿಟ್ಡೆಪಾಸಿಟ್ ಮಾಡಿ ಹೋಗಿದ್ದರು. ಅವರ ನಂತರ ಬಂದಂಥ ಒಬ್ಬ ಎಂ.ಡಿ. ಆ ಕಾರ್ಖಾನೆಯನ್ನು ಹಾಳು ಮಾಡಿ ಹೋಗಿಬಿಟ್ಟರು. ನೌಕರರು ಅರ್ಜಿ ಕೊಡುತ್ತಾರೆ ನಾವು ಕಷ್ಟಪಟ್ಟು ದುಡಿಯುತ್ತೇವೆ, ಇಂಥವರು ಬಂದು ಹೀಗೆ ಹಾಳುಮಾಡುತ್ತಾರೆ ಎಂದು ಆ ನೌಕರರು ಅರ್ಜಿ ಕೊಡುತ್ತಾರೆ. ಈ ರೀತಿಯೂ ನಡೆಯುತ್ತಿದೆ. ಬರೀ ನೌಕರರಿಂದಲೇ ಕಾರ್ಖಾನೆಗಳು ಹಾಳಾಗುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಆಗಲೇ ನಾನು, ಮಾನ್ಯ ಶಿವಾನಂದ ಪಾಟೀಲರು ಎತ್ತಿದ ಪ್ರಶ್ನೆಯ ಬಗ್ಗೆ ಹೇಳುತ್ತಿದ್ದೆ. ಪ್ರಮುಖವಾಗಿ ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿ ಎಂದು ಮಾಡಲಾಗಿದೆ ಎಂದು ತಾವು ಹೇಳಿದಿರಿ. ಹಿಂದೆ ಇದ್ದಂಥ ತೊಂದರೆಗಳು ಈಗ ಆಗಬಾರದು ಎನ್ನುವ ಉದ್ದೇಶದಿಂದ ಅದನ್ನು ಮಾಡಿದ್ದೀರಿ. ಆದರೆ ಇದನ್ನು ಮಾಡುವುದರಿಂದ ಇನ್ನೂ ಹೆಚ್ಚಿನ ತೊಂದರೆಯಾಗುತ್ತದೆ ಎಂದು ನನಗನ್ನಿಸುತ್ತಿದೆ. ಈ ಸಮಿತಿಯಲ್ಲಿ 11 ಜನ ಸದಸ್ಯರಿದ್ದಾರೆ. ಈ 11 ಜನ ಸದಸ್ಯರಲ್ಲಿ ನಾನ್-ಅಫಿಷಿಯಲ್ ಮೆಂಬರ್ ಅಂದರೆ ರಾಜಕೀಯವಾಗಿ ಹೇಳುವಂಥ ವಿಚಾರ, ಬೃಹತ್ ಪ್ರಮಾಣದ ಕೈಗಾರಿಕಾ ಸಚಿವರು ....

ಶ್ರೀ ಆರ್.ವಿ. ದೇಶಪಾಂಡೆ : ನಾನೊಂದು ವಿಚಾರವನ್ನು ತಮ್ಮ ಗಮನಕ್ಕೆ ತರುತ್ತೇನೆ. ಅದರ ಅವಶ್ಯಕತೆ ಬರುವುದಿಲ್ಲ. ನಾವು ಒಂದು ಅಮೆಂಡ್‌ಮೆಂಟ್ ಮೂವ್ ಮಾಡುತ್ತಿದ್ದೇವೆ. ಹೈ ಪವರ್ ಕಮಿಟಿಯನ್ನು ಕಾನ್ಸ್ಟಿಟ್ಯೂಟ್ ಮಾಡಲು ನಾವು ಅಮೆಂಡ್‌ಮೆಂಟ್ ಮಾಡುತ್ತಿದ್ದೇವೆ ಮತ್ತು ನಾವು ರೂಲ್ಸ್‌ನಲ್ಲಿ ಪ್ರಾವಿಷನ್ ಮಾಡುತ್ತೇನೆ. ಏಕೆಂದರೆ ಹೈ ಪವರ್ ಕಮಿಟಿಯನ್ನು ಈಗ ಮಹಾರಾಷ್ಟದಲ್ಲಿ, ಗುಜರಾತ್‌ನಲ್ಲಿ, ಆಂಧ್ರಪ್ರದೇಶದಲ್ಲಿ ಹಾಗೂ ಕೇರಳದಲ್ಲಿ under the Chairmanship of Chief Minister ಕಾನ್ಸ್‌ಟಿಟ್ಯೂಟ್ ಮಾಡಿದ್ದಾರೆ. ಅದರಿಂದಾಗಿ ಇದಕ್ಕೆ ಹೆಚ್ಚಿನ ಕ್ಲಾರಿಟಿ ಬರುತ್ತದೆ. We are thinking to do about it. ಹಾಗಾಗಿ ಅದು ಡಿಲೀಟ್ ಆಗಿ, I will move it.

ಶ್ರೀ ಜಗದೀಶ್ ಶೆಟ್ಟರ್ : ನಾನು ಹೇಳುವುದು ಏನೆಂದರೆ, ಚೀಫ್ ಮಿನಿಸ್ಟರನ್ನು ಆದರೂ ಮಾಡಿ ಅಥವಾ ಬೇರೆ ಯಾರನ್ನಾದರೂ ಚೇರ್‌ಮನ್ ಮಾಡಿ. ನೀವು ಇಲ್ಲಿ ಈಗಿನ ಪ್ರಪೋಸಲ್ ಏನು ಇಟ್ಟಿದ್ದೀರಿ ಅದನ್ನು ನಾನು ಹೇಳುತ್ತೇನೆ. ಚೀಫ್ ಮಿನಿಸ್ಟರ್ ಅದಕ್ಕೆ ಚೇರ್‌ಮನ್ ಅಂದು ತಿಳಿದುಕೊಳ್ಳಿರಿ. ಕಡೆಗೆ ಕೈಗಾರಿಕಾ ಮಂತ್ರಿಗಳು ನೀವು ಅಧರ ಮೆಂಬರ್ ಎಂದು ಇದ್ದೇ ಇರುತ್ತೀರಿ. ಹಾಗೆಯೇ ಅದರಲ್ಲಿ ಮೂಲ ಸೌಲಭ್ಯ ಅಭಿವೃದ್ಧಿ ಸಚಿವರು ಅದರಲ್ಲಿ ಮೆಂಬರ್, ಪ್ರವಾಸೋದ್ಯಮ ಸಚಿವರು ಅವರ ಮೆಂಬರ್, ರಾಜ್ಯ ಮಾಹಿತಿ ತಂತ್ರಜ್ಞಾನ ಸಚಿವರು ಅವರು ಮೆಂಬರ್, ಕೃಷಿ ಸಚಿವರು, ತೋಟಗಾರಿಕೆ ಸಚಿವರು ಪಹೀಗೆ ಆರು ಜನ ಮಾನ್ಯ ಸಚಿವರುಗಳು ಮೆಂಬರ್ ಆಗಿ ಇದ್ದೀರಿ. ಆಮೇಲೆ ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿ, ವಾಣಿಜ್ಯ, ಅರಣ್ಯ, ಕರ್ನಾಟಕ ವಿದ್ಯುಚ್ಛಕ್ತಿ ಪ್ರಸರಣ ನಿಗಮದವರು ನಂತರ ಕೈಗಾರಿಕೆ ಇಲಾಖೆಯ ಕಾರ್ಯದರ್ಶಿ ಇವರು ಒಟ್ಟು 5 ಜನ ಇದ್ದಾರೆ. ಇಲ್ಲಿ ಕೂಡ ಮತ್ತಷ್ಟು ಮೆಜಾರಿಟಿ ನಿಮ್ಮದೇ.

ಚೀಫ್ ಮಿನಿಸ್ಟರ್‌ನ್ನು ಕೂಡ ಇದರಲ್ಲಿ ಇನ್‌ಕ್ಲೂಡ್ ಮಾಡುವುದರಿಂದ ಒಟ್ಟು 7 ಜನ ಮಂತ್ರಿಗಳು ಇದರಲ್ಲಿ ಇರುತ್ತೀರಿ. ನಾನು ಹೇಳುವಂಥಾದ್ದು 11 ಮಂದಿಯೊಳಗೆ 6 ಜನ ಮಿನಿಸ್ಟರ್‌ಗಳೇ ಈ ಕಮಿಟಿಯೊಳಗೆ ಇದ್ದಾರೆ. ಇವತ್ತು ಮಾನ್ಯ ಶಿವಾನಂದ ಪಾಟೀಲರು ಕ್ವೊಶ್ಚನ್ ಏನು ರೈಸ್ ಮಾಡಿದರೋ, ಅವರು ಏನು ಕೋಆಪರೇಟಿವ್ ಶುಗರ್ ಫ್ಯಾಕ್ಟರಿ ಸಲುವಾಗಿ ಅಪ್ಲಿಕೇಷನ್ ಕೊಟ್ಟಿದ್ದಾರೆ, ಸೆಕ್ರೆಟರಿ ಮುಂತಾದ ಎಲ್ಲಾ ಕಡೆ ಅಡ್ಡಾಡಿ ಸಾಕಾಗಿದೆ ಎಂದು ಹೇಳಿದರು. ಆದರೆ ಪೊಲಿಟಿಕಲಿ ಇನ್‌ಫ್ಲುಯೆನ್ಸಿ ಇದ್ದರೆ ಇವತ್ತು ಅವವು ಶುಗರ್ ಫ್ಯಾಕ್ಟರಿಯನ್ನು ನಡೆಸಿಕೊಂಡು ಹೋಗುವುದಕ್ಕೆ ತಯಾರಾಗಿದ್ದಾರೆ. ಶೇರ್ ಅಮೌಂಟ್ ಕೂಡಿಸಿದ್ದಾರೆ, ಏನೇನು ಬೇಕು ಎಲ್ಲವನ್ನೂ ಮಾಡಿದ್ದಾರೆ. ಸರ್ಕಾರದಿಂದ ಅವರಿಗೆ ಏನೂ ಬರ್ಡನ್ ಇಲ್ಲ. ಅಂಥಾದ್ದನ್ನು ನಡೆಸಲಿಕ್ಕೆ ತಯಾರಾಗಿ ನಮಗೆ ಕ್ಲಿಯರೆನ್ಸ್ ಕೊಡಿ ಎಂದು ಕೇಳಿದರೆ, ನೀವು ಕೊಡಲಿಕ್ಕೆ ತಯಾರಿಲ್ಲ. ಶ್ರೀ ಶಿವಾನಂದ ಪಾಟೀಲರು ಮತ್ತು ಅವರ ಮಿತ್ರರು ಯಾವಾಗ ಅಪ್ಲಿಕೇಷನ್‌ನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ, ಫೆಬ್ರವರಿ, 2002ರಲ್ಲಿ ಕೊಟ್ಟಿದ್ದಾರೆ. ಶ್ರೀ ಎಸ್.ಎಸ್. ಪಾಟೀಲರು ಆಗಲೇ ಹೇಳಿದ ಹಾಗೆ, ಉಳಿದವರಿಗೆ ಏನು ಕ್ಲಿಯರೆನ್ಸ್ ಸಿಕ್ಕಿದೆಯಲ್ಲಾ, ಅವರು ಅರ್ಜಿ ಕೊಟ್ಟಿದ್ದು ಯಾವಾಗ ಎಂದರೆ ಏಪ್ರಿಲ್ ತಿಂಗಳು 2002ರಲ್ಲಿ ಇವರು ಕೊಟ್ಟಿದ್ದು ಫೆಬ್ರವರಿಯಲ್ಲಿ ನಿಮ್ಮದು ಇದು ಯಾವ ಕೈಗಾರಿಕಾ ನೀತಿ? ಇಲ್ಲಿ ಪೊಲಿಟಿಕಲ್ ಇನ್‌ಫ್ಲ್ಲುಯೆನ್ಸ್ ಆಗಿಲ್ಲವೇ? ರಾಜಕೀಯವಾಗಿ ಪ್ರಭಾವ ಯಾರದ್ದು ಇದೆ ಅವರಿಗೆ ಮಾತ್ರ ನೀವು ಕೊಡುತ್ತಿದ್ದೀರಿ. ಇನ್ನು ಈ ಹೈ ಪವರ್ ಕಮಿಟಿ ಏನು ಮಾಡುತ್ತಿದ್ದೀರಿ ಅಲ್ಲಿಗೆ ಅಪ್ಲಿಕೇಷನ್ ಹೋದರೆ ಏನಾಗುತ್ತದೆ ಎಂದರೆ ಬೇರೆ ಯಾರೋ ನಾನ್-ಪೊಲಿಟಿಕಲ್ ಪರ್ಸನ್ಸ್ ಇದ್ದವರು ಅಥವಾ ನಿಮಗೆ ಆಗದೇ ಇದ್ದವರ ಫೈಲ್ ಪೆಂಡಿಂಗ್‌ನಲ್ಲಿ ಇರುತ್ತದೆ ಮತ್ತು ನಿಮಗೆ ಯಾರು ಬೇಕೋ ಅಂಥವರ ಫೈಲ್‌ನ್ನು ಕ್ಲಿಯರೆನ್ಸ್ ಮಾಡುತ್ತೀರಿ. ಇವತ್ತು ಆಫೀಸ್‌ನಲ್ಲಿ ಫೈಲ್ ಇದ್ದಾಗ ಅದರ ಹಣೆಬರಹ ಇಷ್ಟಿದೆ. ನಾಳೆ ಪೊಲಿಟಿಕಲ್ ಪರ್ಸನ್ಸ್ ನೀವೆಲ್ಲರೂ ಈ ಕಮಿಟಿಯಲ್ಲಿ ಬಂದು ಕುಳಿತರೆ ಇನ್ನೇನು ಆಗುತ್ತದೆ? ಇದರಿಂದ ಏನೂ ಪ್ರಯೋಜನವಾಗುವುದಿಲ್ಲ. ಆದ್ದರಿಂದ ಹಳೆಯ ಪದ್ಧತಿ ಮತ್ತು ಈ ಪದ್ಧತಿಯಲ್ಲಿ ಏನೂ ಬದಲಾವಣೆ ಇಲ್ಲ. ಈ ಹೊಸ ಪದ್ಧತಿಯಲ್ಲಿ ನೀವೆಲ್ಲರೂ ಕೂಡ ಇನ್ನೂ ಹೆಚ್ಚಿಗೆ ಅಧಿಕಾರ ತೆಗೆದುಕೊಂಡಿರಿ ಅಷ್ಟೆ. ಈ ಕಮಿಟಿಗೆ ಎಲ್ಲಾ ಮಂತ್ರಿಗಳನ್ನು ತೆಗೆದುಕೊಂಡು ನಾಳೆ ಮುಖ್ಯಮಂತ್ರಿಗಳನ್ನು ತೆಗೆದುಕೊಂಡು ಇದಕ್ಕೆ ಅಧ್ಯಕ್ಷರನ್ನಾಗಿ ಮಾಡಿ ಇನ್ನೂ ಹೆಚ್ಚಿಗೆ ಅಧಿಕಾರಯುತವಾಗಿ ನೀವು ಯಾರಿಗೆ ಕೊಡಬಹುದು, ಯಾರನ್ನು ಬಿಡಬಹುದು ಎನ್ನುವಂಥಾದ್ದು ಆಗುತ್ತದೆಯೇ ಹೊರತು, ನಾಳೆ ಯಾವುದಕ್ಕೂ ಯಾರಿಗೂ ಒಳ್ಳೆಯದಾಗುವುದಿಲ್ಲವೆನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ನೀವು ಏನೋ ಇದು ಬಹಳ ಒಳ್ಳೆಯ ಬಿಲ್ ಎಂದು ಹೇಳಿಕೊಂಡು ಅದನ್ನು ಜಾರಿಗೆ ತರುವುದಕ್ಕೆ ಹೊರಟಿದ್ದೀರಿ. ಆದರೆ ಅದರಿಂದ ಏನೂ ಒಳ್ಳೆಯದು ಆಗುವುದಿಲ್ಲ. ಒಂದು ಪೊಲಿಟಿಕಲ್ ಡಿಶಿಷನ್ ಆಗುವುದಕ್ಕೆ ಚಲೋ ಆಗುತ್ತದೆ. ಶ್ರೀ ಶಿವಾನಂದ ಪಾಟೀಲರು ಅಪ್ಲಿಕೇಷನ್ ಕೊಟ್ಟು ಎಷ್ಟು ದಿವಸಗಳಾಯಿತು? ಅದಕ್ಕೆ ಏನಾದರೂ ಸ್ಪಷ್ಟೀಕರಣ ಕೊಟ್ಟು ಬೇಗ ಕ್ಲಿಯರೆನ್ಸ್ ಮಾಡುತ್ತೀರಾ? ಸರ್ಕಾರದಿಂದ ಇಂಡಸ್ಟ್ರಿಯನ್ನು ಬೆಳೆಸಬೇಕೆಂದು ಹೇಳುತ್ತೀರಿ. ಈಗ ಮುಚ್ಚುವುದಕ್ಕೆ ಹೊರಟಿರುವಂಥ ಎಂಡಸ್ಟ್ರಿಗಳನ್ನು ಉಳಿಸಿಕೊಳ್ಳುವುದಕ್ಕೆ ನಿಮ್ಮಿಂದ ಸಾಧ್ಯವಾಗಿಲ್ಲ. ಶ್ರೀ ಶಿವಾನಂದ ಪಾಟೀಲರು ಹೊಸದಾಗಿ ಏನೋ ಒಂದು ಉತ್ಸಾಹ ತೆಗೆದುಕೊಂಡು ಆ ಭಾಗದ ರೈತರಿಗೆ ಅನುಕೂಲ ಮಾಡಬೇಕೆನ್ನುವ ಉದ್ದೇಶದಿಂದ ಹೊರಟರೆ ಅವರಿಗೆ ಡಿಸ್‌ಕರೇಜ್ ಮಾಡುವಂಥಾದ್ದು

ಸರಿಯಲ್ಲ. ಇಂಡಸ್ಟ್ರಿ ಮಾಡುವುದಕ್ಕೆ ಮುಂದೆ ಬರತಕ್ಕಂಥವರಿಗೆ ನೀವು ಹೆಚ್ಚಿನ ಪ್ರೋತ್ಸಾಹ ಕೊಡಿ. ಬೇರೆ ಬೇರೆ ದೇಶದಿಂದ ಕೈಗಾರಿಕೋದ್ಯಮಿಗಳನ್ನು ಕರೆಯುವುದಕ್ಕೆ ಹೊರಟಿದ್ದೀರಿ. ನಮ್ಮ ದೇಶದಲ್ಲಿಯೇ ಬಹಳಷ್ಟು ಜನ ಇಂಡಸ್ಟ್ರಿಗಳನ್ನು ಪ್ರಾರಂಭ ಮಾಡಿ ರೈತರಿಗೆ ಸಹಾಯ ಮಾಡುವುದಕ್ಕೆ ತಯಾರಿದ್ದಾರೆ. ಅವರು ಕೋಟಿಗಟ್ಟಲೆ ಶೇರು ಹಣವನ್ನು ಕೂಡಿಸಿದ್ದಾರೆ. ಅಂಥವರಿಗೆ ನೀವು ಪ್ರೋತ್ಸಾಹ ಕೊಡುವುದಿಲ್ಲ. ಗ್ಲೋಬಲ್ ಇನ್‌ವೆಸ್ಟ್‌ಮೆಂಟ್ ಮೀಟ್, ಇವನ್ನೆಲ್ಲಾ ಬೇರೆಯವರಿಗೆ ನೀವು ಮಾಡುತ್ತೀರಿ. ವಿದೇಶಿ ಮಂದಿಯನ್ನು ಉದ್ಧಾರ ಮಾಡುವುದಕ್ಕೆ ಹೊರಟಿದ್ದೀರಾ? ವಿದೇಶಿ ಕೈಗಾರಿಕಾ ಉದ್ದಿಮೆಗಳನ್ನು ಉದ್ದಾರ ಮಾಡುವುದಕ್ಕೆ ಹೊರಟಿದ್ದೀರಾ? ಇಲ್ಲಿದ್ದವರನ್ನೇ ನೀವು ಉದ್ಧಾರ ಮಾಡಿ. ಇಲ್ಲಿದ್ದಂಥವರಿಗೆ ಪ್ರೋತ್ಸಾಹ ಕೊಡಿ. ಇಲ್ಲದಿದ್ದರೆ ಏನೂ ಪ್ರಯೋಜನವಾಗುವುದಿಲ್ಲ. ಅದರ ಸಲುವಾಗಿ ಈ ಬಿಲ್ ಬಗ್ಗೆ ಹೇಳುವುದಾದರೆ, ಇದರಲ್ಲಿ ನಿಮಗೆ ಪೊಲಿಟಿಕಲ್ ಪವರ್‌ನ್ನು ಹೆಚ್ಚಿಗೆ ಮಾಡಿಕೊಳ್ಳುವುದಕ್ಕೆ ಇದನ್ನು ತಂದಿದ್ದೀರಿಯೇ ಹೊರತು ಬೇರೆ ಯಾವುದೇ ಸದುದ್ದೇಶ ಇದರಲ್ಲಿ ಇಲ್ಲ, ಹೀಗಾಗಿ ಈ ಬಿಲ್‌ನ್ನು ವಿರೋದ ಮಾಡಬೇಕಾಗುತ್ತದೆ ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ.

ಶ್ರೀ ಶಿವಾನಂದ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಗವರ್ನಮೆಂಟ್ ಆಫ್ ಇಂಡಿಯಾ ಶುಗರ್ ಫ್ಯಾಕ್ಟರೀಸ್ ಬರಲಿ ಎಂದು ಡಿ-ರೆಗ್ಯುಲೇಟ್ ಮಾಡಿತು. ಯಾರ್ಯಾರು ಎಷ್ಟೆಷ್ಟು ದುಡ್ಡು ಕೊಟ್ಟು ಲೈಸೆನ್ಸ್ ತರುತ್ತಿದ್ದರು ಅದನ್ನು ಒಂದಾನೊಂದು ಕಾಲದಲ್ಲಿ ಒಬ್ಬರು ಪ್ರೈಮ್ ಮಿನಿಸ್ಟರ್ ಅವರು ಒಳ್ಳೆಯ ಥಿಂಕಿಂಗ್ ಮಾಡಿ ಡಿ-ರೆಗ್ಯುಲೇಟ್ ಮಾಡಿದರು. ಇದನ್ನು ನೀವು ಏನು ಮಾಡುವುದಕ್ಕೆ ಹೊರಟಿದ್ದೀರಿ? I had been to you several times.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ದಯವಿಟ್ಟು ಒಂದು ನಿಮಿಷ ಶ್ರೀ ಶಿವಾನಂದರವರೇ, ತಾವು ಸೆವೆರಲ್ ಟೈಮ್ಸ್ ಬಂದಿದ್ದು ನಿಜ, ನಿಮಗೆ ಸಹಾಯ ಮಾಡಿರಿ ಎಂದು ನಿಮ್ಮ ಮುಂದೆ ಸಹ ಫೋನ್ ಮಾಡಿ ಹೇಳಿದ್ದೂ ನಿಜ. ಹೌದಲ್ಲವೇ? ಎರಡೂ ನಿಜ ಇದೆಯಲ್ಲವೇ?

ಶ್ರೀ ಶಿವಾನಂದ ಎಸ್. ಪಾಟೀಲ್ : ಅಲ್ಲಿ ಏನು ಮಾಡಲಿಕ್ಕೆ ಹತ್ತಿದ್ದೀರಿ?

SRI. R.V. DESHPANDE: I will reply it.

ಶ್ರೀ ಶಿವಾನಂದ ಎಸ್. ಪಾಟೀಲ್ : ಮಾನ್ಯ ಸಿಂಧ್ಯಾ ಅವರು ಹೇಳಿದ್ದನ್ನು ನೋಡಬೇಕಾದರೆ, ಆ ರಿಮಾರ್ಕ್ಸ್‌ನ್ನಂತೂ ನಾವು ನಿಮ್ಮ ಮೇಲೆ ಪಾಸ್ ಮಾಡಿಲ್ಲ. ಆದರೆ ಇಷ್ಟು ಪೊಲಿಟಿಕಲ್ ಯೂಸ್ ಮಾಡಿಕೊಳ್ಳಬಾರದು.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದ್ದು ಸಚಿವರಿಗೆ ಅರ್ಥ ಅಂತ್ಯವಾಯಿತೆ. ಶ್ರೀ ಶಿವಾನಂದ ಪಾಟೀಲರು ಮಾತನಾಡುವಾಗ, ಮಧ್ಯದಲ್ಲಿ ಸಚಿವರು ಎದ್ದು ಹೇಳಿದರು. ಮಧ್ಯದಲ್ಲಿ ಎದ್ದರು ತಾವು ಅವರಿಗೆ ಹೇಳಿ.

ಅಧ್ಯಕ್ಷರು : ಬೇರೆಯವರೂ ಸಹ ಮಾತನಾಡುವುದಕ್ಕೆ ಇದ್ದಾರೆ. ಅವರೆಲ್ಲ ಮಾತನಾಡಿದ ನಂತರ ತಾವು ಕೊನೆಯಲ್ಲಿ ಉತ್ತರ ಕೊಡಿ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ಶ್ರೀ ಶಿವಾನಂದ ಪಾಟೀಲರು ಏನು ಒಂದು ವಿಚಾರ ಹೇಳಿದರು, ಅದಕ್ಕೆ ಅವರು ಪುನಃ ಪ್ರಸ್ತಾಪ ಮಾಡಿದಾಗ ಅವರು ಹಾಗೆ

ಹೇಳಿದ್ದು.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಅದಕ್ಕೆ ನಾನು ಹೇಳುವಂತಹದ್ದು ಇದೊಂದು ರಾಜಕೀಯ ಕಮಿಟಿ, ಹೈ ಪವರ್ ಕಮಿಟಿ ಎಂದು ಏನು ಮಾಡುವುದಕ್ಕೆ ಹೊರಟಿದ್ದಾರೆ, ಇದು ಪೊಲಿಟಿಕಲ್ ಹೈ ಪವರ್ ಕಮಿಟಿ ಅಷ್ಟೇ ಹೊರತು ಇದಕ್ಕೆ ಬೇರೆ ಅರ್ಥವೇ ಇಲ್ಲ. ಮತ್ತೊಂದು ಇಲ್ಲಿ, 'ಅಪೀಲ್' ಎಂದು ಒಂದು ಪ್ರಾವಿಜನ್ ಹೇಳಿದ್ದೀರಿ.

"ಈ ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆಯು ಸಮಿತಿ ರಾಜ್ಯ ಮಟ್ಟದ ಏಕ ಗವಾಕ್ಷಿ ಒಪ್ಪಿಗೆ ನೀಡಿಕೆ ಸಮಿತಿ, ಜಿಲ್ಲಾಮಟ್ಟದ ಒಪ್ಪಿಗೆ ನೀಡಿಕೆ ಸಮಿತಿಯು ಯೋಜನೆಯನ್ನು ಅನುಮೋದಿಸದಿರುವ ತೀರ್ಮಾನದಿಂದಾಗಿ ಬಾಧಿತನಾದ ಯಾವ ಒಬ್ಬ ವ್ಯಕ್ತಿಯು ಸಮಿತಿಯ ತೀರ್ಮಾನವನ್ನು ಸ್ವೀಕರಿಸಿದ ದಿನಾಂಕದಿಂದ 30 ದಿನಗಳೊಳಗಾಗಿ ನೇಮಿಸಬಹುದಾದಂಥ ಅಪೀಲು ಪ್ರಾಧಿಕಾರಕ್ಕೆ ಅಪೀಲು ಮಾಡಿಕೊಳ್ಳಬಹುದು ಮತ್ತು ಅಪೀಲುಗಳಿಗೆ ಸಂಬಂಧಪಟ್ಟಂತೆ ಬೇರೆ ಬೇರೆ ಹಂತದ ಸಮಿತಿಗಳ ತೀರ್ಮಾನದ ಸಂಬಂಧದಲ್ಲಿ ಸಲ್ಲಿಸುವ ಅಪೀಲುಗಳ ಬಗ್ಗೆ ಬೇರೆ ಬೇರೆ ಅಪೀಲು ಪ್ರಾಧಿಕಾರಗಳನ್ನು ನೇಮಿಸಬಹುದು."

ಈ ಅಪೀಲು ಪ್ರಾಧಿಕಾರವನ್ನು ನೇಮಕ ಮಾಡುವವರು ಯಾರು? ಅದಕ್ಕೆ ಇರುವಂಥವರು ಯಾರು? ಅದರ ಬಗ್ಗೆ ಇಲ್ಲಿ ಎಲ್ಲೂ ಕ್ಲಿಯರ್ ಆಗಿ ಹೇಳಿಲ್ಲ. ಅದನ್ನು ಕೂಡ ತಾವು ಹೇಳಬೇಕು. ಏಕೆಂದರೆ ನಾಳೆ ಅಲ್ಲಿಯೂ ಯಾರೋ ಒಬ್ಬರು ಪೊಲಿಟಿಕಲ್ ಅಪಾಯಿಂಟ್ ಮೆಂಟ್ ಮಾಡಿ ಅಪೀಲು ಪ್ರಾಧಿಕಾರದಲ್ಲಿ ನಿಲ್ಲಿಸಿಬಿಟ್ಟರೆ, ಸಂಬಂಧಪಟ್ಟ ಅರ್ಜಿದಾರರು ಅಲ್ಲಿಗೆ ಕೂಡ ಅಪೀಲು ಹೋದರೆ ಏನು ಪ್ರಯೋಜನವಾಗುತ್ತದೆ? ಇಲ್ಲಿ ಚೀಫ್ ಮಿನಿಸ್ಟರ್ ಹೆಡ್ ಇದ್ದಂಥ ಹೈ ಪವರ್ ಕಮಿಟಿಯಲ್ಲಿಯೇ ನಮಗೆ ನ್ಯಾಯ ಸಿಗುವುದಿಲ್ಲ, ನಾಳೆ ಮತ್ತೊಂದು ನೀವೇ ನೇಮಕ ಮಾಡಿದಂಥ ಅಪೀಲು ಪ್ರಾಧಿಕಾರ ಇದ್ದರೆ, ಅದಕ್ಕೆ ಏನಾದರೂ ಹೈಕೋರ್ಟ್ ಜಡ್ಜ್‌ನ್ನು ನೇಮಕ ಮಾಡುತ್ತೀರೋ ಅಥವಾ ರಿಟೈರ್ಡ್ ಹೈಕೋರ್ಟ್ ಜಡ್ಜನ್ನು ನೇಮಿಸುತ್ತೀರೋ, ಮತ್ತೆ ಯಾರನ್ನು ನೇಮಿಸುತ್ತೀರಿ? ಅದರ ಬಗ್ಗೆ ಇಲ್ಲಿ ಯಾವುದೇ ಸ್ಪಷ್ಟನೆ ಇಲ್ಲ. ನಾಳೆ ಅಗ್ರಿವ್ಡ್ ಪಾರ್ಟಿ ಎಲ್ಲಿಗೆ ಹೋಗಬೇಕು? ಇದರ ಬಗ್ಗೆ ಇಲ್ಲಿ ಏನೂ ಕ್ಲಿಯಾರಿಟಿ ಇಲ್ಲ. ಹಾಗಾಗಿ ಇದು ಒಂದು ಒಳ್ಳೆಯ ಸದುದ್ದೇಶದಿಂದ ತಂದಂಥ ಬಿಲ್ ಅಲ್ಲ ಎನ್ನುವಂಥಾದ್ದನ್ನು ನಾನು ಈ ಸಂದರ್ಭದಲ್ಲಿ ಹೇಳಿ ನನಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಂಥ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ : ಮಾನ್ಯ ಅಧ್ಯಕ್ಷರೆ, ಶ್ರೀ ಶಿವಾನಂದ ಪಾಟೀಲರು ಹೇಳಿರತಕ್ಕಂಥ ವಿಚಾರದ ಬಗ್ಗೆ ಒಂದು ಸ್ಪಷ್ಟೀಕರಣ ಕೊಡುವುದಕ್ಕೆ ನಾನು ನಿಂತಿದ್ದೇನೆ. ಅವರು ಬಿಲ್ ಮೇಲೆ ಮಾತನಾಡುವಾಗ, ಬಿಲ್ ಬಗ್ಗೆ ಬಿಟ್ಟು ಸತ್ಯಕ್ಕೆ ದೂರವಾದ ಮಾತನ್ನು ಆಡಿದ್ದಾರೆ.

ಶ್ರೀ ಶಿವಾನಂದ ಎಸ್. ಪಾಟೀಲ್ : ಅವರು ಈ ರೀತಿ ಹೇಳಬಹುದೇ?

ಶ್ರೀ ವಿಶ್ವೇಶ್ವರ ಹೆಗಡೆ(ಕಾಗೇರಿ) : ಅವರು ಆ ರೀತಿ ಹೇಳುವುದು ಸರಿಯಲ್ಲ.

(ಗೊಂದಲ)

ಅಧ್ಯಕ್ಷರು : ಮಾನ್ಯ ತಿಮ್ಮನಕಟ್ಟಿಯವರೇ, ಸತ್ಯಕ್ಕೆ ದೂರವಾದ ವಿಷಯವನ್ನು ಹೇಳಿದ್ದಾರೆಂದು ತಾವು ಹೇಳಿ. ಇಂಥ ಕಾಂಟ್ರವರ್ಶಿಯಲ್ ಮಾತು ಮಾತನಾಡಬೇಡಿ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಬಾದಾಮಿ) : ಆ ರೀತಿಯೇ ಹೇಳುತ್ತೇನೆ. ಮಾನ್ಯ

ಸದಸ್ಯರು ಹೇಳಿರತಕ್ಕಂಥ ಮಾತು ನಾಳೆ ರೆಕಾರ್ಡ್‌ಗೆ ಹೋಗಬಾರದು. ಬಾಗಲಕೋಟೆಯಲ್ಲಿ ಈ ಮೂರು ಫ್ಯಾಕ್ಟರಿಗಳು ಬರಬೇಕಾದರೆ, ಮಾನ್ಯ ಮುಖ್ಯಮಂತ್ರಿಗಳನ್ನು ಕೂಡ ನಾನು ವಿನಂತಿ ಮಾಡಿಕೊಂಡಿದ್ದೇನೆ. ಸದುದ್ದೇಶದಿಂದ ಮಾಡಿರತಕ್ಕಂಥ ವಿಚಾರ ಏನೆಂದರೆ, ಅಲ್ಲಿ ಆಲಮಟ್ಟಿಯಿಂದ ಇಡೀ ಬಾಗಲಕೋಟೆ ಪ್ರದೇಶ ಮುಳುಗಡೆಯಾಗತಕ್ಕಂಥಾದ್ದರಲ್ಲಿ ಆ ಮೂರು ತಾಲ್ಲೂಕುಗಳಲ್ಲಿ ಸಹ ಮುಳುಗಡೆ ಆಗುತ್ತದೆ. ಆ ಮೂರು ತಾಲ್ಲೂಕುಗಳು ಮುಳುಗಡೆಯಾದರೂ ಸಹ ಅವರಿಗೆ ಉದ್ಯೋಗದ ಅವಕಾಶವನ್ನು ಕಲ್ಪಿಸಿಕೊಡುವುದಕ್ಕೆ ಸಾಧ್ಯವಾಗಿಲ್ಲ. ಆ ಒಂದು ಸದುದ್ದೇಶದಿಂದ ಫ್ಯಾಕ್ಟರಿ ಆಗಬೇಕು, ಅಲ್ಲಿರತಕ್ಕಂಥ ನಿರುದ್ಯೋಗಿಗಳಿಗೆ ಸಹಾಯವಾಗತಕ್ಕಂಥ ಕೆಲಸ ಆಗಬೇಕೆಂದು ಹೇಳಿ ಮೂರೂ ಜನ ಅದರಲ್ಲಿ ನಾನೂ ಕೂಡ ಭಾಗಿಯಾಗಿ ಮಾನ್ಯ ಮುಖ್ಯಮಂತ್ರಿಗಳಲ್ಲಿ ಮತ್ತು ಮಾನ್ಯ ಕೈಗಾರಿಕಾ ಸಚಿವರಲ್ಲಿ ಕೂಡ ವಿನಂತಿ ಮಾಡಿಕೊಂಡಾಗ ಮಂಜೂರಾತಿಯನ್ನು ನೀಡಿದ್ದಾರೆ. ಆದರೆ ಬಾಗಲಕೋಟೆ ಜಿಲ್ಲೆಯಲ್ಲಿ ಇಂಡಸ್ಟ್ರೀಸ್ ಬರಬೇಕೆನ್ನುವ ಸದುದ್ದೇಶದಿಂದ ಮಾಡಿರತಕ್ಕಂಥ ಕೆಲಸ ಬಿಟ್ಟರೆ, ಅವರಿಗೆ ಬೇಡ ಎನ್ನತಕ್ಕಂಥ ವಿಚಾರ ಬೇರೆ. ಅವರು ಫ್ಯಾಕ್ಟರಿ ಪ್ರಾರಂಭಿಸುವ ಸಲುವಾಗಿ ಎರಡು ವರ್ಷಗಳ ಕಾಲ ಪ್ರಯತ್ನ ಮಾಡಿರಬಹುದು. ಆದರೆ ಅವರಿಗೆ ಒಳ್ಳೆಯದು ಆಗಲಿ ಎನ್ನುವಂಥ ಸದುದ್ದೇಶವನ್ನು ಇಟ್ಟುಕೊಂಡಿದ್ದೇವೆಯೇ ವಿನಃ ಆದರೆ ಬಾಗಲಕೋಟೆ ಜಿಲ್ಲೆಗೆ ಏಕೆ ಆಯಿತು ಎನ್ನುವುದನ್ನು ಪ್ರಶ್ನೆ ಮಾಡುವಂಥ ಹಕ್ಕು ಶ್ರೀ ಶಿವಾನಂದ ಪಾಟೀಲರಿಗೆ ಇಲ್ಲ. ಇನ್ನು ಬಾದಾಮಿ ಶುಗರ್ಸ್ ಫ್ಯಾಕ್ಟರಿಗೆ ನಾನೇನೂ ಅಧ್ಯಕ್ಷ ಆಗಿಲ್ಲ ಅಥವಾ ಸದಸ್ಯನೂ ಆಗಿಲ್ಲ. ಆದರೆ ಬಾಗಲಕೋಟೆ ಜಿಲ್ಲೆಯ ರೈತರ ಹಿತದೃಷ್ಟಿಯಿಂದ ಆ ಫ್ಯಾಕ್ಟರಿ ಮಾಡುವುದಕ್ಕೆ ನೈತಿಕವಾಗಿ ನಾನೂ ಕೂಡ ಹೋರಾಟ ಮಾಡಿಕೊಂಡು ಬಂದಿದ್ದೇನೆ. ಒಳ್ಳೆಯ ಕೆಲಸವನ್ನು ಮಾಡುವುದಕ್ಕೆ ನಾವೆಲ್ಲರೂ ಕೂಡ ಜಾಯಿಂಟ್ ಎಫರ್ಟ್ ಆಗಿ ನಾವು ಎಲ್ಲಾ ಶಾಸಕರೂ ಕೂಡ ಪ್ರಯತ್ನ ಮಾಡುತ್ತಿದ್ದೇವೆ. ನಮ್ಮ ಫ್ಯಾಕ್ಟರಿಗೆ ಶ್ರೀ ಶಿವಾನಂದ ಪಾಟೀಲರೂ ಕೂಡ 5 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಯಾವ ಉದ್ದೇಶ ಇಟ್ಟುಕೊಂಡು ಕೊಟ್ಟಿದ್ದಾರೆ ಎನ್ನುವುದನ್ನು ಅವರೇ ಪ್ರಶ್ನೆ ಮಾಡಿಕೊಳ್ಳಬೇಕು. ಈ ರೀತಿಯಿಂದ ನಾವೆಲ್ಲರೂ ಕೂಡ ಒಗ್ಗಟ್ಟಾಗಿ ಒಬ್ಬರಿಗೊಬ್ಬರು ಕಚ್ಚಾಟ ಮಾಡದೆ ನಿಮ್ಮ ಜಿಲ್ಲೆಗೆ ಆಗತಕ್ಕಂಥ ಕೆಲಸವನ್ನು ನೀವು ಕೇಳಿಕೊಳ್ಳಿ, ನಮ್ಮ ಜಿಲ್ಲೆಗೆ ಆಗಬೇಕಾದಂಥ ಕೆಲಸ ಕಾರ್ಯಗಳ ಬಗ್ಗೆ ನಾವು ಹೋರಾಟ ಮಾಡುವವರು. ಒಟ್ಟಾರೆ ಉತ್ತರ ಕರ್ನಾಟಕದ ಬಗ್ಗೆ ಬಹಳ ಧ್ವನಿ ಎತ್ತಿ ಮಾತನಾಡತಕ್ಕಂಥವರಿಗೆ ನಾನು ಕೇಳತಕ್ಕಂಥ ಪ್ರಶ್ನೆ, ಇದು ಆಗಬಾರದು, ಈ ಮಲತಾಯಿ ಧೋರಣೆಯ ವಿಚಾರಗಳನ್ನು ಎತ್ತಬಾರದು, ನಿಮ್ಮ ಸಮಸ್ಯೆಗಳು ಇದ್ದರೆ ನಮ್ಮನ್ನೂ ಕರೆಯಿರಿ, ಬಿಜಾಪುರ ಜಿಲ್ಲೆಯಲ್ಲಿ ಆಗತಕ್ಕಂಥ ಯಾವ ಯಾವ ಫ್ಯಾಕ್ಟರಿಗಳು ಆಗಬೇಕೆಂದಿದ್ದರೆ ನಾವೂ ಬರುತ್ತೇವೆ, ನಾವೂ ಹೋರಾಟ ಮಾಡೋಣ, ನಾವು ವೈಯಕ್ತಿಕ ಪ್ರತಿಭೆಯನ್ನು, ಪ್ರಭಾವವನ್ನು ಕೂಡ ನಾವೆಲ್ಲರೂ ಬೀರೋಣ, ಒಟ್ಟಾರೆ ಆ ಜಿಲ್ಲೆಗಳಿಗೆ ಆಗತಕ್ಕಂಥ ಕೆಲಸಕಾರ್ಯಗಳಿಗೆ ಇವತ್ತು ಬಹಳ ಸದುದ್ದೇಶದಿಂದ ಮಾಡಿರತಕ್ಕಂಥಾದ್ದು ಎನ್ನುವ ದೃಷ್ಟಿಯಿಂದ ಈ ಮಾತನ್ನು ಸ್ಪಷ್ಟೀಕರಣದ ಮೂಲಕ ಹೇಳುತ್ತೇನೆ.

3.40 ಪಿ.ಎಂ.

ಅಧ್ಯಕ್ಷರು : ಈಗ ಶ್ರೀ ಕೆ.ಬಿ. ಮಲ್ಲಿಕಾರ್ಜುನ, ಶ್ರೀ ಶ್ರೀನಿವಾಸಗೌಡ, ಶ್ರೀ ಎಸ್.ಪಿ. ಮುದ್ದಹನುಮೇಗೌಡ, ಶ್ರೀ ಯೋಗೀಶ್ ಭಟ್ ಮತ್ತು ಶ್ರೀ ಚಿನ್ನಿಗಪ್ಪನವರು ಮಾತನಾಡಲಿ. ನಮ್ಮ ಮುಂದೆ ಅಜೆಂಡಾ ಸಿಕ್ಕಾಪಟ್ಟೆ ಇದೆ. ತಾವೆಲ್ಲಾ ಮಾತನಾಡಲೇಬೇಕೆಂದರೆ, ಒಬ್ಬೊಬ್ಬರು

ಎರಡೆರಡು ನಿಮಿಷ ಮಾತನಾಡಿ ಏಕೆಂದರೆ, ಅಜೆಂಡಾ ಏನಿದೆ ಎಂಬುದು ಗೊತ್ತಿದೆ. After all, we are in the beginning of to-day's agends. ದಯವಿಟ್ಟು 2-2 ನಿಮಿಷ ಮಾತನಾಡಿ.

+ ಶ್ರೀ ಕೆ.ಬಿ. ಮಲ್ಲಿಕಾರ್ಜುನ (ಬೀರೂರು) : ಮಾನ್ಯ ಅಧ್ಯಕ್ಷರೆ, ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) ವಿದೇಯಕ, 2002 ಅನ್ನು ಇಲ್ಲಿ ಏಕೆ ಮಂಡಿಸಿದರು ಎಂಬುದೇ ಒಂದು ದೊಡ್ಡ ಪ್ರಶ್ನೆಯಾಗಿದೆ ಹಾಗೂ ಜಿಜ್ಞಾಸೆಯಾಗಿದೆ. ಈಗಾಗಲೇ ಬಂಡವಾಳ ಹೂಡಿಕೆ ಮತ್ತು ಕೈಗಾರಿಕೆ ಪ್ರಾರಂಭಿಸಲು ಅನೇಕ ಕ್ರಮಗಳನ್ನು ಮಾನ್ಯ ಕೈಗಾರಿಕಾ ಸಚಿವರು ಕೇಳಿಕೊಂಡಿದ್ದಾರೆ. ಇದನ್ನು ಹೊಸದಾಗಿ ಏಕೆ ತಂದರು. ಎನ್ನುವುದನ್ನು ಅವರು ನಮಗೆ ಮೊದಲು ತಿಳಿಸಬೇಕಾಗುತ್ತದೆ. ನಾನು ತಿಳಿದುಕೊಂಡಿರುವುದೇನೆಂದರೆ, ಒಂದು ಪ್ರಾಣಿಗೆ ಹುಲಿಯ ಚರ್ಮವನ್ನು ಹೊದಿಸಿ ಸರ್ಕಸ್‌ನಲ್ಲಿ ಇಟ್ಟಹಾಗೆ ಆಗುತ್ತದೆ. ಬೇರೇನೂ ಅಲ್ಲ. ಎಲ್ಲಾ ಇದೆ, ಏನೋ ಒಂದು ರೂಪ ಕೊಡಬೇಕು, ಅದಕ್ಕೆ ಕಾನೂನಿನ ವ್ಯಾಪ್ತಿ ಕೊಡಬೇಕು, ಯಾವುದೋ ಒಂದು ಕ್ಲಚಸ್‌ನಿಂದ ಇದನ್ನು ತಪ್ಪಿಸಿ ಕೊಳ್ಳಬೇಕೆಂಬ ಉದ್ದೇಶದಿಂದ ತಂದಿದ್ದಾರೆಂದು ನಾನು ಅರ್ಥ ಮಾಡಿಕೊಂಡಿದ್ದೇನೆ. ಇದನ್ನು ಮಾನ್ಯ ಕೈಗಾರಿಕಾ ಸಚಿವರು ಕ್ಲಾರಿಫೈ ಮಾಡಬೇಕು. ಇನ್ನು ಎರಡನೆಯದಾಗಿ, ಇವತ್ತು ಒಂದು ಅಮೆಂಡ್‌ಮೆಂಟ್ ಮೂವ್ ಮಾಡಿದ್ದಾರೆ. ಈ ವಿಧೇಯಕವನ್ನು ಮಂಡಿಸಿದ ತಕ್ಷಣ ರಾಜ್ಯ ಮಟ್ಟದ ಉನ್ನತ ಒಪ್ಪಿಗೆ ನೀಡಿಕೆ ಸಮಿತಿಯ ಏನು ತೊಂದರೆ ಕಂಡು ಅಮೆಂಡ್‌ಮೆಂಟ್ ಮೂವ್ ಮಾಡಿದ್ದೀರಿ? ಇದು ಇನ್ನೂ ಪ್ರಾರಂಭವಾಗಿಲ್ಲ. ಇದು ಪ್ರಾರಂಭವಾಗಿ ಏನಾದರೂ ಲೋಪದೋಷಗಳು ಕಂಡುಬಂದಂಥ ಸಂದರ್ಭದಲ್ಲಿ ತಿದ್ದುಪಡಿ ತರುವುದು ಸಹಜ. ಪ್ರಪೋಸಲ್ ಇದೆ, ಏತಕ್ಕೋಸ್ಕರ? ಆ ಕಮಿಟಿಯಿಂದ ಏನು ತೊಂದರೆಯಾಗುತ್ತದೆ, ಅದಕ್ಕೋಸ್ಕರ ನಾವು ತಿದ್ದುಪಡಿಯನ್ನು ತರುತ್ತೇವೆಂದು ಹೇಳುವುದು ಸಹಜವಾದ ಸಂಗತಿ. ವಿಧೇಯಕ ಮಂಜೂರಾಗಿಲ್ಲ, ಈಗಲೇ ತಿದ್ದುಪಡಿ ತಂದಿರುವುದಕ್ಕೆ ನಾನು ಆಶ್ಚರ್ಯ ವ್ಯಕ್ತಪಡಿಸುತ್ತಿದ್ದೇನೆ. ಇದರ ಉದ್ದೇಶ ಏನು ಎಂಬ ಬಗ್ಗೆ ನಾನು ಏನು ಯೋಚಿಸಿದ್ದೇನೆಂದರೆ, ಯಾವ ಇಂಡಸ್ಟ್ರಿಗೆ ಯಾವ ಕಮಿಟಿಯನ್ನು ಮಾಡಬೇಕೆಂದು ಸರ್ಕಾರ ತೀರ್ಮಾನ ಮಾಡಬೇಕನ್ನುವ ಒಂದು ಅಭಿಪ್ರಾಯ ಇವರಿಗಿರಬೇಕು. ಯಾವುದೋ ಅರ್ಜಿ ಬಂದರೆ ಅದಕ್ಕೆ ಸಮಿತಿ ಮಾಡುವುದು ಅಥವಾ ಇನ್ಯಾವುದೋ ಅರ್ಜಿ ಬಂದಾಗ ಆ ಕಮಿಟಿಯನ್ನು ವಾಪಸ್ಸು ತೆಗೆದುಕೊಂಡು ಇನ್ನೊಂದು ಬೇರೆ ಸಮಿತಿಯನ್ನು ಮಾಡತಕ್ಕ ಉದ್ದೇಶ ನಿಮಗೇನಾದರೂ ಇದೆಯೇ? ಅದಕ್ಕೆ ಮಾನ್ಯ ಶಿವಾನಂದ ಪಾಟೀಲರು ಹೇಳಿದ ಹಾಗೆ, ಪೊಲಿಟಿಕಲ್ ಕಮಿಟಿ ರಚನೆ ಮಾಡುವ ಉದ್ದೇಶ ಈ ತಿದ್ದುಪಡಿಯಲ್ಲಿದೆಯೇ ಎಂಬುದು ನನ್ನ ಎರಡನೆಯ ಸಮಸ್ಯೆ. ಈ ಬಗ್ಗೆ ಡ್ರಾಫ್ಟ್ ಮಾಡುತ್ತಿರಬೇಕಾದರೆ ನಾನು ಕೆಲವೊಂದು ಸಮಸ್ಯೆಗಳನ್ನು ನೋಡಿದ್ದೇನೆ. ಈ ಸಮಿತಿಯ ಕಾರ್ಯಗಳೆಂದು ಹೇಳುತ್ತೀರಿ, ಅದರಲ್ಲಿ ಮೊದಲನೆಯದು, ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ಸಮಿತಿ, ಅದನ್ನು ಚರ್ಚಿಸಲು ಮತ್ತು ಯಾವಾಗ ಸಭೆ ಕರೆಯಬೇಕೆಂಬ ಬಗ್ಗೆ ನಿರ್ದಿಷ್ಟವಾಗಿ ಇಲ್ಲ. ನಾವು ಪಬ್ಲಿಕ್ ಅಂಡರ್ ಟೇಕಿಂಗ್ ಕಮಿಟಿಯಲ್ಲಿ ಕೆಲಸ ನಿರ್ವಹಿಸಿದ್ದೇವೆ. ಒಂದು ಅರ್ಜಿ ಸರ್ಕಾರದ ಮುಂದೆ ಬರುತ್ತದೆ, ಸುಮಾರು ಆರು ತಿಂಗಳು ಸಭೆ ಕರೆಯದಿದ್ದರೆ ಆಗ ಅದು ವಿಲೇವಾರಿಯಾಗುವ ಪ್ರಶ್ನೆ ಬರುವುದಿಲ್ಲ. ಹಾಗಾಗಿ, ಯಾವಾಗ ಸಭೆಯನ್ನು ಕರೆಯಬೇಕೆಂಬ ಬಗ್ಗೆ ನೀವು ಸ್ಪಷ್ಟವಾಗಿ ಹೇಳಲಿಲ್ಲ. ಇನ್ನೊಂದು ಅಂಥ ಅವಧಿಯೊಳಗೆ ಇದನ್ನು ತೀರ್ಮಾನಿಸಬೇಕೆಂದು ಒಂದೆಡೆ ಹೇಳಿದ್ದೀರಿ. 4ನೇ ಪೇಜ್

2ನೇ ಪ್ಯಾರಾದಲ್ಲಿ, ಅಂಥ ಅವಧಿಯೊಳಗೆ ತನ್ನ ತೀರ್ಮಾನವನ್ನು ತಿಳಿಸತಕ್ಕದ್ದೆಂದು ಹೇಳಿದ್ದೀರಿ. ರಾಜ್ಯ ಮಟ್ಟದ ಏಕ-ಗವಾಕ್ಷಿ ಒಪ್ಪಿಗೆ ಸಮಿತಿ ಎಂದು ಇದೆ, ಅದಕ್ಕೆ ಒಂದು ವಾರ ಗಡುವು ಕೊಟ್ಟು, ಅಷ್ಟರಲ್ಲಿ ತೀರ್ಮಾನಿಸಬೇಕೆಂದು ಹೇಳಿದ್ದೀರಿ. ಅದೇ ರೀತಿ ಜಿಲ್ಲಾ ಮಟ್ಟದ ಸಮಿತಿಗೆ ಅವಧಿ ಕೇಳಿಲ್ಲ. ಮೂರು ಒಂದೇ ರೀತಿಯಾಗಿರುವ, ಒಂದೇ ಸದುದ್ದೇಶದಿಂದ ಆಗಿರುವ ಕಮಿಟಿಗಳೇನಿವೆ, ಉನ್ನತ ಮಟ್ಟದ ಕಮಿಟಿಯಲ್ಲಿ ನಿಮಗೆ ಟೈಂ ಲಿಮಿಟ್ ಇಲ್ಲ, ಎರಡನೆಯದರಲ್ಲಿ ಟೈಂ ಲಿಮಿಟ್ ಇದೆ, ಮೂರನೆಯದರಲ್ಲಿ ಮತ್ತೆ ಟೈಂ ಲಿಮಿಟ್ ಇದೆ. ಈವೊಂದು ದ್ವಂದ್ವವನ್ನು ಏಕೆ ಇದರಲ್ಲಿಟ್ಟಿದ್ದೀರಾ? ಅರ್ಜಿ ಬಂದ ಎಷ್ಟು ದಿವಸಗಳಲ್ಲಿ ಸಭೆ ಕರೆಯಬೇಕೆಂಬ ಬಗ್ಗೆ ಸ್ಪಷ್ಟವಾಗಿ ತಾವು ಎಲ್ಲಿಯೂ ಹೇಳಿಲ್ಲ. ನೀವು ವಾಪಸ್ಸು ತೆಗೆದುಕೊಳ್ಳುವುದಕ್ಕೆ, ತಿದ್ದುಪಡಿಯನ್ನು ನೀವು ಮಂಡಿಸುವುದಾದರೆ, ರಾಜ್ಯ ಮಟ್ಟದ ಏಕ-ಗವಾಕ್ಷಿ ಒಪ್ಪಿಗೆ ನೀಡಿಕೆ ಸಮಿತಿ ಬಗ್ಗೆ ಚರ್ಚೆ ಮಾಡೋಣ. ಮೂವ್ ಮಾಡದಿದ್ದರೆ, ಒಂದು ಸಮಸ್ಯೆ ಇದೆ, ಸಮಿತಿಯ ಸದಸ್ಯರಿಗೆ ಹೇಳುತ್ತಲೇ ಬಂದಿದ್ದೀರಿ, ಅದರಲ್ಲಿ ಮೂರನೆಯದು, ಅಧ್ಯಕ್ಷರು, ಕರ್ನಾಟಕ ವಿದ್ಯುಚ್ಛಕ್ತಿ ಪ್ರಸರಣ ನಿಗಮ ನಿಯಮಿತ, ಇವರು ಕ್ಯಾಬಿನೆಟ್ ಸಚಿವರಾಗಿದ್ದಾರೆ. ಇವರು ಸಂಪುಟ ಸ್ಥಾನಮಾನ ಹೊಂದಿರುವವರು. ಅವರು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಅಧ್ಯಕ್ಷರಾಗಿರುವ ಸಮಿತಿಯಲ್ಲಿ ಕೆಲಸ ಮಾಡಲಿಕ್ಕಾಗುತ್ತದೆಯೇ? ಈ ತಿದ್ದುಪಡಿ ಮೂವ್ ಮಾಡುವುದಾದರೆ ನಮ್ಮ ಅಭ್ಯಂತರವಿಲ್ಲ. ತಿದ್ದುಪಡಿ ಮೂವ್ ಮಾಡದಿದ್ದರೆ, ಒಬ್ಬ ಸಂಪುಟ ದರ್ಜೆಯ ಸಚಿವ ಸ್ಥಾನ ಹೊಂದಿರುವ ವ್ಯಕ್ತಿ, ಒಬ್ಬ ಪ್ರಧಾನ ಕಾರ್ಯದರ್ಶಿ ಅಧ್ಯಕ್ಷರಾಗಿರುವ ಸಮಿತಿಯಲ್ಲಿ ಸದಸ್ಯರಾಗಿ ಕೆಲಸ ಮಾಡಲಿಕ್ಕಾಗುತ್ತದೆಯೇ? ನಮಗೆ ಬಹಳಷ್ಟು ಸಮಸ್ಯೆಯಿರತಕ್ಕದ್ದು, ಏಕ ಗವಾಕ್ಷಿಯದು ಒಂದು ಪ್ರಯೋಗ. ಇದು ಮೊದಲು ಬಿಡಿಎ-ನಲ್ಲಿ ಆಯಿತು. ನಾನು ಆಗ ಸ್ಟೈಟ್ ರಿತರಣೆ ಮಾಡುವ ಕುರಿತು ಅಲ್ಲಿಗೆ ಹೋಗಿದ್ದೆ. ನಾನು ಎರಡು ಉದಾಹರಣೆಗಳನ್ನು ಹೇಳುತ್ತೇನೆ. ನಾನು ಅಲ್ಲಿಗೆ ಹೋದಾಗ ಏಕ-ಗವಾಕ್ಷಿ ಅಂದರೆ ಏನೆಂದರೆ, ನೀವು ಎಲ್ಲೆಲ್ಲೋ ಹೋಗಿ ಎಲ್ಲಾ ಟೇಬಲ್‌ಗೆ ಹೋಗಿ ಹಣ ಕೊಡಬೇಡಿ, ಒಂದೇ ಕಡೆ ಕೊಡಿ, ಎಲ್ಲಾ ಮುಗಿಸಿ, ಕೆಲಸ ಮಾಡಿಕೊಡುತ್ತೇವೆಂದು ಹೇಳಿರುವುದು ನನಗೆ ಜ್ಞಾಪಕವಿದೆ. ಏಕ-ಗವಾಕ್ಷಿ ಎಂದರೆ, ಒಂದೇ ಕಡೆ ಲಂಚ ಕೊಡುವುದು. ಇದರಿಂದ ಬೇರೆ ಏನೂ ಸಾಧನೆಯಾಗುವುದಿಲ್ಲ. ನಮ್ಮಲ್ಲಿ ತಹಶೀಲ್ದಾರ್ ಆಫೀಸ್‌ನಲ್ಲಿ ಪ್ರಗತಿಪರ ಏಕ-ಗವಾಕ್ಷಿ ಎಂದು ಇದೆ, ಅವನು ಯಾವಾಗ ಹೋಗಲಿ, ಅಗತ್ಯ ದಾಖಲೆಗಳನ್ನು ಲಗತ್ತಿಸಿಲ್ಲ ಎಂದು ಎಂಡಾರ್ಸ್‌ಮೆಂಟ್ ಕೊಡುತ್ತಾನೆ. ಎಲ್ಲಾ ಕೊಟ್ಟಿದ್ದೇನೆಂದರೂ, ಕೊಟ್ಟಿಲ್ಲವೆನ್ನುತ್ತಾನೆ. ಅದಕ್ಕೆ ಹಣವನ್ನು ಅಟ್ಯಾಚ್ ಮಾಡಿಲ್ಲ, ಅದಕ್ಕೆ ನಿಮ್ಮ ಕೆಲಸ ಮಾಡಿಲ್ಲವೆನ್ನುತ್ತಾನೆ. ಇದು ಏಕ-ಗವಾಕ್ಷಿಯ ಒಂದು ಪ್ರಯೋಗವನ್ನು ನಾವು ಹಿಂದೆ ನೋಡಿದ್ದೇವೆ. ಅದಕ್ಕೇನಾದರೂ ಏಕ-ಗವಾಕ್ಷಿ ಯೋಜನೆಯನ್ನು ನೀವೇನು ಒಪ್ಪಿಗೆ ಸಮಿತಿ ಎಂದು ಮಾಡಿದ್ದೀರಿ, ಇದಕ್ಕೆ ಸ್ಪಷ್ಟವಾಗಿರುವ ಉದ್ದೇಶವೇನಾದರೂ ಬೇರೆ ಬೇರೆ ರೂಪದಲ್ಲಿದೆಯೇ? ನನಗೆ ಸಮಯ ಕೊಡಿ. ನಾನು ಯಾವಾಗಲೂ out of the way ಹೋಗಿ ಮಾತನಾಡುವುದಿಲ್ಲ.

ಅಧ್ಯಕ್ಷರು : ನಮಗೆ ಹೆಚ್ಚು ಸಮಯವಿಲ್ಲ. ಇನ್ನೂ ನಾಲ್ಕೈದು ಜನರು ಮಾತನಾಡುವವರಿದ್ದಾರೆ. ಮಾನ್ಯ ಸಿಂಧ್ಯಾ, ಮಾನ್ಯ ಜಗದೀಶ್ ಶೆಟ್ಟರ್‌ರವರು ಮಾತನಾಡಿದರು.

ಶ್ರೀ ಕೆ.ಬಿ. ಮಲ್ಲಿಕಾರ್ಜುನ : 9ನೇ ಪೇಜ್‌ನಲ್ಲಿ 18ನೇ ಪ್ಯಾರಾದಲ್ಲಿ, ಅಪೀಲ್ ಬಗ್ಗೆ ಹೇಳಿದ್ದೀರಿ. ನಿಮ್ಮ ಉತ್ತರದಲ್ಲಿ ಏನಿದೆ ಎಂದು ನೋಡಿದೆ. ಮಾನ್ಯ ಮುಖ್ಯಮಂತ್ರಿಗಳು

ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿಯ ಅಧ್ಯಕ್ಷರಾಗಿರುತ್ತಾರೆಂದು ನೀವು ಎಲ್ಲೋ ಒಂದು ಕಡೆ ಈ ಸಂದರ್ಭದಲ್ಲಿ ಹೇಳಿದ್ದೀರಿ. ಯಾರಿಗೆ ಅಪೀಲು ಹೋಗಬೇಕು? ಕೋರ್ಟಿಗೆ ಅಪೀಲ್ ಹೋಗಬೇಕೆ? ನನಗೆ ಗೊತ್ತಿದ್ದ ಹಾಗೆ, ಮುಖ್ಯಮಂತ್ರಿಗಳಿಗಿಂತ ನಮ್ಮ ರಾಜ್ಯದಲ್ಲಿ ಉನ್ನತ ಮಟ್ಟದ ಅಧಿಕಾರಿಗಳು ಯಾರೂ ಇಲ್ಲ. ಇಲ್ಲವಾದಲ್ಲಿ, ಕೋರ್ಟಿಗೆ ಹೋಗಬೇಕಾಗುತ್ತದೆ. ಅದರ ಬಗ್ಗೆ ಹೇಳಬೇಕಾಗುತ್ತದೆ. ಕೊನೆಯ ವಿಷಯವೆಂದರೆ, ಮೊನ್ನೆ ಮಾನ್ಯ ಮುಖ್ಯಮಂತ್ರಿಗಳು ವಿಧೇಯಕ ಮಂಡಿಸಿದಾಗ ನಾನು ಈ ವಿಷಯವನ್ನು ಹೇಳಲಿಲ್ಲ. ಇತ್ತೀಚಿನ ದಿನಗಳಲ್ಲಿ ಎಲ್ಲವನ್ನೂ ಬರೆದು, ನಮ್ಮ ಡ್ರಾಫ್ಟಿಂಗ್ ಇಲಾಖೆಯವರು ಕೊನೆಗೆ ಸದ್ಭಾವನೆಯಿಂದ ಕೈಗೊಂಡ ಕ್ರಮಕ್ಕೆ ರಕ್ಷಣೆ ಎಂದು ಸೇರಿಸುತ್ತಾರೆ. ಮಾನ್ಯ ಎಸ್.ಎಸ್. ಪಾಟೀಲರನ್ನು ನಾನು ಕೇಳಿದ್ದಕ್ಕೆ ಅವರು, 'ಕೋಡಗನ ಕೋಳಿ ನುಂಗಿತ್ತಾ' ಎಂದು ಹೇಳಿದರು. ಎಲ್ಲಾ ಬರೆದು, ಕೊನೆಗೆ, ಸಣ್ಣ ಕ್ಲಾಜ್ ಇಟ್ಟು, ಇದಕ್ಕೆ ಎಲ್ಲದಕ್ಕೂ ಯಾರೇ ಅಧಿಕಾರಿಗಳು ಏನೇ ತಪ್ಪು ಮಾಡಿದರೂ ಸದ್ಭಾವನೆಯಿಂದ ಮಾಡಿದೆ ಎನ್ನುವ ಅಫಿಡವಿಟ್ ಫೈಲ್ ಮಾಡಿದರೆ, ಇದೆಲ್ಲಾ ಮುಚ್ಚಿಹಾಕುವ ಪರಿಸ್ಥಿತಿ ಬರುತ್ತಿರುತ್ತದೆ. ಇದನ್ನು ತಾವು ದಯಮಾಡಿ ವಾಪಸ್ಸು ತೆಗೆದುಕೊಳ್ಳಬೇಕೆಂಬುದು ನನ್ನ ಮನವಿ. ಸದ್ಭಾವನೆಯಿಂದ ಎಂದು ಹೇಳಿರುವುದಕ್ಕೆ ನಾವು ಯಾರು ಬೇಕಾದರೂ ಇದರಲ್ಲಿ ಪ್ರೊಟೆಕ್ಷನ್ ತೆಗೆದುಕೊಳ್ಳಬಹುದು. ಇದರಲ್ಲಿ ದುರುಪಯೋಗವಾಗುತ್ತದೆ ಸದ್ಭಾವನೆಯಾಗುವುದಿಲ್ಲವೆನ್ನುವ ಮಾತನ್ನು ಹೇಳುತ್ತೇನೆ. ಈ ತೊಂದರೆಗಳನ್ನು ನಿವಾರಿಸುವುದಕ್ಕೆ ಈ ಅಧಿಕಾರ ಎಂದು ಹೇಳಿದ್ದೀರಿ. ಪರಂತು, ಈ ಅಧಿನಿಯಮ ಪ್ರಾರಂಭವಾದ ದಿನಾಂಕದಿಂದ 2 ವರ್ಷಗಳ ಅವಧಿ ಮುಕ್ತಾಯವಾದ ತರುವಾಯ ಯಾವುದೇ ಆದೇಶಗಳನ್ನೂ ಹೊರಡಿಸತಕ್ಕದ್ದಲ್ಲ ಎಂದು ಹೇಳಿದ್ದೀರಿ. ಅಂದರೆ, 2 ವರ್ಷಗಳಿಗೆ ಈ ವಿಧೇಯಕ ಪರಿಪೂರ್ಣವಾಗುತ್ತದೆಯೇ? ಏನೂ ಆದೇಶ ಹೊರಡಿಸಲ್ಲವೆಂದು ನೀವೇ ಏಕೆ ಹೇಳುತ್ತೀರಿ? ನಿಮಗೇನಾದರೂ ಬೇಕು ಎಂದರೆ ಯಾರಾದರೂ ಕೋರ್ಟಿಗೆ ಹೋಗಿ ನಿಮ್ಮ ಆಕ್ಟ್ ಪ್ರಕಾರ ಕೋರ್ಟಿನಲ್ಲಿ ಸ್ಟೇ ತರಬಹುದು. ನಿಮ್ಮ ಯಾವುದೇ ಓಗಳಿಗೆ ಬೆಲೆ ಇಲ್ಲದಂಥ ಕ್ಲಾಜ್ ಇಟ್ಟು, ನಿಮ್ಮ ಕೈಯನ್ನು ನೀವೇ ಏಕೆ ಕಟ್ಟಿಸಿಕೊಂಡಿದ್ದೀರಿ? ಆದುದರಿಂದ, ಇದನ್ನು ತೆಗೆಯಬೇಕೆಂಬ ಮನವಿ ಮಾಡಿ, ತಮಗೆ ಧನ್ಯವಾದಗಳನ್ನರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ಅಧ್ಯಕ್ಷರೆ, ನಮ್ಮ ರಾಜ್ಯದಲ್ಲಿ ಹೊಸ ಹೊಸ ಕೈಗಾರಿಕೆಗಳನ್ನು ಸ್ಥಾಪಿಸಲು ಮತ್ತು ಹೆಚ್ಚು ಹೆಚ್ಚು ಬಂಡವಾಳ ಹೂಡಿಕೆಗೆ ಪ್ರೋತ್ಸಾಹವನ್ನು ನೀಡುವುದು ಮತ್ತು ಈಗಿರುವ ವ್ಯವಸ್ಥೆಯನ್ನು ಸರಳೀಕರಣಗೊಳಿಸುವ ದಿಸೆಯಲ್ಲಿ ಏನು ಈ ಮಸೂದೆ ತಂದಿದ್ದಾರೆ ಅದಕ್ಕೆ ನಾನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ. ಈಗ ಒಂದು ಸಲಹೆಯನ್ನು ಮಾನ್ಯ ಸಚಿವರಿಗೆ ಕೊಡಬಯಸುತ್ತೇನೆ. ಅಧಿನಿಯೆ, ಮಸೂದೆಗಳನ್ನು ನಾವು ಪಾಸ್ ಮಾಡುತ್ತೇವೆ. ಈ ಮಸೂದೆ ಆಕ್ಟ್ ಆದತಕ್ಷಣ, ನಾವು ಅದನ್ನು ಕಾರ್ಯಗತ ಮಾಡಬೇಕಾದರೆ ರೂಲ್ಸ್ ಇಲ್ಲದಿದ್ದರೆ ಮಾಡುವುದಕ್ಕಾಗುವುದಿಲ್ಲ. ನೀವು ರೂಲ್ಸ್ ಫ್ರೇಂ ಮಾಡದೇ ಹೋದರೆ, ಯಾವುದೇ ಕಲಂ ಅನ್ನು ನೋಡಿದಾಗ, As prescribed ಅನ್ನುತ್ತೀರಿ- As prescribed means as prescribed in the rules. Unless the rules are framed, you cannot virtually implement this Act. ನಾನು ಏಕೆ ಈ ವಿಷಯವನ್ನು ಹೇಳುತ್ತೇನೆಂದರೆ, ಮಾನ್ಯ ಕೆ.ಬಿ. ಮಲ್ಲಿಕಾರ್ಜುನ ಅವರಿಗೂ ಗೊತ್ತಿದೆ, ನಾವುಗಳು ಅಧೀನ

ಶಾಸನ ರಚನಾ ಸಮಿತಿಯಲ್ಲಿ ಇದ್ದಾಗ, ವರ್ಷಾನುಗಟ್ಟಲೆ ರೂಲ್ಸ್‌ನ್ನು ಫ್ರೇಮ್ ಮಾಡದೇ ಆಕ್ಟ್‌ಗಳನ್ನು ಇಟ್ಟುಕೊಂಡು, ಇಂಪ್ಲಿಮೆಂಟೇಷನ್ ಲೆವಲ್‌ನಲ್ಲಿ ಅನೇಕ ತೊಂದರೆಗಳನ್ನು ಅನುಭವಿಸತಕ್ಕದ್ದನ್ನು ನಾವು ನೋಡಿದ್ದೇವೆ. ಆದ್ದರಿಂದ, ಆದಷ್ಟು ಶೀಘ್ರವಾಗಿ ರೂಲ್ಸ್ ಫ್ರೇಮ್ ಮಾಡುವ ಬಗ್ಗೆ ಹೆಚ್ಚಿನ ಒತ್ತನ್ನು ಕೊಡಬೇಕು, ಏಕೆಂದರೆ ರೂಲ್ಸ್ ಫ್ರೇಮ್ ಮಾಡದೇ ಹೋದರೆ ಆಕ್ಟ್‌ನ್ನು ಇಂಪ್ಲಿಮೆಂಟ್ ಮಾಡಲಿಕ್ಕೆ ಆಗುವುದಿಲ್ಲ. ಅದರ ಬಗ್ಗೆ ಹೆಚ್ಚು ಗಮನ ಕೊಡಬೇಕು. ಅಲ್ಲದೆ ಮತ್ತೊಂದು ಸಲಹೆಯನ್ನು ನಾನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಸೆಕ್ಷನ್ 17ರಲ್ಲಿ ಡೀಮ್ಡ್ ಅಪ್ರೂವಲ್ ಎಂದು ಮಾಡಿಕೊಂಡಿದ್ದೀರಿ. "Every Department or authority not withstanding anything contained in any other law shall issue clearance within the stipulated time limit failing which such clearances shall be deemed to have been issued." ಈ stipulated time limit ಅನ್ನು ನಾವು ಆಕ್ಟ್‌ನಲ್ಲಿ ಸೇರಿಸಿದ್ದರೆ ಚೆನ್ನಾಗಿರುತ್ತಿತ್ತು. I think, because in the absence of specific mention, I feel that it will be mentioned in the rules. ಅದರ ಬದಲು deemed sanction ಅಥವಾ deemed clearance, ಗೆ stipulated period ಯಾವುದು ಎಂಬುದನ್ನು ಇಲ್ಲಿಯೇ ಮೆನ್‌ಷನ್ ಮಾಡಿದ್ದರೆ, ಚೆನ್ನಾಗಿರುತ್ತಿತ್ತು and that would have simplified the position of law. ಅದರ ಬಗ್ಗೆ ಯೋಚನೆ ಮಾಡಬೇಕೆಂದು ಹೇಳುತ್ತಾ, ಈ ಅಪೀಲ್ ಬಗ್ಗೆಯೂ ಕೂಡ we would have mentioned in the Act itself as to who is the Appellate Aauthority. The constitution of the State high-level clearance Committee, includes almost all high dignitarise of the State. ಆದ್ದರಿಂದ which is that Appellate Authority, ಎಂಬುದನ್ನು ಇಲ್ಲಿ ಮೆನ್‌ಷನ್ ಮಾಡಿದ್ದರೆ ಒಳ್ಳೆಯದಿತ್ತು ಎಂಬುದು ನನ್ನ ಭಾವನೆ. ಇದರ ಜೊತೆಗೆ, State high-level clearance committee ನೀವು constitute ಮಾಡಿದ್ದೀರಿ, Act itself it very clear with regard to the constitution of that committee. Likewise, you are also specific in constituting the State level single window clearance committee. You have specifically mentioned in Section 6 as to who are all the members of that Committee and who is the Chairman of that Committee. Likewise, what prevented you to mention about the district level committees? because, Section 9 deals with formation of district level committees. you would have clearly mentioned as to who are all the members concerned under this District Level Single Window Clearance Committee. ಇಲ್ಲದಿದ್ದರೆ ಏನಾಗುತ್ತದೆ ಎಂದರೆ, once again you have to depend upon the rules here. ಆದ್ದರಿಂದ, by notification ಅಂತ ಮಾಡಿದ್ದೀರಿ The State Government, may, by notification constitute a single point clearance committee...' ಈಗ ರಾಜ್ಯ ಮಟ್ಟದ್ದು ಮತ್ತು ಹೈಲೆವಲ್ ಕಮಿಟಿಯನ್ನು ಆಕ್ಟ್‌ನಲ್ಲಿ ಮೆನ್‌ಷನ್ ಮಾಡಿರುವುದರಿಂದ ಇದನ್ನು ಮಾಡಿದ್ದರೆ ಇನ್ನೂ ಹೆಚ್ಚು ಅದು ಶಕ್ತಿಯುತವಾಗುತ್ತಿತ್ತು ಎನ್ನುವ ಮಾತನ್ನು ಹೇಳುತ್ತಾ, ಮತ್ತೊಮ್ಮೆ ಇದು

ನಿಜವಾಗಲೂ ಕೂಡ ನಮ್ಮ ಕೈಗಾರಿಕೆಗಳು ಹಾಗೂ ಬಂಡವಾಳ ಹೂಡಿಕೆಗೆ ಅತ್ಯಂತ ಹೆಚ್ಚಿನ ಪ್ರೋತ್ಸಾಹದಾಯಕ ಮತ್ತು ಸರಳೀಕರಣ ಮಾಡುವ ವ್ಯವಸ್ಥೆಗೆ ತಾವು ಏನು ಈ ಮಸೂದೆ ತಂದಿದ್ದೀರಿ, ನಾನು ಇದನ್ನು ಸಂಪೂರ್ಣವಾಗಿ ಸ್ವಾಗತಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) : ಮಾನ್ಯ ಅಧ್ಯಕ್ಷರೆ, ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) ವಿಧೇಯಕ 2002ರಲ್ಲಿ ಅನೇಕ ಸ್ವಾಗತಾರ್ಹವಾದ ಅಂಶಗಳು ಇದ್ದರೂ ಸಹ ಇದರ ಜೊತೆಯಲ್ಲಿ ವಿಶೇಷವಾಗಿ ಹೂಡಿಕೆದಾರರಿಗೆ ಪ್ರೋತ್ಸಾಹ ಕೊಡುವಂಥಾದ್ದು ಆಗಬೇಕು. ಇತ್ತೀಚೆಗೆ ಈ ಅಧಿವೇಶನ ಆರಂಭಕ್ಕಿಂತಲೂ ಮುಂಚೆ ನಾನು ಸ್ಮಾಲ್ ಸ್ಕೇಲ್ ಇಂಡಸ್ಟ್ರಿ ಅಸೋಸಿಯೇಷನ್ ಹಾಗೂ ಬೇರೆ ಬೇರೆ ಸಂಘ ಸಂಸ್ಥೆಗಳ ಜೊತೆಗೆ ಮಾತುಕತೆ ಮಾಡಿದೆ. ತಕ್ಷಣ ಈ ಸಣ್ಣ ಕೈಗಾರಿಕೆಗಳಿಗೆ ಸಹಾಯವಾಗುವ ನಿಟ್ಟಿನಲ್ಲಿ ಸರ್ಕಾರದ ಗಮನವನ್ನು ಯಾವ ರೀತಿ ಸೆಳೆಯಬೇಕು, ಯಾವ ರೀತಿ ಗಮನವನ್ನು ಸೆಳೆದರೆ ಅನುಕೂಲವಾಗುತ್ತದೆ ಎನ್ನುವ ವಿನಂತಿಯನ್ನು ಮಾಡಿದ ಸಂದರ್ಭದಲ್ಲಿ ಅವರ ಕಡೆಯಿಂದ ಬಂದಿರುವ ಸಲಹೆ ಏನೆಂದರೆ, ನಮಗೆ ಸುಮಾರು ಎರಡು ಲಕ್ಷ ನಲವತ್ತು ಸಾವಿರ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಲ್ಲಿ 60 ಪರ್ಸೆಂಟ್‌ಕ್ಕಿಂತಲೂ ಹೆಚ್ಚಿನ ಕೈಗಾರಿಕೆಗಳು ಇವತ್ತು ನಷ್ಟ ಹಾಗೂ ತೊಂದರೆಗಳಿಂದ ನಾನಾ ಸಮಸ್ಯೆಗಳಿಂದ ನರಳುತ್ತಿವೆ. ಅವರು ಏನು ಪರಿಹಾರವನ್ನು ಅಪೇಕ್ಷೆ ಮಾಡುತ್ತಿದ್ದಾರೆಂದರೆ, ನಮಗೆ ಒಂದು ಸ್ಪಷ್ಟವಾದ ಎಗ್ಸಿಟ್ ಪಾಲಿಸಿಯನ್ನು ಸರ್ಕಾರ ಡಿಕ್ಲೇರ್ ಮಾಡಲಿ, ಒಂದು ಕಡೆ ಸೇಲ್ಸ್ ಟ್ಯಾಕ್ಸ್, ಮತ್ತೊಂದು ಕಡೆ ಎಕ್ಸೈಜ್ ಇರಬಹುದು, ಹೀಗೆ ಬೇರೆ ಬೇರೆ ರೀತಿಯ ತೆರಿಗೆಯ ಚೌಕಟ್ಟಿನಲ್ಲಿ ನಾವು ಸಿಕ್ಕಿ ಹಾಕಿಕೊಂಡಿದ್ದು, ನಾವು ಹೊರಗೆ ಬರುವ ಸ್ಥಿತಿಯಲ್ಲಿ ಇಲ್ಲದೇ ಅದನ್ನು ಮಾರಾಟ ಮಾಡುವುದಾಗಲೀ ಇಲ್ಲವೇ ವರ್ಗಾವಣೆ ಮಾಡುವುದಾಗಲಿ, ಲೀಸ್‌ಗೆ ಕೊಡುವ ಸ್ಥಿತಿಯಲ್ಲಿ ಇಲ್ಲದೇ ಕೆಲವು ತರಹದ ಬಿಕ್ಕಟ್ಟಿನಲ್ಲಿ ನಾವು ಸಿಕ್ಕಿ ಹಾಕಿಕೊಂಡಿರುವುದರಿಂದ, ಕನಿಷ್ಟ ಪಕ್ಷ ನಮಗೆ ಹೊರಗೆ ಬರುವ ನಿಟ್ಟಿನಲ್ಲಿ, ತಾವು ಏನು ಏಕ-ಗವಾಕ್ಷಿ ಒಪ್ಪಿಗೆ ನೀಡುವ ಸಮಿತಿ ಎಂದು ಹೇಳುತ್ತೀರಾ, ಅದನ್ನು ಈ ಸಮಿತಿಯ ವ್ಯಾಪ್ತಿಯ ಒಳಗಡೆ ಈ ಎಗ್ಸಿಟ್ ಪಾಲಿಸಿಯನ್ನು ಬರುವ ರೀತಿಯಲ್ಲಿ ವ್ಯವಸ್ಥೆ ಮಾಡಿದರೆ ನಮಗೆ ಅನುಕೂಲವಾಗುತ್ತದೆಂದು ಹೇಳಿದರು. ಆದ್ದರಿಂದ, ತಾವು ಇದರ ಬಗ್ಗೆ ದಯಮಾಡಿ ಗಂಭೀರವಾಗಿ ಯೋಚಿಸಬೇಕೆಂದು ನಾನು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ. ಎರಡನೇಯದಾಗಿ ಜಿಲ್ಲಾ ಮಟ್ಟದ ಏಕ-ಗವಾಕ್ಷಿ ಒಪ್ಪಿಗೆ ನೀಡುವ ಸಮಿತಿ ಇದರಲ್ಲಿ ರಾಜ್ಯ ಮಟ್ಟದ ಏಕ-ಗವಾಕ್ಷಿ ಒಪ್ಪಿಗೆ ನೀಡುವ ಸಮಿತಿಯಲ್ಲಿ ತಾವು ಮಿನಿಮಮ್ ಮೂರು ಕೋಟಿಯನ್ನು ವಿಧಿಸಿದಿರಿ, ಆದರೆ ಇಲ್ಲಿ 25 ಲಕ್ಷ ರೂ. ಹಾಕಿದ್ದಲ್ಲಿ, ಅನುಕೂಲವಾಗುತ್ತದೆ, ಈ ಮಟ್ಟದ ವ್ಯಾಪ್ತಿಯಲ್ಲಿ ಇರುವಂಥದ್ದಕ್ಕೆ ಅನಕೂಲವಾಗುವುದರಿಂದ ಬಹುಶಃ ಜಿಲ್ಲಾ ಮಟ್ಟದ ಇದರಲ್ಲಿ ಮೂರು ಕೋಟಿ ರೂ. ಇರುವುದಕಿಂದ 25 ಲಕ್ಷ ರೂ.ಗೆ ಇಳಿಸಿದಲ್ಲಿ ಅನುಕೂಲವಾಗುತ್ತದೆ. ವಿಶೇಷವಾಗಿ ತಪಾಸಣೆಯನ್ನು ಸರಳಗೊಳಿಸುವುದು, ಇದು ಅತ್ಯಂತ ಅನಿವಾರ್ಯವಾಗಿ ಮತ್ತು ಹೆಚ್ಚಿನ ಕೈಗಾರಿಕೆಗಳು ನಿರೀಕ್ಷೆ ಮಾಡುವಂಥದ್ದು ಈ ಒಂದು ತಪಾಸಣೆಯನ್ನು ಸರಳಗೊಳಿಸುವುದು, ಈ ಬಗ್ಗೆ ಸ್ಪಷ್ಟವಾಗಿ ಯಾವರೀತಿ ತಾವು ಮಾಡುತ್ತೀರಿ ಎಂದು ಹೇಳಬೇಕು. ಒಂದೊಂದು ಸಂಸ್ಥೆಗೆ ಸುಮಾರು ಮೂವತ್ತು ಇಲಾಖೆಗಳು ಬೇರೆ ಬೇರೆ ಸಂದರ್ಭದಲ್ಲಿ ಅಲ್ಲಿಗೆ ಸಂದರ್ಶನ ನೀಡಿ ಪ್ರತಿ ಇಲಾಖೆಯೂ ಮಾಡಿದ ಸಂದರ್ಶನದ ಸಮಯದಲ್ಲಿ ಹೆರಾಸ್ ಮೆಂಟ್ ಆಗುತ್ತದೆ. ಯಾವ ರೀತಿಯಲ್ಲಿ

ಸಮಸ್ಯೆಗಳನ್ನು ಬಗೆಹರಿಸುವುದು ಎಂದು ಸಲಹೆ ಕೊಡುವುದರ ಬದಲು ತಪ್ಪುಗಳನ್ನು ಹುಡುಕಿ ಆ ಕೈಗಾರಿಕೆಗಳನ್ನು ಹೇಗೆ ಹೆರ್‍ಯಾಸ್‌ಮೆಂಟ್ ಮಾಡಬೇಕು ಎನ್ನುವ ಯೋಚನೆ ಮಾಡುತ್ತಿದ್ದರಿಂದ, ಈ ತಪಾಸಣೆಗಳನ್ನು ಸರಳಗೊಳಿಸುವ ವ್ಯವಸ್ಥೆಯೊಳಗೆ ಇದರಲ್ಲಿ ಕೂಡ ಈ ರೀತಿಯ ಏಕಗವಾಕ್ಷಿ ಪದ್ಧತಿಯನ್ನು ತಂದರೆ ಹೆರ್‍ಯಾಸ್ ಮೆಂಟ್ ಇಲ್ಲದಂತೆ ತರುವ ಬಗ್ಗೆ ತಾವು ಯೋಚಿಸಬೇಕು. ಮತ್ತೆ ದಂಡನೆಗೆ ಸಂಬಂಧಪಟ್ಟಹಾಗೆ ಹೇಳಿದ್ದೀರಿ, ಬೃಹತ್ ಕೈಗಾರಿಕೆಗಳಿಗೆ ಸಂಬಂಧಪಟ್ಟಂತೆ, ಅನೇಕ ಸಂದರ್ಭಗಳಲ್ಲಿ ಅವರು ಪ್ಯಾರೆಲಲ್ ಸರ್ಕಾರ ನಡೆಸುತ್ತಾರೆ ಎನ್ನುವ ಚಿಂತನೆ ನಮ್ಮ ಮುಂದೆ ಬರುತ್ತಿದೆ. ನಮ್ಮ ಜಿಲ್ಲೆಗೆ ಸಂಬಂಧಪಟ್ಟ ಎಂಆರ್‌ಪಿಎಲ್ ಸಂಸ್ಥೆಯ ಕುರಿತು ನಾನು ಹೇಳುತ್ತಿದ್ದೇನೆ. ನಾವು ಒಂದು ಸಣ್ಣ ಮನೆಯನ್ನು ಕಟ್ಟಬೇಕಿದ್ದರೆ ಅದಕ್ಕೆ ಡೆವಲೆಪ್‌ಮೆಂಟ್ ಚಾರ್ಜ್‌ನ್ನು ಕಟ್ಟಲೇಬೇಕು, ಆದರೆ ಈ ಸಂಸ್ಥೆ ಹಾಗೂ ಅದಕ್ಕೆ ಸಂಬಂಧಪಟ್ಟ ಅಲೈಡ್ ಸಂಸ್ಥೆಗಳು ಸುಮಾರು 18 ಕೋಟಿ 16 ಲಕ್ಷ ರೂಪಾಯಿಗಳ ಬಾಕಿ ಇಟ್ಟುಕೊಂಡಿದ್ದಾರೆ, ಇವತ್ತಿನ ತನಕ ಅದನ್ನು ಪರಿಹಾರ ಮಾಡಲಿಕ್ಕೆ ಸಾಧ್ಯವಾಗಿಲ್ಲ. ನಮಗೆ ಇಲ್ಲಿರುವ ಕನ್‌ಸ್ಟ್ಯುಶನ್ ನಮ್ಮ ಜಿಲ್ಲಾ ಆಡಳಿತದಿಂದ ಎಲ್ಲಿಯಾದರು ಅದನ್ನು ಸಂಗ್ರಹ ಮಾಡಬೇಕು ಎನ್ನುವ ಆಲೋಚನೆ ಮಾಡಿದ್ದಲ್ಲಿ ಅಷ್ಟರಲ್ಲಿ ಈ ಒಂದು ಇಲಾಖೆಯ ಕಡೆಯಿಂದ ಫ್ಯಾಕ್ಸ್ ಬರುತ್ತೇ ನೀವು ಇದರಲ್ಲಿ ಮಧ್ಯಪ್ರವೇಶ ಮಾಡಬೇಡಿ ಎಂದು. ಒಂದು ಕಡೆ ಹೆಚ್‌ಯುಡಿ ಕಡೆಯಿಂದ ಇದು ಅನಿವಾರ್ಯವಾಗಿರುವುದರಿಂದ ಇದನ್ನು ಸಂಗ್ರಹ ಮಾಡಿ ಎನ್ನುವ ಆದೇಶ ಬಂದರೆ ಮತ್ತೊಂದು ಕಡೆ ಇದನ್ನು ಸಂಗ್ರಹಿಸಬೇಡಿ ಎಂದು ಹೇಳುವಂಥದ್ದು, ಈ ರೀತಿಯಾಗಿ ಒಂದು ಕೋ-ಆರ್ಡಿನೇಷನ್ ಇಲ್ಲದೇ ಇರುವುದರಿಂದ ಇಂಥ ಸಮಸ್ಯೆಗಳು ಉದ್ಭವವಾಗುವುದರಿಂದ, ಈ ನಿಟ್ಟಿನಲ್ಲೂ ಕೂಡ ತಾವು ಸ್ಪಷ್ಟವಾದ ಧೋರಣೆಯನ್ನು ವ್ಯಕ್ತಪಡಿಸಬೇಕೆಂದು ಈ ಸಂದರ್ಭದಲ್ಲಿ ನಾನು ತಮ್ಮಲ್ಲಿ ವಿನಂತಿ ಮಾಡಲು ಇಚ್ಛಿಸುತ್ತೇನೆ, ಧನ್ಯವಾದಗಳು.

ಶ್ರೀ ಸಿ. ಚನ್ನಿಗಪ್ಪ (ಕೊರಟಗೆರೆ) : ಮಾನ್ಯ ಅಧ್ಯಕ್ಷರೆ, ಮಾನ್ಯ ಕೈಗಾರಿಕಾ ಸಚಿವರು ತಂದಿರುವ 2002ರ ಕೈಗಾರಿಕಾ (ಸೌಲಭ್ಯ) ವಿಧೇಯಕದಲ್ಲಿ ಸ್ಪಷ್ಟವಾಗಿರುವಂತೆ ಬಂಡವಾಳ ಹೂಡುವಿಕೆಯಲ್ಲಿ ಕೈಗಾರಿಕೆಗಳಿಗೆ ಉತ್ತೇಜನ ಕೊಡಬೇಕೆಂದು ಸರ್ಕಾರ ಏನು ಕನಸು ಕಂಡಿದೆ, ನಾನು ನೋಡಿದ ಹಾಗೆ ಅದು ವಿಫಲವಾಗಿದೆ. ಉದಾಹರಣೆಗೆ ಎನ್‌ಜಿಇಎಫ್ ಬಗ್ಗೆ ಹೇಳುವುದಾದರೆ, ಅದಕ್ಕೂ ಒಂದು ಕಾಯಕಲ್ಪ ಕಾಣದೇ ಇವತ್ತು ಆ ವಸ್ತುಗಳಿಗೆ ಎಷ್ಟೇ ಡಿಮ್ಯಾಂಡ್ ಇದ್ದೂ, ಟೆಂಡರ್ ಕರೆದು ಕಣ ಕಟ್ಟಿದ್ದರೂ ಸಹ ತಯಾರಿಸಿ ಕೊಡುತ್ತೇವೆ ಎನ್ನುವ ಭಾವನೆಯನ್ನು ಆ ಕಂಪನಿಗೆ ಸರ್ಕಾರ ಇವತ್ತು ಕೊಡದೇ, ಸರ್ಕಾರ ಉತ್ತಮವಾದ ಕಾನೂನು ಮಾಡದೇ, ಟೆಂಡರ್ ಕರೆದು ಸಪ್ಲೈಗೆ ಆರ್ಡರ್ ಕೊಟ್ಟಿದ್ದರೋ ಅಷ್ಟು ಹಣವನ್ನು ಸ್ವೀಕಾರ ಮಾಡಿಕೊಂಡು ಕೊನೆಗೆ ಆ ಫ್ಯಾಕ್ಟರಿ ಮುಚ್ಚುವಂಥ ಸ್ಥಿತಿ ನಮ್ಮ ರಾಜ್ಯದಲ್ಲಿ ಆಗಿದೆ. ಉದಾಹರಣೆಗೆ ಸೋಪು ಫ್ಯಾಕ್ಟರಿ ಇರಬಹುದು, ಕಿಯೋನಿಕ್ಸ್ ಇರಬಹುದು, ಮೈಸೂರು ಲ್ಯಾಂಪ್ಸ್ ಇರಬಹುದು, ಇದರಲ್ಲಿದ್ದಂಥ ಕಾರ್ಮಿಕರು ವಿಆರ್‌ಎಸ್ ತೆಗೆದುಕೊಂಡು ಮನೆಗೆ ಹೋಗಿ ಅವರು ನಿರುದ್ಯೋಗಿಗಳಾಗಿ ಇವತ್ತು ಕಳ್ಳತನ ಮಾಡಿಲಿಕ್ಕೆ ಪ್ರಾರಂಭಿಸುತ್ತಾರೆ, ಕೊಲೆ, ದರೋಡೆಗಳು, ನಡೆಯುವುದಕ್ಕೆ ಪ್ರಾರಂಭವಾಗುತ್ತದೆ. ಮಾನ್ಯ ಮಂತ್ರಿಗಳು ಇವತ್ತೇನು ಈ ವಿಧೇಯಕವನ್ನು ಮಂಡಿಸಿದ್ದಾರೆ, ಬೇರೆ ರಾಷ್ಟ್ರಗಳಿಂದ ನಮ್ಮ ರಾಜ್ಯಕ್ಕೆ ಬಂಡವಾಳ ಹೂಡಿಕೆದಾರರು ಬರುತ್ತಾರೆ. ಅವರನ್ನು ಆಕರ್ಷಣೆ ಮಾಡುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳು ಏನು ಉತ್ತಮವಾದ

ಕನಸನ್ನು ಕಂಡಿದ್ದಾರೆ ಅದನ್ನು ನಾನು ಸ್ವಾಗತಿಸುತ್ತೇನೆ, ಅದೇರೀತಿಯಾಗಿ ಉತ್ತಮವಾದ ಕನಸಿಗೆ ತಕ್ಕಂತೆ, ಭೂಮಿಯಾಗಬಹುದು, ಕುಡಿಯುವ ನೀರು ಆಗಬಹುದು, ಪವರ್ ಆಗಬಹುದು, ಸರ್ಕಾರ ಸರಳವಾಗಿ ಕೊಡುವ ರೀತಿಯಲ್ಲಿ ಅವರಿಗೆ ಕೊಟ್ಟು ಅಂಥ ಕಂಪನಿಗಳನ್ನು ನಮ್ಮ ರಾಜ್ಯದಲ್ಲಿ ಬರುವುದಕ್ಕೆ ಆಕರ್ಷಣೆ ಮಾಡಿ, ಕೈಗಾರಿಕೆ ಸರಳೀಕರಣದಲ್ಲಿ ಆಗುವ ಅನುಕೂಲಗಳನ್ನು ನಿರುದ್ಯೋಗಿಗಳಿಗೆ ಕೆಲಸ ಸಿಗುವಂತಹ ಅವಕಾಶವಿರಬಹುದು, ಉತ್ತಮವಾದ ವಸ್ತುಗಳನ್ನು ತಯಾರಿಸಿ ಅದರಿಂದ ಲಾಭ ತೆಗೆದುಕೊಳ್ಳುವ ವಿಚಾರ ಇರಬಹುದು, ಇದು ಯಾವುದನ್ನು ಸರಿಯಾಗಿ ಇಲ್ಲಿ ಹೇಳಿಲ್ಲ. ಏನು ಇವತ್ತು ಸಿಂಗಲ್ ವಿಂಡೋ ಕಮಿಟಿ ಮಾಡುತ್ತೇವೆಂದು ಹೇಳುತ್ತಾರೆ, ಭಾಗಗಳನ್ನಾಗಿ ಮಾಡಿ ಹನ್ನೊಂದು ಅರ್ಜಿಗಳನ್ನು ತೆಗೆದುಕೊಂಡು ಮಾಡುವುದು ಹಿಂದೆ ಏನಿತ್ತು, ಅದನ್ನು ಸರಳೀಕರಣ ಮಾಡುವ ದೃಷ್ಟಿಯಲ್ಲಿ ಇವತ್ತು ಒಂದು ಅರ್ಜಿಯನ್ನು ಪಡೆದುಕೊಂಡು ಕೈಗಾರಿಕೆಗಳನ್ನು ಆಕರ್ಷಣೆ ಮಾಡುವ ವಿಚಾರದಲ್ಲಿ ಇವರೇನು ಹೇಳಿದ್ದಾರೆ, ಅದನ್ನು ಸರಿಯಾಗಿ ಇದರಲ್ಲಿ ನಮೂದಿಸಿಲ್ಲ, ಅದನ್ನು ಯಾವ ಟೈಮಿಗೆ, ಏನು ಮಾಡುತ್ತೇವೆ, ಎಷ್ಟರಮಟ್ಟಿಗೆ ಅದನ್ನು ಕಾನೂನಿನಲ್ಲಿ ಅಳವಡಿಸುತ್ತೇವೆ ಎನ್ನುವ ಮಾತನ್ನು ಇಲ್ಲಿ ಸರಿಯಾಗಿ ಹೇಳಿಲ್ಲ. ಅದೇರೀತಿಯಾಗಿ ಇಲ್ಲಿ ಇನ್ನೂ ವಿಧೇಯಕ ಮಂಡನೆಯಾಗಿಲ್ಲ, ಆದರೆ ಸಿಂಗಲ್ ವಿಂಡೋ ಆಗಿದೆ ಎಂದು ಹೇಳುತ್ತಾರೆ, ವಿಧೇಯಕ ಮಂಡನೆಯಾದ ನಂತರ ಸಿಂಗಲ್ ವಿಂಡೋ ಮಾಡುವಂಥ ವಿಚಾರಗಳನ್ನು ಅದರಲ್ಲಿ ಸರಿಯಾಗಿ ನಮೂದಿಸಿಲ್ಲ. ಅದೇ ರೀತಿ ಜಿಲ್ಲಾ ಮಟ್ಟದ ಕಮಿಟಿ ಮಾಡುತ್ತೇವೆಂದು ಹೇಳಿದ್ದಾರೆ, ಈ ಕಮಿಟಿ ಟೈಮ್ ಲಿಮಿಟ್ಸ್ ಏನೂ ಹೇಳಿಲ್ಲ, ಎಷ್ಟು ಟೈಮ್ ಇಟ್ಟಿದ್ದೇವೆ, ಆ ಟೈಮ್ ಲಿಮಿಟ್‌ನಲ್ಲಿ ಆ ಕಮಿಟಿ ವರದಿ ಕೊಡಬೇಕು, ಅದರ ಪ್ರಕಾರ ಅದಕ್ಕೆ ಒಪ್ಪಿಗೆ ಕೊಡಬೇಕು, ಅದಕ್ಕೆ ಸಲಹೆ ಸಹಕಾರ ಕೊಡಬೇಕೆಂದು ಇಲ್ಲಿ ನಮೂದಿಸಿಲ್ಲ. ಅದೇ ರೀತಿಯಾಗಿ ಸರ್ಕಾರದ ಕಾರ್ಯದರ್ಶಿಗಳ ಕೈಕೆಳಗೆ ಕೆಲಸ ಮಾಡಬೇಕೆಂದು ಹೇಳಿದ್ದಾರೆ, ರಾಜಕಾರಣಿಯಾಗಬಹುದು, ಮಂತ್ರಿಗಳಾಗಬಹುದು, ಸರ್ಕಾರದ ಕಾರ್ಯದರ್ಶಿಗಳ ಕೈಕೆಳಗೆ ಕೆಲಸ ಮಾಡಲಿಕ್ಕೆ ಅವರು ನೈತಿಕವಾಗಿ ಒಪ್ಪುವುದಿಲ್ಲ. ಅದನ್ನು ನಿರ್ದಿಷ್ಟವಾಗಿ ಮಾಡಿಲ್ಲ. ಇವತ್ತು ಕೈಗಾರಿಕೀಕರಣದಿಂದ ರಾಜ್ಯ ಆರ್ಥಿಕವಾಗಿ ಮುಂದುವರಿಯಬೇಕೆಂದು ಈ ವಿಧೇಯಕದಲ್ಲಿ ಸ್ಪಷ್ಟವಾಗಿ ಹೇಳದೆ ಇವತ್ತು ಸಿಂಗಲ್ ವಿಂಡೋವನ್ನು ಮಾಡುತ್ತೇವೆಂದು ಹೇಳಿದ್ದಾರೆ, ಸರ್ಕಾರವು ಇದನ್ನು ಎಷ್ಟರಮಟ್ಟಿಗೆ ತರುವುದರಿಂದ ನಮ್ಮ ರಾಜ್ಯದ ಕೈಗಾರಿಕೆಯನ್ನು ಎಷ್ಟರಮಟ್ಟಿಗೆ ಹೆಚ್ಚಿಸಬಹುದೆನ್ನುವ ಬಗ್ಗೆ ಹೆಚ್ಚಿಗೆ ಬಂಡವಾಳವನ್ನು ಅಟ್ರಾಕ್ಷನ್ ಮಾಡುವ ಬಗ್ಗೆ ಇಲ್ಲಿ ಸ್ಪಷ್ಟವಾಗಿ ಹೇಳಿಲ್ಲ. ದಯಮಾಡಿ ಮಾನ್ಯ ಮಂತ್ರಿಗಳು ಇದರ ಬಗ್ಗೆ ಸ್ಪಷ್ಟಪಡಿಸಬೇಕು, ಆದ್ದರಿಂದ ಈ ವಿಧೇಯಕ ಸರಿಯಿಲ್ಲ ಎನ್ನುವ ಮಾತನ್ನು, ಇದನ್ನು ಸರಿಯಾಗಿ ಮಾಡಿಲ್ಲವೆಂದು ಮತ್ತು ಅಪೀಲು ಪ್ರಾಧಿಕಾರಕ್ಕೆ ಯಾವುದೇ ಸ್ಪಷ್ಟತೆಯನ್ನು ಕೊಟ್ಟಿಲ್ಲ, ಇಲ್ಲಿ ಅಪೀಲು ಪ್ರಾಧಿಕಾರವೆಂದು ಹೇಳಿದ್ದಾರೆ ಅದನ್ನು ಸರಿಯಾಗಿ ನಮೂದಿಸಿಲ್ಲ, ಇವೆಲ್ಲವನ್ನೂ ಸರಿ ಮಾಡಬೇಕೆಂದು ಹೇಳುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ (ಬ್ರಹ್ಮಾವರ) : ಮಾನ್ಯ ಅಧ್ಯಕ್ಷರೆ, ಈ ಬಿಲ್ಲಿನ ಬಗ್ಗೆ ಮಾನ್ಯ ಮಲ್ಲಿಕಾರ್ಜುನರವರು ಹೇಳಿದ ಹೇಗೆ ಇದ್ದ ಅಗತ್ಯವಿತ್ತೇ ಎನ್ನುವುದು ಪ್ರಥಮ ಪ್ರಶ್ನೆಯಾಗಿದೆ. ಅದರಲ್ಲಿ ಹೈಪವರ್ ಕಮಿಟಿ, ಸಿಂಗಲ್ ವಿಂಡೋ, ಅದನ್ನು ಸಿಂಪ್ಲಿಫೈ ಮಾಡುವುದಕ್ಕೆ ಆಗುವುದಿಲ್ಲ ಅಂತ, ಹೈಪವರ್ ಕಮಿಟಿಯನ್ನು ಮಾಡಿ, ಸಿಂಗಲ್ ವಿಂಡೋವನ್ನು ಮಾಡಿದರೆ ಎರಡಕ್ಕೂ

ನೀವು ಡೀಮ್ಡ್ ಅಪ್ರೂವಲ್ ಕೊಡುತ್ತೀರಾ? ನೀವು ಕಮಿಟಿ ಸಿಟಿಂಗ್ ಡಿಲೇ ಆದರೆ ಅದಕ್ಕೂ ಸಹ ಡೀಮ್ಡ್ ಅಪ್ರೂವಲ್ ಏನಾದರೂ ಇದೆಯಾ ಇದು ಒಂದು. ಒಂದು ವೇಳೆ ಇದನ್ನು ಸಿಂಪ್ಲಿಫೈ ಮಾಡಿ ಕಂಬೈಂಡ್ ಅಪ್ಲಿಕೇಷನ್ ಎನ್ನುವ ಒಂದು ವ್ಯವಸ್ಥೆಯನ್ನು ಮಾಡಿದ್ದೀರಿ. ಕಂಬೈಂಡ್ ಅಪ್ಲಿಕೇಷನ್‌ನನ್ನು ನಮ್ಮ ಹೈಪವರ್ ಕಮಿಟಿಗೆ ಕೊಟ್ಟಾಗ ನೋಡಲ್ ಏಜೆನ್ಸಿಯವರು ಅದನ್ನು ಡೈರೆಕ್ಟಾಗಿ ನಿಮ್ಮ ಕಮಿಟಿಗೆ ಕೊಟ್ಟಂತಹ ಅಪ್ಲಿಕೇಷನ್‌ನನ್ನು ಎಲ್ಲಾ ಕ್ಲಿಯರೆನ್ಸ್‌ನ್ನು ತೆಗೆದು ಎಂಟರ್‌ಪ್ರೀನರ್‌ಗೆ ಕೊಡುವುದಕ್ಕೆ ಆಗುತ್ತದೆಯಂತಾ ಪುನಃ ಇವರು ನಿಮ್ಮ ಮುಂದೆ ಅಪ್ರೂವಲ್‌ವನ್ನು ತೆಗೆದುಕೊಂಡು ಸಿಂಗಲ್ ವಿಂಡೋ ಮುಂದೆ ಕೊಟ್ಟು ಅದಕ್ಕೆ ನೋಡಲ್ ಏಜೆನ್ಸಿಯವರು ಪುನಃ ಬರುವಂತಹದ್ದು, ಆ ಅಪ್ಲಿಕೇಷನ್ಸ್‌ನ್ನು ಕ್ಲಿಯರೆನ್ಸ್ ಮಾಡಿಕೊಡುವುದಕ್ಕಿಂತ ಸಿಂಗಲ್ ವಿಂಡೋ ಅಂದರೆ ನಿಮ್ಮ ಹೈಪವರ್ ಕಮಿಟಿಯು ಇಲ್ಲದೇ ಒಂದೇ ವ್ಯವಸ್ಥೆಯನ್ನು ಮಾಡುವುದಕ್ಕೆ ಆಗುತ್ತದೆಯೇ? ಅದನ್ನು ತಾವು ನೋಡಬೇಕಾಗುತ್ತದೆ. ಇಲ್ಲದೆ ಇದ್ದರೆ ಈ ಕಮಿಟಿ ಮಾಡುವಂತಹ ಅಪ್ರೂವಲ್, ಪುನಃ ಸಿಂಗಲ್ ವಿಂಡೋ ಮುಂದೆ ಬರುವಾಗ, ಪುನಃ ನೋಡಲ್ ಏಜೆನ್ಸಿಯವರು ಎಂಟರ್‌ಪ್ರೀನ್ಯೂರ್‌ಗೆ ಸಿಂಗಲ್ ವಿಂಡೋ ಮುಂದೆ ಕೊಟ್ಟ ಮೇಲೆ, ಆ ಎಂಟರ್‌ಪ್ರಿನ್ಯೂರ್ ಕೊನೆಯವರೆವಿಗೆ ಅರ್ಜಿಗಳನ್ನು ಹಿಡಿದುಕೊಂಡು ಟೇಬಲ್‌ನಿಂದ ಟೇಬಲ್‌ಗೆ ಅವರು ಹೋಗುವಂತಹ ಪರಿಸ್ಥಿತಿ ಇದೆಯಾ ಅಥವಾ ಇಲ್ಲವಾ ಅಂತ. ಸಂಪೂರ್ಣವಾಗಿ ನೋಡಲ್ ಏಜೆನ್ಸಿಯವರೆ ವ್ಯವಸ್ಥೆಯನ್ನು ಮಾಡಿಕೊಡಬೇಕು, ಏಕೆಂದರೆ, ಗುಜರಾತ್‌ನಲ್ಲಿ ಅದೇ ರೀತಿಯಾದ ವ್ಯವಸ್ಥೆ ಇದೆ, ಅದನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ ಎನ್ನುವಂತಹದ್ದು, ಮತ್ತೇ ಈ ಅಪೀಲ್ ಅಥಾರಿಟಿಯ ಬಗ್ಗೆ ಈಗಾಗಲೇ ಮಾತನಾಡಿದ್ದಾರೆ. ಪುನಃ ಅದರ ಬಗ್ಗೆ ಮಾತನಾಡುವುದಿಲ್ಲ, ನೀವು ಫೆನಾಲ್ಟಿಯ ಬಗ್ಗೆ ಹೇಳಿದ್ದೀರಿ, Rs. 5,000/- for the first offence and for the second and subsequent offence Rs. 10,000-00 ಎಂದು ಮಾಡಿದ್ದೀರಿ, 100 ಕೋಟಿ ರೂಪಾಯಿಗಳು, 1000 ಕೋಟಿ ರೂಪಾಯಿಗಳನ್ನು ಇನ್‌ವೆಸ್ಟ್ ಮಾಡುವವನಿಗೆ ನೀವು 5000-00 ರೂಪಾಯಿಗಳನ್ನು ಫೆನಾಲ್ಟಿ ಹಾಕುವುದು. ನಿಮ್ಮ ನೋಡಲ್ ಏಜೆನ್ಸಿಯವರೆ ಇದನ್ನು ನೋಡುವಾಗ ಎಂಟರ್‌ಪ್ರಿನ್ಯೂರ್ ತಪ್ಪು ಬರಲಿಕ್ಕಿಲ್ಲ. ಮತ್ತೆ ಡೀಮ್ಡ್ ಅಪ್ರೂವಲ್ ಆದಾಗ if it is because of the mistake of the concerned authority, ಡೀಮ್ಡ್ ಅಪ್ರೂವಲ್ ಸಿಕ್ಕಿತ್ತು, ಬೇಕು ಅಂತಲೇ ಫೈಲ್‌ನ್ನು ತೆಗೆದಿಡುತ್ತಾರೆ, ಅವರಿಗೆ ಡೀಮ್ಡ್ ಅಪ್ರೂವಲ್ ಸಿಗಲಿ ಎಂದು. ಅಂತಹ ಕನ್ಸ್ ರ್ವ್ ಅಫೀಸರ್ ಮೇಲೆ ಆ್ಯಕ್ಷನ ತೆಗೆದುಕೊಳ್ಳುತ್ತೀರಾ? ಡೆಲಿಬರೇಟಾಗಿ ಫೈಲನ್ನು ಇಟ್ಟುಕೊಂಡು ಅಪ್ರೂವಲ್ ಸಿಕ್ಕುವ ಹಾಗೆ ವ್ಯವಸ್ಥೆಯನ್ನು ಮಾಡುವುದಕ್ಕೆ whether you are going to take action agaisnt the concerned officer? ಇಲ್ಲದೆ ಇದ್ದರೆ ಏನಾಗುತ್ತದೆ ಎಂದರೆ, ಇವತ್ತು ಮಾನ್ಯ ಸದಸ್ಯರಾದ ಶಿವಾನಂದ ಪಾಟೀಲ್‌ರವರು ಹೇಳಿದರು, ಇದರಲ್ಲಿ ಆಟೋಮ್ಯಾಟಿಕ್ ಕ್ಲಿಯರೆನ್ಸ್ ಸಿಗುತ್ತದೆ, ನೀವು ಅದರ ಬಗ್ಗೆ ತಲೆಯನ್ನು ಕೆಡಿಸಿಕೊಳ್ಳಬೇಕಾಗಿಲ್ಲ, ಅಂತಹ ವ್ಯವಸ್ಥೆ ಏನಾದರೂ ಆಗುತ್ತದೆಯೇ ಎಂಬುದರ ಬಗ್ಗೆ ಉತ್ತರವನ್ನು ಕೊಡಬೇಕಾಗುತ್ತದೆ.

ಶ್ರೀ ಕೆ. ಶ್ರೀನಿವಾಸಗೌಡ (ಕೋಲಾರ) : ಮಾನ್ಯ ಅಧ್ಯಕ್ಷರೆ, ಮಾನ್ಯ ದೇಶಪಾಂಡೆಯವರು, ಸುಮಾರು 8 ವರ್ಷಗಳಿಂದಲೂ ಕೂಡ ಈ ಖಾತೆಯ ಮಂತ್ರಿಗಳಾಗಿದ್ದಾರೆ. ಅವರು ಈ ವಿಧೇಯಕವನ್ನು ತರುವಾಗ 8 ವರ್ಷಗಳಾದ ಮೇಲೆ ಜ್ಞಾನೋದಯವಾಯಿತೇ?

ಏಕೆಂದರೆ, ಅವರು ನಮ್ಮ ಪಕ್ಷದಿಂದ ಆ ಕಡೆಗೆ ಹೋದಾಗ ತೆಲುಗಿನಲ್ಲಿ ಒಂದು ಗಾದೆಯು ಇದೆ "ಪೋಯಿರಾ ಪಿಶಾಬಿ ಅಂದರೆ ವಚ್ಚಿರಾಗವಕ್ಷಿರಾ ಅಂತ" ಏಕ-ಗವಾಕ್ಷಿಯಲ್ಲಿ ಮತ್ತೆ ಇವತ್ತು ಇಲ್ಲಿ ಪ್ರತ್ಯಕ್ಷವಾಗುತ್ತಿದೆ. ಅದು ಮಾನ್ಯ ದೇಶಪಾಂಡೆಯವರಿಗೆ ಏನು ಈ ವಿಧೇಯಕವನ್ನು ಮಂಡಿಸುವಾಗ ಏಕಗವಾಕ್ಷಿ ಸಹಕಾರ ಸಂಘಗಳಲ್ಲಿ ಅದರಲ್ಲೂ ಆಂಧ್ರಪ್ರದೇಶದಲ್ಲಿ ಸಿಂಗಲ್ ವಿಂಡೋ ಸಿಸ್ಟಮ್‌ನ್ನು ತಂದರು, ಅದು ಫೈಲ್ಯೂರ್ ಆಗಿದೆ. ಅದನ್ನು ನಾನು ಏತಕ್ಕಾಗಿ ಹೇಳುವುದಕ್ಕೆ ಇಚ್ಛಿಪಡುತ್ತೇನೆಂದರೆ, ನಾನು ಒಂದು ಸಾರಿ ಚೈನಾ ದೇಶಕ್ಕೆ ಹೋಗಿದ್ದೆ, ಅಲ್ಲಿ ಇಂಡಸ್ಟ್ರಿಯಲ್ ಗ್ರೋತ್ ಏರಿಯಾ ನಾವು ಏನು ಇಲ್ಲಿ ಕರೆಯುತ್ತೇವೆ, ಅಲ್ಲಿ ಕಲವು ಏರಿಯಾಗಳಲ್ಲಿ ಅಲ್ಲಿ ಜೈಮನ್ ಎಂಬ ಸಿಟಿಗೆ ಹೋಗಿದ್ದೆ. ಅಲ್ಲಿ ಎಲ್ಲಾ ಸೌಲಭ್ಯಗಳನ್ನು ಕೊಡುತ್ತಾರೆ. ಅಲ್ಲಿ ಸಿಂಗಲ್ ವಿಂಡೋ ಅಂತ ಕರೆಯುತ್ತಾರೋ ಏನೋ ನನಗೆ ಗೊತ್ತಿಲ್ಲ. ಅಲ್ಲಿ ಅವರ ದೇಶದ ಜನಗಳಿಗೆ ಎಂಪ್ಲಾಯ್‌ಮೆಂಟ್ ಕೊಡಬೇಕು ಅವರು ಟ್ಯಾಕ್ಸ್ ಬಗ್ಗೆ ವಿನಾಯಿತಿಯನ್ನು ಕೊಡುತ್ತಾರೆ, ಈ ತರಹದ ಚಿಂತನೆಯನ್ನು ಮಾಡುವುದಕ್ಕೆ ಬೇರೆ ದೇಶಗಳನ್ನು ನಾವು ಅಟ್ರಾ ್ಯಕ್ಟ್ ಮಾಡುವುದಕ್ಕೆ ಇದರಿಂದ ಏನಾದರೂ ಪ್ರಯೋಜನ ಇದೆಯಾ ಎನ್ನುವುದನ್ನು ಹೇಳಬೇಕಾಗುತ್ತದೆ. ತಾವು 8 ವರ್ಷಗಳಾದ ಮೇಲೆ ಇದುವರೆವಿಗೂ ಈ ರಾಜ್ಯದಲ್ಲಿ ಇಂಡಸ್ಟ್ರಿಯಲ್ ಗ್ರೋತ್ ಆಗಲಿಲ್ಲವೇ? ತಾವುಗಳು ಮಾತು ಎತ್ತಿದರೆ ನಮ್ಮಲ್ಲಿ ಬಹಳಷ್ಟು ಆಗಿದೆ, ಹಾಗೆ ಹೀಗೆ ಎಂದು ಬೊಗಳೆಯನ್ನು ಹೊಡೆಯುತ್ತಿರುತ್ತೀರಿ. ಇಷ್ಟು ದಿವಸವು ಅಲ್ಲಿ ಗ್ರೋತ್ ಇಲ್ಲವೇ, ಇದನ್ನು ಮಾಡುವುದರಿಂದ ಗ್ರೋತ್ ಆಗುತ್ತದೆಂದು ತಾವು ಉದ್ದೇಶಗಳನ್ನು ಹೇಳುವುದರಲ್ಲಿ ಹೇಳುತ್ತಿದ್ದೀರಿ. ನಾನು 10 ದಿವಸಗಳ ಹಿಂದೆ ರಷ್ಯಾ ದೇಶಕ್ಕೆ ಹೋಗಿದ್ದೆ, ಅಲ್ಲಿ ಸೆಂಟ್‌ಬರ್ಗ್‌ನಲ್ಲಿ ಒಬ್ಬರು ನನಗೆ ಸಿಕ್ಕಿ ನಿಮ್ಮದು ಯಾವ ದೇಶವೆಂದು ಕೇಳಿದರು, ನಾನು ಭಾರತ ದೇಶವೆಂದು ಹೇಳಿದ್ದೆ, ಅವರು ಕಡೆಗೆ ಯಾವ ರಾಜ್ಯವೆಂದು ಕೇಳಿದರು ನಾನು ಕರ್ನಾಟಕವೆಂದೇ, ಅದಕ್ಕೆ ಓಯು ಆರ್‌ಎ ಕಂಪ್ಯೂಟರ್ ಅಂದ. ನನಗೆ ಒಂದು ತರಹ ಖುಷಿಯಾಯಿತು, ಬೇರೆ ದೇಶದಲ್ಲಿಯೂ ಕೂಡ ನಮ್ಮ ರಾಜ್ಯದ ರಾಜಧಾನಿಯಾದಂತಹ ಬೆಂಗಳೂರು, ಒಂದು ತರಹ ಸಿಲಿಕಾನ್ ಸಿಟಿ ಎಂದು ಏನೋ ಇದನ್ನು ಕರೆಯುತ್ತೇವೆ, ಬೇರೆ ದೇಶಗಳಲ್ಲಿಯೂ ಕೂಡ ಬಹಳ ಪ್ರಚಾರವೂ ಆಗಿದೆ, ಅದಕ್ಕೆ ಅಟ್ರಾಕ್ಷನ್ ಕೂಡ ಇದೆ. ಆದರೆ ನೀವು ತಂದಿರುವಂತಹ ಈ ವಿಧೇಯಕ ಏನಿದೆ ಇವತ್ತು ಅದರಿಂದ ಪ್ರಯೋಜನಗಳೇನು? ಮಾನ್ಯ ಸದಸ್ಯರಾದ ಶಿವಾನಂದ ಪಾಟೀಲರು ಹೇಳಿದ ಮೇಲೆ ಇದು ರಾಜಕೀಯವಾಗಿ ತೀರ್ಮಾನಗಳು ಆಗುವುದಾಗಿದ್ದರೆ ಈ ಸಿಂಗಲ್ ವಿಂಡೋನೂ ಕೂಡ ಫೇಲಾಗುತ್ತದೆ, ಉಳಿದ ಯಾವುದೇ ಕಮಿಟಿಗಳು ಕೂಡ ಇದರಲ್ಲಿ ಕೆಲಸವಾಗುವುದಿಲ್ಲವೆಂಬ ಮಾತನ್ನು ನಾನು ಹೇಳುತ್ತೇನೆ. ನೀವು ವಿದೇಶಿ ಕಂಪನಿಗಳಿಗೆ ಬಹಳ ಮೇವುಗಳನ್ನು ಹಾಕುತ್ತಿದ್ದೀರಿ, "ಚಿನ್ನದ ಕುದುರೆ ಲದ್ದಿ ಹಾಕುತ್ತದೆ ಸ್ವಾಮಿ, ಅದು ಬೇರೆ ಲದ್ದಿ ಹಾಕುವುದಿಲ್ಲ" ಅದನ್ನು ತಾವು ಅರ್ಥ ಮಾಡಿಕೊಳ್ಳಬೇಕು. ನಮ್ಮ ದೇಶದ ಇಂಡಸ್ಟ್ರಿಗಳನ್ನು ಯಾವ ತರಹ ಬೆಳೆಸಬೇಕೆಂಬುದರ ಬಗ್ಗೆಯೂ ಕೂಡ ನೋಡಬೇಕು. ನೀವು ಅನೇಕ ಸಾರಿ ಹಿಂದೆ ಮಾಡಿದಂತಹ, ಇವತ್ತು 370 ಕೋಟಿ ರೂಪಾಯಿಗಳಷ್ಟು ಸಬ್ಸಿಡಿ ಬಾಕಿಯನ್ನಿಟ್ಟುಕೊಂಡಿದ್ದೀರಿ, ಅದನ್ನು ಕೊಡಬೇಕೆಂಬ ಬಗ್ಗೆ ಚಿಂತನೆ ಬಹಳಷ್ಟು ಇದೆ, ಅದನ್ನು ನಮ್ಮ ಸರ್ಕಾರವಿದ್ದಾಗ ಒಂದೇ ದಿವಸದಲ್ಲಿ ಎಲ್ಲವನ್ನು ಕೊಟ್ಟುಬಿಟ್ಟಿದೆವು. ಅದನ್ನು ನೀವು ಮಾಡಿಸಿ ಕೊಡಿಸಿದ್ದೀರಿ. ಈ ಸಾರಿಯೂ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್‌ನವರಿಗೆ ಇದರಿಂದ ಬಹಳ ತೊಂದರೆಯಾಗುತ್ತದೆ. ಸಬ್ಸಿಡಿಯನ್ನು ಬೇಗನೆ ಕೊಡುವಂತಹ

ಕೆಲಸವನ್ನು ಮಾಡಬೇಕು. ಇವತ್ತು ಫ್ಯಾಕ್ಟರಿ ಮುಚ್ಚುವುದು ಸಾಮಾನ್ಯವಾಗಿದೆ. ಈ ದೇಶದಲ್ಲಿ ಪಬ್ಲಿಕ್ ಸೆಕ್ಟಾರ್ ಆಗುವುದಿಲ್ಲ, ಇನ್ನು ನಾವು ಯಾವಾಗಲೂ ಪ್ರೈವೇಟ್ ಸೆಕ್ಟಾರ್‌ನವರಿಗೆ ಅವಕಾಶವನ್ನು ಕೊಡಬೇಕು. ಇದರ ಬಗ್ಗೆ ಆಂಧ್ರಪ್ರದೇಶದಲ್ಲಿ ಒಂದು ಸಿಸ್ಟಮ್‌ನ್ನು ಮಾಡಿದ್ದಾರೆ, ಇದರ ಬಗ್ಗೆ ತಮಗೆ ಗೊತ್ತಿರಬಹುದು. ಬೇರೆ ದೇಶದ ಯಾವುದೇ ಒಬ್ಬ ಇಂಡಸ್ಟ್ರಿಯಾಲಿಸ್ಟ್‌ರವರು ಬಂದು ಅಲ್ಲಿ ಇಂಡಸ್ಟ್ರೀಸ್‌ನ್ನು ಹಾಕಬೇಕಾದರೆ ಅವನು ಜಮೀನನ್ನು ಗುರುತಿಸುವುದರಿಂದ ಹಿಡಿದು, ಅದರ ಕನ್ವರೆಷನ್‌ನನ್ನು ಹಿಡಿದುಕೊಂಡು ಅವನ ಇನ್‌ವೆಸ್ಟ್ ಮೆಂಟಿವರೆವಿಗೂ ಕೂಡ ಮುಖ್ಯಮಂತ್ರಿಗಳೇ ಅದನ್ನು ಮಾನಿಟರ್ ಮಾಡುತ್ತಾರೆ. ಆ ತರಹ ಮಾನಿಟರ್ ಮಾಡುವುದಕ್ಕೆ ಏನಾದರೂ ನೀವು ಚಿಂತನೆಯನ್ನು ಮಾಡಿದ್ದೀರಾ? ಇದನ್ನು ತಾವು ಹೇಳಬೇಕೆಂದು ತಿಳಿಸುತ್ತಾ, ಇದರ ಜೊತೆಗೆ ಗ್ರೋತ್ ಸೆಂಟರ್ಸ್ ಎಂದು ನೀವು ಡಿಕ್ಲೇರ್ ಮಾಡುವಾಗ, ಇದನ್ನು ನಾನು ಏತಕ್ಕಾಗಿ ಹೇಳುತ್ತಿದ್ದೇನೆಂದರೆ, ಈಗಾಗಲೇ ಕೆ.ಜಿ.ಎಫ್‌ನಲ್ಲಿ ಬಿಎಜಿಎಂಎಲ್‌ನ್ನು ಮುಚ್ಚಲಾಗಿದೆ. ಕೋಲಾರ ಮತ್ತಿತರ ಕಡೆ ಎಲ್ಲಿ ಬೀಗ ಹಾಕಿದೆಯೋ ಅಲ್ಲೆಲ್ಲಾ ಕಳ್ಳತನಗಳಾಗುತ್ತಿದೆ. ಗ್ರೋತ್ ಸೆಂಟರ್‌ಗೆ, ಕೆಜಿಎಫ್‌ನ್ನು ತೆಗೆದುಕೊಂಡರೆ ಅಟ್‌ಲೀಸ್ಟ್ ನಮಗೆ ಅಲ್ಲಿ ಉಪಯೋಗವಾಗುತ್ತದೆನ್ನುವಂತಹ ಮಾತನ್ನು ಹೇಳುತ್ತಾ ಇವತ್ತು ಈ ವಿಧೇಯಕ, ಸಿಂಗಲ್ ವಿಂಡೋ, ಈ ಏಕ ಗವಾಕ್ಷಿಯಲ್ಲಿ ಅದಕ್ಕೆ 15 ದಿವಸಗಳೆಂದು ಟೈಮ್‌ನ್ನು ಇಡಬೇಕು, ನೀವು 2 ತಿಂಗಳು, 2 ವರ್ಷ ಎಂದು ಇಡುವುದಕ್ಕಿಂತ, ಒಂದು ಸಾರಿ ಅರ್ಜಿಯನ್ನು ಹಾಕಿದ ಮೇಲೆ ನೀವು ಅದನ್ನು ಒಪ್ಪುತ್ತೀರೋ ಅಥವಾ ಬಿಡುತ್ತೀರೋ ನನಗೆ ಗೊತ್ತಿಲ್ಲ. ಅದರ ಬಗ್ಗೆ 15 ದಿವಸಗಳಲ್ಲಿ ತೀರ್ಮಾನವಾಗಬೇಕು. ಇಲ್ಲದೇ ಇದ್ದರೆ ಯಾರು ಅರ್ಜಿಯನ್ನು ಹಾಕಿದ್ದಾರೆ, ಅದು ಅವನಿಗೆ ಆಗಬೇಕೆಂದು ನಾನು ತಮ್ಮ ಮೂಲಕ ಹೇಳಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಮಾನ್ಯ ಮಂತ್ರಿಗಳು ಉತ್ತರ ಹೇಳಿ. ಮಾನ್ಯ ವಿಜಯಕುಮಾರ್ ಶೆಟ್ಟಿಯವರೆ, ನಾನು ಕರೆದಾಗ ನೀವು ಆಚೆ ಇದ್ರಿ. ನೀವು ಈಗ ಕೇಳಿದರೆ ಸಮಯವಿಲ್ಲ. ಕ್ಲಾರಿಫಿಕೇಶನ್ ಕೇಳಿ.

\+ ಶ್ರೀ ಆರ್.ವಿ. ದೇಶಪಾಂಡೆ (ಭಾರಿ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧಪಕ್ಷದ ನಾಯಕರು, ಮಾನ್ಯ ಗೌರವಾನ್ವಿತ ಸದಸ್ಯರು ಕೆಲವು ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ ಹಾಗೂ ಟೀಕೆ ಟಿಪ್ಪಣಿಗಳನ್ನು ಮಾಡಿದ್ದಾರೆ. ಮುಖ್ಯವಾಗಿ ಇದರಿಂದ ಏನೋ ಕವರ್ ಆಫ್ ಮಾಡುವುದಕ್ಕೆ, ಯಾವುದೋ ವ್ಯಾಪಾರ ಮಾಡುವುದಕ್ಕೆ ಈ ಮಸೂದೆಯನ್ನು ತಂದಿದ್ದೇವೆ, ಮಾನ್ಯ ದೇಶಪಾಂಡೆಯವರೇ ತಾವು 8 ವರ್ಷಗಳ ಕಾಲ ಕೈಗಾರಿಕೆಗಳ ಮಂತ್ರಿಗಳಾಗಿದ್ದೀರಿ?

4.10 ಪಿಎಂ

ಈ ಮಸೂದೆಯನ್ನು ನೀವು 1995ನೇ ಇಸವಿಯಲ್ಲಿ ಏಕೆ ತಂದಿಲ್ಲ ಎಂದು ಹಲವಾರು ವಿಚಾರಗಳನ್ನು ತಾವು ಇಲ್ಲಿ ನಮೂದು ಮಾಡಿದ್ದೀರಿ. ನನಗನಿಸುತ್ತದೆ ನಾನು ಈ ಬಿಲ್ ಮಂಡಿಸುವಾಗ, ಕೆಲವು ವಿಚಾರಗಳನ್ನು ಹೇಳಿದೆ, ಆ ಸಮಯದಲ್ಲಿ ತಾವು ಕೆಲವು ಸ್ನೇಹಿತರು ಇಲ್ಲಿ ಇರಲಿಲ್ಲ. ನಾನು ಏನು ಹೇಳಿದೆ ಎಂದರೆ, ಈ ಮಸೂದೆ ತರುವ ಉದ್ದೇಶ, ರೆಡ್ ಟ್ಯಾಪಿಸಂ ಇದ್ದರೆ ಅದು ಕಡಿಮೆಯಾಗಬೇಕು. ಪಾರದರ್ಶಕತೆ ತರಬೇಕು, ಸರಳೀಕರಣ ತರಬೇಕು ಈ ಉದ್ದೇಶದಿಂದ ಈ ಮಸೂದೆ ತಂದಿದ್ದೇವೆ. ಇವತ್ತು ಒಂದು ಕೈಗಾರಿಕೆಗೆ ಅರ್ಜಿ ಕೊಡಬೇಕಾದರೆ

14 ಅರ್ಜಿಗಳು ಹಾಕಬೇಕು. ಒಂದು ಕೈಗಾರಿಕೆ ಪ್ರಾರಂಭ ಮಾಡಬೇಕಾದರೆ 14 ಇಲಾಖೆಗಳಿಗೆ 14 ಅಪ್ಲಿಕೇಷನ್ ಹೋಗಬೇಕು. ನಾವು 14 ಅಪ್ಲಿಕೇಷನ್ ಒಂದು ಕನ್‌ಸಾಲಿಡೇಟೆಡ್ ಅಪ್ಲಿಕೇಷನ್ ಮಾಡಿದ್ದೇವೆ. ಅದು ಸರಿ ಅಥವಾ ತಪ್ಪು ಎಂದು ನೀವು ನಿರ್ಣಯ ಮಾಡಿ. ಎರಡನೆಯದು, 14 ಕಡೆ ನೀವು ಅರ್ಜಿ ಕೊಡುವುದಕ್ಕೆ ಹೋಗಬೇಕಾಗಿತ್ತು. ಈಗ ಒಂದೇ ಏಜೆನ್ಸಿ, ಜಿಲ್ಲಾ ಮಟ್ಟದಲ್ಲಿ ಡಿಐಸಿ, ರಾಜ್ಯ ಮಟ್ಟದಲ್ಲಿ ಎಮಡಿ ಉದ್ಯೋಗ ಮಿತ್ರ. ಆ ಇಲಾಖೆಯಲ್ಲಿ ಸೇಲ್ಸ್ ಟ್ಯಾಕ್ಸ್ ಡಿಪಾರ್ಟ್‌ಮೆಂಟ್, ಫ್ಯಾಕ್ಟರಿ ಬಾಯ್ಲರ್ ಎಲ್ಲಾ ಅಲ್ಲಿ ಕೂಡಿರುತ್ತಾರೆ. 14 ಕಡೆ ಎಂಟರ್ ಪ್ರಿನ್ಯೂರ್ ಕಳುಹಿಸುತ್ತೀರಿ ಅಥವಾ ಒಂದೇ ಕಛೇರಿಯಲ್ಲಿ ಒಂದು ಕಡೆ ಆ ಪ್ರೊಸೆಸಿಂಗ್ ಆಗಬೇಕೋ ಇದು ಎವಡೇ ವಿಚಾರ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಎಲ್ಲರೂ ಅಲ್ಲಿಯೇ ಕುಳಿತುಕೊಂಡು ಬಿಟ್ಟಿರುತ್ತಾರೆ. ಆಫೀಸ್‌ನಲ್ಲಿ ಅಂಗಡಿ ಓಪನ್ ಮಾಡಿಕೊಂಡು ಎಂದು ಹೇಳಿದಿರಿ, ನಿಮಗೆ ಸಹಾಯ ಮಾಡಲಿಕ್ಕೆ ಇಲ್ಲಿ ಏನು ಹೇಳಿದ್ದೀರಿ, ಪೇಜ್ 9 ನೋಡಿ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಸಿಂಧ್ಯ ಸಾಹೇಬರಿಗೆ ಸೀರಿಯಸ್‌ನೆಸ್ ಇಲ್ಲ, ಅವರು ಸೀರಿಯಸ್ಸಾಗಿ ಮಾತನಾಡುತ್ತಿಲ್ಲ. ಸುಮ್ಮನೆ ಮಾತನಾಡಬೇಕೆಂದು ಮಾತನಾಡುತ್ತಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ನಾನು ಜವಾಬ್ದಾರಿಯಿಂದ ಮಾತನಾಡುತ್ತಿದ್ದೇನೆ. ಆ ಮಾತನ್ನು ಅವರು ವಾಪಸ್ ತೆಗೆದುಕೊಳ್ಳಬೇಕಾಗುತ್ತದೆ.

ಅಧ್ಯಕ್ಷರು : ನೀವು ನಮಗೆ ಸ್ನೇಹಿತರು, ಎಲ್ಲರಿಗೂ ಸ್ನೇಹಿತರು.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಿಮಗೆ ಬಹಳ ಆಪ್ತ ಸ್ನೇಹಿತ ನಾನು. ಕಾರ್ಮಿಕ ಆಯುಕ್ತರು, ಕಾರ್ಖಾನೆಗಳು ಮತ್ತು ಬಾಯ್ಲರ್ಸ್, ತಪಾಸಣಾ ಮುಖ್ಯ ಪರೀಕ್ಷಕರು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಇವುಗಳ ಕಛೇರಿಗಳು ಜಂಟಿಯಾಗಿ ವರ್ಷಕ್ಕೊಮ್ಮೆ ನಡೆಸತಕ್ಕದ್ದು ಎಂದು ಇದೆ. ಇವರೆಲ್ಲಾ ಅಲ್ಲಿ ಸಿಂಗಲ್ ಏಜೆನ್ಸಿಯಲ್ಲಿ ಕುಳಿತುಕೊಂಡಿರುತ್ತಾರೆ. ಇವರಿಗೆಲ್ಲ ಒಂದೊಂದು ಆಕ್ಟ್ ಇರಬೇಕು. ನೀವು ಮಾಡಿರತಕ್ಕಂಥದ್ದು ಈ ಆಕ್ಟ್ ಏನಿದೆ this comes under the Concurrent List according to the Constitution. Industries is not a State subject. ಸೆಂಟ್ರಲ್ ಸ್ಟೇಟ್ ಎರಡೂ ಸಬ್ಜೆಕ್ಟ್, ಇದು ಪ್ರೆಸಿಡೆಂಟ್ ಆಫ್ ಇಂಡಿಯಾ ಅಸೆಂಟ್‌ಗೆ ಹೋಗಬೇಕೋ ಇಲ್ಲವೋ ಎಂಬುದನ್ನು ದಯವಿಟ್ಟು ಹೇಳಿ. ಕೇಂದ್ರ ಸರ್ಕಾರದ ಒಪ್ಪಿಗೆ ರಾಷ್ಟ್ರಾಧ್ಯಕ್ಷರ ಒಪ್ಪಿಗೆಗೆ ಹೋಗಬೇಕಾಗುತ್ತದೆ. ರಾಷ್ಟ್ರಾಧ್ಯಕ್ಷರು ಸುಮ್ಮನೆ ಸಹಿ ಹಾಕುವುದಿಲ್ಲ. ಈ ತರಹ ಮಾಡಿರುವ ನೇಕ ಕ್ರಾಂತಿಕಾರಿ ಭಾಷಣಗಳು, ಮಸೂದೆಗಳು ಹೋಗಿ ಕೇಂದ್ರ ಸರ್ಕಾರದಲ್ಲಿ ಕೊಳೆಯುತ್ತಿವೆ. ರಾಷ್ಟ್ರಾಧ್ಯಕ್ಷರು ಇದಕ್ಕೆಲ್ಲಾ ಕಣ್ಣು ಮುಚ್ಚಿಕೊಂಡು ಮನ್ನಣೆ ಕೊಡುವುದಿಲ್ಲ. ಸ್ಟೇಟ್ ಸಬ್ಜೆಕ್ಟ್ ಆಕ್ಟ್ ಏನಾಗುತ್ತದೆ? ಅದು ಬಹಳ ಮುಖ್ಯ. ನನಗೆ ಗೊತ್ತಿರುವ ಹಾಗೆ ಯಾವುದೇ ಕಾರಣದಿಂದ ಇವತ್ತು ಹೇಳಿರುತ್ತೇನೆ, ಮೆಜಾರಿಟಿ ಇದೆ, ಅವರು ಊರಿಗೆ ಹೋಗುವ ಅವಸರದಲ್ಲಿದ್ದಾರೆ, ಆಡಳಿತ ಪಕ್ಷದ ಶಾಸಕರು, ಪಾಪ ತಬಲ ಹೊಡೆದು ಪಾಸ್ ಮಾಡಿಕೊಡುತ್ತಾರೆ. ಇದರಲ್ಲಿ ಸಂಶಯ ಇಲ್ಲ. ನಾನು ಇದು ಒಂದು ರೆಕಾರ್ಡ್ ಆಗಬೇಕು ಎನ್ನುವ ದೃಷ್ಟಿಯಿಂದ ಹೇಳಿದ್ದೇನೆ. ಯಾವುದೇ ಕಾರಣಕ್ಕೆ ರಾಷ್ಟ್ರಾಧ್ಯಕ್ಷರು, ಕೇಂದ್ರ ಸರ್ಕಾರ ಇದಕ್ಕೆ ಒಪ್ಪಿಗೆ ಕೊಡುವುದಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ಇಲ್ಲಿರುವ ಪ್ರಾವಿಷನ್ಸ್ ಕೇಂದ್ರ

ಸರ್ಕಾರದ ಕಾಯಿದೆ ವಿರುದ್ಧ ಇಲ್ಲ. We have to abide by Government of India rules and regulations. ದಯಮಾಡಿ ಸೆಕ್ಷನ್ 17 ಓದಿ. deemed approve. "Every department or authority notwithstanding anything contained in any other law, shall issue clearance within the stipulated time limite failing which ...." ಅವರವರ ಕಾಯಿದೆ ಕಾನೂನು ಕೆಳಗೆ ಅವರು ಪರ್ಮಿಷನ್ ಕೊಡಬೇಕು. ಈ ಏಜೆನ್ಸಿ ಒಂದು ಕಡೆ ಕೂಡುತ್ತಿದೆ ಎಂದರೆ ಸಿಂಧ್ಯರವರೇ, ವ್ಯಾಪಾರ ಮಾಡುವುದಕ್ಕೆ ಅಲ್ಲ. ನಾವು ನೀವು ಕುಳಿತುಕೊಂಡು ಕೆಲಸ ಮಾಡಿದ್ದೇವೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಸೆಂಟ್ರಲ್ ಕ್ಲಿಯರೆನ್ಸ್ ಬೇಕಾಗಿದ್ದರೆ ಏನು ಮಾಡುತ್ತೀರಿ?

ಶ್ರೀ ಆರ್.ವಿ. ದೇಶಪಾಂಡೆ : ನಾನು ಹೇಳುತ್ತೇನೆ ಕೇಳಿ. ಇಲ್ಲಿ ಸೆಂಟ್ರಲ್ ಕ್ಲಿಯರೆನ್ಸ್ ಪ್ರಶ್ನೆ ಇಲ್ಲ. Most hazardous industries, industries creating pollution it has to go to Government of India. Please read Section 17. As per those rules and regulations ಎಂದು ಹೇಳಿದ್ದೇವೆ. We are not bringing anything contrary to Government of India Acts. ಮಾನ್ಯ ಸಿಂಧ್ಯಾರವರು ಮತ್ತು ನಾವು ಬಹಳಷ್ಟು ಕೆಲಸ ಮಾಡಿದ್ದೇವೆ. 1985ನೇ ಇಸವಿಯಿಂದ 1998ರವರೆಗೆ ಇಲ್ಲಿ ಅಲ್ಲಿ ಕೆಲಸ ಮಾಡಿದ್ದೇವೆ. ಎಷ್ಟೆಷ್ಟು ವ್ಯಾಪಾರ ಅವರು ನಾವು ಕೂಡಿ ಮಾಡಿದ್ದೇವೆಂಬುದು ಅವರಿಗೆ ಗೊತ್ತಿದೆ. ಅದಕ್ಕಿಂತ ಹೆಚ್ಚಿಗೆ ಆಗಿದೆ, ಕಡಿಮೆ ಆಗಿದೆ ಎಂದು ಹೇಳಬೇಕು. ಅವರು ಜವಾಬ್ದಾರಿ ಸ್ಥಾನದಲ್ಲಿದ್ದಾರೆ. ನಾನು ಜವಾಬ್ದಾರಿ ಸ್ಥಾನದಲ್ಲಿ ನಿಂತೇ ಮಾತನಾಡುತ್ತಿದ್ದೇನೆ. ಮುಖ್ಯವಾಗಿ ನಾವು ಒಳ್ಳೆಯ ಉದ್ದೇಶದಿಂದ ಈ ಮಸೂದೆಯನ್ನು ತಂದಿದ್ದೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಅವೆಲ್ಲಾ ಏನು ವ್ಯಾಪಾರಗಳು, ಎಲ್ಲಾ ಹೇಳಿದರೆ ಚೆನ್ನಾಗಿ ಇರುತ್ತದೆ. ಎಷ್ಟೆಷ್ಟು ವ್ಯಾಪಾರವಾಗಿದೆ ಎಂಬುದನ್ನು ಹೇಳಿ. ನಾನು ಹೇಳಿದ್ದು ಈ ಏಜೆನ್ಸಿಗಳೆಲ್ಲಾ ಅಂಗಡಿಗಳನ್ನು ಓಪನ್ ಮಾಡುತ್ತಾರಲ್ಲಾ ಹಾಗೆ, ಸ್ಟಾಲ್‌ಗಳ ಪರಿಸ್ಥಿತಿ ಕೇಳಿರತಕ್ಕದ್ದರಲ್ಲಿ ತಪ್ಪು ಏನಿದೆ?

SRI R.V. DESHAPANDE: In the industrial map of the country, Karnataka has a place of pride. I am proud to say this.

SRI P.G.R. SINDHIA: Karnataka was having that national pride. But, unfortunately, it has come to the lowest web.

ಶ್ರೀ ಸಿ. ಚನ್ನಿಗಪ್ಪ : ವ್ಯಾಪಾರ ಎಂದರೆ ಅದಕ್ಕೆ ಮೀನಿಂಗ್ ಏನು?

ಶ್ರೀ ಆರ್. ವಿ. ದೇಶಪಾಂಡೆ : ನಾನು ಹೇಳಲಿಲ್ಲ, ಅವರು ಹೇಳಿದ್ದು.

ಅಧ್ಯಕ್ಷರು : ಯಾರು ಮಧ್ಯೆ ಪ್ರವೇಶ ಮಾಡಬೇಡಿ. ತಾವು ಈಲ್ಡ್ ಆಗಬೇಡಿ, ತಾವು ಈಲ್ಡ್ ಆದರೆ ಇನ್ನು ಆರು ಗಂಟೆಯವರೆಗೆ ಆಗುತ್ತದೆ.

ಶ್ರೀ ಆರ್.ವಿ. ದೇಶಪಾಂಡೆ : ಮಸ್ಟರ್ ರೋಲ್ ಕಮ್ ರಿಜಿಸ್ಟರ್ ಇಡಬೇಕಾಗಿತ್ತು. We have brought it down to one. Overtime working and payment. ಅದಕ್ಕೆ ರಿಜಿಸ್ಟರ್ ಇಡಬೇಕಾಗಿತ್ತು. it is reduced. ಒಂದು ಕೈಗಾರಿಕೆ 30-40 ರಿಜಿಸ್ಟರ್ ಇಡಬೇಕಾಗಿತ್ತು.

ತಾವು ಇರಲಿಲ್ಲ. ಇವತ್ತು ನಾವು 21ನೇ ಶತಮಾನದಲ್ಲಿ ಇದ್ದೇವೆ. ಜನರಿಗೆ ಕ್ವಿಕ್ ಡಿಸಿಷನ್ ಬೇಕಾಗಿದೆ. ಸರಳೀಕರಣ ಬೇಕಾಗಿದೆ. ಪಾರದರ್ಶಕತೆ ಬರಬೇಕಾಗಿದೆ. ಹಾಗಾಗಿ ದೊಡ್ಡ ಕೈಗಾರಿಕೆಗಳಿಗಿಂತ ಸಣ್ಣ ಕೈಗಾರಿಕೆಗಳಿಗೆ ತೊಂದರೆಯಾಗಬಾರದು. ಹಾಗಾಗಿ ಮುಖ್ಯವಾಗಿ ಪಾರದರ್ಶಕತೆ ತರಬೇಕು, ಸರಳೀಕರಣ ತರಬೇಕು, ಡೀಮ್ಡ್ ಅಪ್ರೂವಲ್ ಮಾಡಿದ್ದೇವೆ. ತಾವು ಕೇಳಿದ್ದೀರಿ ಡೀಮ್ಡ್ ಅಪ್ರೂವಲ್ ಏನು ಕೈಗಾರಿಕೆಗಳಿಗೆ ಅಪ್ಲಿಕೇಷನ್ ಕೊಡುವಾಗ ನಾವು ಸರ್ಟಿಫೈ ಮಾಡಬೇಕು. That he has done everything application as per rules and regulations. ಇದು ರೂಲ್ಸ್ ರೆಗ್ಯುಲೇಷನ್ ಪ್ರಕಾರ ಇದೆ ಈ ರೂಲ್ಸ್ ರೆಗ್ಯುಲೇಷನ್ ಪ್ರಕಾರ ಅಪ್ಲಿಕೇಷನ್ ಇದ್ದರೆ ರೂಲ್ಸ್‌ನಲ್ಲಿ ಪ್ರೊವೈಡ್ ಮಾಡುತ್ತಿದ್ದೇವೆ. 35 ದಿವಸಗಳಲ್ಲಿ they will get the clearance. If he says 'yes' or 'no', then it is presumed that the application is cleared. ರೆಡ್ ಟೇಪಿಸಂಗೆ ಅವಕಾಶವಿಲ್ಲ. ವ್ಯಾಪಾರ ಮಾಡುವುದಕ್ಕೆ ಅವಕಾಶವಿಲ್ಲ. ಒಂದು ನೀವು ಅರ್ಜಿ ಕೊಡುತ್ತೀರಿ ಸರ್ಟಿಫೈ ಮಾಡುತ್ತೀರಿ, ನಾನು ಎಲ್ಲಾ ಕಾಯಿದೆ ಕಾನೂನು ಪ್ರಕಾರ ಕಂಪ್ಲೈ ಮಾಡಿದ್ದೇನೆಂದು ಸರ್ಟಿಫೈ ಮಾಡಿದರೆ that is sufficient.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ನಾನು ಮಂತ್ರಿಗಳಿಗೆ ದಯವಿಟ್ಟು ಈಲ್ಡ್ ಆಗಿ ಎಂದು ಏಕೆ ರಿಕ್ವೆಸ್ಟ್ ಮಾಡಿಕೊಂಡಿದ್ದೇನೆ ಎಂದರೆ, ನಾವು ಈ ಅಂಗಡಿಗಳು ಎಂದು ಹೇಳಿದ್ದು ಸಿಂಗಲ್ ಏಜೆನ್ಸಿ ಏನು ಇರುತ್ತದೆ ಅಲ್ಲಿ ಶಾಪ್‌ಗಳನ್ನು ತೆಗೆಯುತ್ತೇವೆ ಎಂದರೆ ಅಲ್ಲಿ ಅವರು ಡಿಪಾರ್ಟ್‌ಮೆಂಟ್ ಆಫೀಸರ್ಸ್ ಬಂದು ಚೆಕ್ ಮಾಡುವುದಕ್ಕೆ ಕುಳಿತುಕೊಳ್ಳುತ್ತಾರೆಂದು ಹೇಳಿದ್ದು. ನಾನು ಯಾವ ಅಂಗಡಿ ವ್ಯಾಪಾರವೆಂದು ಹೇಳಿದೆ ಎಂದರೆ, ಅದು ಅಲ್ಲವೇ ಅಲ್ಲ. According to me this is a teethless, powerless legislation which is not going to be approved by the President of India. This is going to the dust bin. There is no doubt about it. As Industries Minister you are presiding over to liquidate all the industries in Karnataka. ಅದರ ಬಗ್ಗೆ ನಾನು ನಿಮಗೆ ಉತ್ತರ ಹೇಳಿದ್ದು.

ಶ್ರೀ ಆರ್.ವಿ. ದೇಶಪಾಂಡೆ : ನಾನು ಒನ್ ಬೈ ಒನ್ ಉತ್ತರ ನಿಮಗೆ ಕೊಡುತ್ತೇನೆ. ಇವತ್ತು ಕೈಗಾರಿಕೆ ರಾಜ್ಯಕ್ಕೆ ಬರಬೇಕು. ಇದು ಪ್ರೋಗ್ರೆಸೀವ್ ಸ್ಟೇಜ್ ಇದೆ. ಸಕ್ಸಸೀವ್ ಗವರ್ನಮೆಂಟ್‌ನಲ್ಲಿ ಕೈಗಾರಿಕೆ ಬೆಳೆಯುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಎಲ್ಲಾ ಸರ್ಕಾರಗಳು ಪ್ರಯತ್ನ ಮಾಡಿದ್ದಾರೆ. ಹಾಗಾಗಿ ಇವತ್ತು ತೊಂದರೆಯಾಗಬಾರದು. ಪಾರದರ್ಶಕತೆ ಇರಬೇಕು. ಜನರಿಗೆ ತಕ್ಷಣ ನಿರ್ಣಯ ಸಿಗಬೇಕು. ಹಾಗಾಗಿ ಇದನ್ನೂ ಮಾಡಿದ್ದೇವೆ. ರೂಲ್ಸ್‌ನಲ್ಲಿ ಪ್ರೊವೈಡ್ ಮಾಡಿದ್ದೇವೆ. ಡೀಮ್ಡ್ ಕ್ಲೀಯರೆನ್ಸ್ ಎಂದರೆ ಎಷ್ಟು? ಪೊಸ್ಟ್‌ಲಿ ಇದು 35 ದಿನಗಳು. ಅರ್ಜಿ ಕೊಟ್ಟ ನಂತರ if he certifies that he has complied with all the rules and regulations..... ಡಿಸ್ಟ್ರಿಕ್ಟ್ ಲೆವಲ್‌ನಲ್ಲಿ ಇಂಡಿವಿಜಿಯಲ್ ಏಜೆನ್ಸಿ ಇರುತ್ತದೆ. ಸ್ಟೇಟ್ ಲೆವಲ್‌ನಲ್ಲಿ ಸ್ಟೇಟ್ ಲೆವಲ್ ಇಂಡಿವಿಜಿಯಲ್ ಏಜೆನ್ಸಿ ಇರುತ್ತದೆ. if it is not cleared within 35 days, he can say it is deemed to have been cleared. ಹರಾಸ್‌ಮೆಂಟ್ ಪ್ರಾಬ್ಲಮ್ ಇಲ್ಲ. ಮಾನ್ಯ ಶಿವಾನಂದ ಪಾಟೀಲರಿಗೆ ಪ್ರಾಬ್ಲಮ್ ಇಲ್ಲ. ಯಾರಿಗೂ ತೊಂದರೆ ಇಲ್ಲ. ರೆಡ್ ಟ್ಯಾಪಿಸಂ ಇಲ್ಲ. ಇದು ಭಾರತದೇಶದಲ್ಲಿ ನಾವು ಮೊದಲ ಬಾರಿಗೆ ಮಾಡುತ್ತಿದ್ದೇವೆ.

Gujarat, Andhra Pradesh and Maharashtra States are asking a copy of this legislation. ತಮಗೆ ಇದರ ಮಹತ್ವ ಗೊತ್ತಿಲ್ಲ. ಮೂರು ರಾಜ್ಯಗಳು ಇದರ ಲೆಜಿಸ್ಲೇಷನ್ ಕಾಪಿ ಕೊಡಿ, ನಾವೂ ಕೂಡ ಇಂಟ್ರಡ್ಯೂಸ್ ಮಾಡುತ್ತೇವೆಂದು ನಮ್ಮ ಕಡೆಯಿಂದ ಇದರ ಕಾಪಿ ತೆಗೆದುಕೊಂಡು ಹೋಗಿದ್ದಾರೆ. ಮಾನ್ಯ ಸ್ನೇಹಿತರಾದ ಸಿಂಧ್ಯಾರವರು ಹೇಳಿದರು, ಏನೆಂದರೆ ನಾವು ಗುಜರಾತಿಗೆ ಹೋದಾಗ ಅಲ್ಲಿ ಈಗಾಗಲೇ ಇದು ಇದೆಯೆಂದು. ನಾವು, ಅವರು ಗುಜರಾತಿಗೆ ಹೋಗಿದ್ದು ನಿಜ. ಗುಜರಾತ್ ಪ್ರೋಗ್ರೆಸ್ಸಿವ್ ಸ್ಟೇಟ್ ನಿಜ, ಒಳ್ಳೆಯ ಕೆಲಸ ಆಗಿದೆ ನಿಜ. ಆದರೆ ಇವತ್ತು ಗುಜರಾತಿನಲ್ಲಿ ಇದು ಇಲ್ಲ. ಇಡೀ ರಾಷ್ಟ್ರದಲ್ಲಿ ಮೊಟ್ಟಮೊದಲ ಬಾರಿಗೆ ಇಂತಹ ರೆವೆಲ್ಯೂಷನರಿ ಲೆಜಿಸ್ಲೇಷನ್ - This is the first time in the country a revolutionary legislation bringing transparency, simplicity to help the enterprenuers, especially small enterprenuers ದೊಡ್ಡ ದೊಡ್ಡ ಮಾಲೀಕರಿಗೆ ಅವಶ್ಯಕತೆ ಇರುವುದಿಲ್ಲ. They know how to meet the minister or the chief minister or the opposition leader or anybody. ಆದರೆ ಸಾಮಾನ್ಯ ಜನ, technocrats, they have lot of difficulties. ಹಾಗಾಗಿ ಅವರಿಗೆ ಅನುಕೂಲವಾಗಬೇಕು ಎನ್ನುವ ಆ ದೃಷ್ಟಿಯಿಂದ ಈ ಮಸೂದೆಯನ್ನು ನಾವು ತಂದಿದ್ದೇವೆ. ಇವತ್ತು ಮುಖ್ಯವಾಗಿ ಮುಂಚೆ - Annual half yearly returns earlier it was 12. Now we have reduced it to 4. ಇವತ್ತು ಕೆಲವು ವಿಚಾರಗಳನ್ನು ಮಾನ್ಯ ಸಿಂದ್ಯಾರವರು ಹೇಳಿದ್ದಾರೆ. ಏನು ಹೇಳಿದ್ದಾರೆ ಎಂದರೆ ನೀವು ಕೈಗಾರಿಕೆ ಮಂತ್ರಿ ಇದ್ದೀರಿ, ಆದರೆ ಉತ್ತರ ಕನ್ನಡ ಜಿಲ್ಲೆಯಲ್ಲಿ ಏನಾಗಿದೆ ಎಂದು ಕೇಳಿದ್ದಾರೆ. ಇದು ನಾನು ಹೈಪವರ್ ಕಮಿಟಿಯ - "Redressal of Regional Imbalance" final/ report ಡಾ. ನಂಜುಂಡಪ್ಪನವರು ಕೊಟ್ಟಿರುವುದನ್ನು ಓದುತ್ತಿದ್ದೇನೆ.- ಹಾಗಾಗಿ ಇದು ಅರ್ಜೆಂಟ್ ಇದೆಯೆಂದು ಅವರು ಭಾವಿಸಬಹುದು. "The policy support provided by the successive governments, which I was always saying, has narrowed the gap in the industrial development of small, medium and large industries between North and South Karnataka to a great extent. The investment growth in registration of small scale industries between 1996-2001 has jumped from 89.40 % in 1995-96 to 113.7% in North Karnataka, whereas the South Karnataka region the increase is from 108.37% to 122.37%. So from 89%, growth in industries has risen to 113% in North Karnataka. However, the growth of number of units in north Karnataka and south Karnataka is almost equal. The rate of growth of investment in medium and large industries in North Karnataka region has jumped from a negative growth of 27.15 during 91-96 to 263% during 96-2001, whereas in South Karnataka region it is. 172.14%, down to 49.13% for the same period." ಹೀಗಾಗಿ ಮಾನ್ಯ ಸಿಂಧ್ಯಾರವರು ಉತ್ತರ ಕನ್ನಡ ಜಿಲ್ಲೆಯಲ್ಲಿ ಕೈಗಾರಿಕೆಗಳು ಬೆಳೆದಿದ್ದಾವೆ ಎಂಬುದನ್ನು ಒಪ್ಪಿಕೊಳ್ಳುತ್ತಾರೆಂದು ನಾನು ಭಾವಿಸುತ್ತೇನೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೈಗಾರಿಕೆಗಳು ಬೆಳೆಯಬಾರದು ಎಂದು ನಾನು

ಹೇಳುವುದಿಲ್ಲ. ಅಂತಹ ವಿಚಾರ ನನ್ನಲ್ಲಿ ಇಲ್ಲ. ಕರ್ನಾಟಕದಲ್ಲಿ ಎಲ್ಲಾ ಕಡೆ ಕೈಗಾರಿಕೆಗಳು ಬೆಳೆಯಬೇಕು. ನೀವು ಉತ್ತರ ಕನ್ನಡ ಜಿಲ್ಲೆಯಲ್ಲಿ ಕೈಗಾರಿಕೆಗಳನ್ನು ಏಕೆ ಮಾಡುವುದಿಲ್ಲ ಎಂದು ನನ್ನನ್ನು ಇವತ್ತು ಅವರು ಕೇಳಿದರು. ಅದು ನನ್ನ ಕೈಯಲ್ಲಿ ಇಲ್ಲ. ಕೈಗಾರಿಕೆ ಪ್ರಾರಂಭ ಮಾಡುವವರು ಅವರು ತಮ್ಮ ಲಾಭವನ್ನು ನೋಡುತ್ತಾರೆಯೇ ವಿನಹ ಕೈಗಾರಿಕಾ ಮಂತ್ರಿಗಳು ಅಥವಾ ಮುಖ್ಯಮಂತ್ರಿಗಳು, ವಿರೋಧ ಪಕ್ಷದ ನಾಯಕರು ಹೇಳಿದ ಜಾಗಕ್ಕೆ ಅವರು ಹೋಗುವುದಿಲ್ಲ. ಎಲ್ಲಿ ಹಣ ಹಾಕಿದರೆ ಲಾಭ ಇದೆ, ಎಲ್ಲಿ ನನಗೆ ರಾಮೆಟೀಯಲ್ಸ್ ಸಿಗುತ್ತದೆ ಎಂದು ಅವರು ನೋಡುತ್ತಾರೆ. ಹಾಗಾಗಿ ಇವತ್ತು ಉದಾಹರಣೆಗೆ ಒಂದು ಟೊಯೊಟಾ ಪ್ರಾಜೆಕ್ಟ್‌ನ್ನು ತೆಗೆದುಕೊಳ್ಳಬೇಕಾದರೆ ಆರು ರಾಜ್ಯಗಳವರು ಟ್ರೈ ಮಾಡುತ್ತಿದ್ದರು. ನಮಗೆ ಆ ಪ್ರಾಜೆಕ್ಟ್ ಸಿಕ್ಕಿತು. ಹೀಗಾಗಿ ಇವತ್ತು - these are days of fierce competition. ಮಾನ್ಯ ಪಿ.ವಿ. ನರಸಿಂಹರಾಯರು 1991ನೇ ಇಸವಿಯಲ್ಲಿ ಉದಾರೀಕರಣದ ನೀತಿಯನ್ನು ಜಾರಿಗೆ ತಂದನಂತರ ಒಂದು ದೃಷ್ಟಿಯಿಂದ ಪಾರದರ್ಶಕತೆ ಬಂದಿದೆ. ಒಂದು ಕಾಲದಲ್ಲಿ ಲೈಸೆನ್ಸ್ ಕೊಡುವುದರಲ್ಲಿ ತೊಂದರೆ ಇತ್ತು. ನೀವು ಹೇಳಿದಹಾಗೆ ಎಷ್ಟೋ ಕಡೆ ವ್ಯಾಪಾರ ಆಗಿರಬಹುದು. ಆದರೆ 1991ನೇ ಇಸವಿಯಲ್ಲಿ ಮಾನ್ಯ ಶಿವಾನಂದ ಪಾಟೀಲರು ಹೇಳಿದಹಾಗೆ, ಶುಗರ್ ಫ್ಯಾಕ್ಟರಿಗಳಿಗೂ ಲೈಸೆನ್ಸ್ ಹೋದವು. ಆದರೆ ಇವತ್ತು ಪ್ರತಿಯೊಂದು ರಾಜ್ಯ ತನ್ನ ಕಡೆಗೆ ಕೈಗಾರಿಕೆ ತರಬೇಕೆಂದು ಪ್ರಯತ್ನ ಮಾಡುತ್ತಿದೆ. ಅದು ಆಂಧ್ರ ಇರಬಹುದು, ಮಹಾರಾಷ್ಟ್ರ ಇರಬಹುದು ಒಂದೊಂದು ಪ್ರಾಜೆಕ್ಟ್‌ಗೆ ಆರೇಳು ರಾಜ್ಯಗಳು ಇವತ್ತು ಕಾಂಪೀಟ್ ಮಾಡುತ್ತಿವೆ ಹಾಗಾಗಿ ಪಾರದರ್ಶಕತೆ ತರಲಿಕ್ಕೆ ಪ್ರಯತ್ನ ಆಗಿದೆ. ಸಿಂಪ್ಲಿಸಿಟಿ ಬಂದಿದೆ. ಆದ್ದರಿಂದ ಇವತ್ತು ಮುಖ್ಯವಾಗಿ ಈ ಒಂದು ವಿಚಾರದಲ್ಲಿ ಮಾನ್ಯ ಸಿಂಧ್ಯಾರವರಿಗೆ ಕ್ಲಿಯರ್ ಮಾಡುವುದಕ್ಕೆ ನಾನು ಪ್ರಯತ್ನ ಮಾಡಿದ್ದೇನೆ. ಇವತ್ತು ಉತ್ತರ ಕರ್ನಾಟಕದಲ್ಲಿ ಅನ್ಯಾಯವಾಗಿಲ್ಲ. The growth has been excellent. ಅದನ್ನು ಅವರು ಒಪ್ಪಿಕೊಳ್ಳುತ್ತಾರೆ ಎಂದು ನಾನು ಭಾವಿಸುತ್ತೇನೆ. ಎಕ್ಸ್‌ಪೋರ್ಟ್‌ನಲ್ಲಿ - Central Government's growth is negative. Karnataka's growth is 25%. 31-3-2002ಕ್ಕೆ ದೇಶದ ರಫ್ತು ನೆಗೆಟಿವ್ ಆಗಿತ್ತು. ಕರ್ನಾಟಕದ ಗ್ರೋಥ್ 25 ಪರ್ಸೆಂಟ್ Rs. 16,000 cr. to 20,000 cr. exports have taken place from Karnataka. Exports involved carpet, jewellery, gems, software, granite and so many exports. Whatever it is, Karnataka has a pride of place today. The national average in manufacturing is 5.30%. Karnataka's growth is 7.3%. Mining, National 3.70%, Karnataka 4.73%. These are the figures I got from the source-E-guard.... survey.2002-03,

ಶ್ರೀ ಪಿ.ಜಿ.ಆರ್. ಸಿಂಧ್ಯ : ಪ್ಲಾನಿಂಗ್ ಡಿಪಾರ್ಟ್‌ಮೆಂಟ್‌ನವರು ಕೊಟ್ಟ ಸ್ಟ್ಯಾಟಿಸ್ಟಿಕ್ಸ್ ಇದ್ದರೆ ಓದಿ. ಅದು ಯಾವುದೋ ಸಂಘ ಸಂಸ್ಥೆಗಳು ಅವರಿಗೆ ಬೇಕಾಗಿರತಕ್ಕಂಥ ಅಂಕಿಅಂಶಗಳನ್ನು ಓದುವುದಕ್ಕೆ ಹೋಗಬೇಡಿ. ತಾವು ಓದುತ್ತಿರುವುದು ಒಂದು ಭಾಗ. ಇದು ಏನಾಗಿದೆ ಎಂದರೆ ಹಿಂದುಗಡೆ ಮತ್ತು ಮುಂದುಗಡೆಯದ್ದನ್ನು ಬಿಟ್ಟುಬಿಟ್ಟಿದ್ದೀರಿ. ಈ ಬಿಲ್ ಪಾಸ್ ಆಗುವುದಂತೂ ಗ್ಯಾರಂಟಿ. ಏಕೆಂದರೆ ನೀವು ಎಲ್ಲಾ ಕಡೆ ಪ್ರವಾಸ ಮಾಡದೇ ಇರಬಹುದು. ಆದರೆ ನನಗೆ ಗೊತ್ತಿರುವ ಹಾಗೆ ಮೊನ್ನೆ ತುಮಕೂರಿಗೆ ಹೋಗಿ ಬಂದಿದ್ದೀರಿ. ಕೋಲಾರಕ್ಕೆ ಪ್ರತಿ ವಾರವೂ

ಹೋಗುತ್ತೀರಿ. ಕೆಲವು ಕಾರ್ಯಕ್ರಮಗಳಿಗೆಂದು ಉತ್ತರ ಕರ್ನಾಟಕಕ್ಕೆ ಒಂದೆರಡು ಸಲ ಹೋಗಿ ಬಂದಿದ್ದೀರಿ. ನೀವು ಹೋಗದೇ ಇದ್ದರೆ ದಯವಿಟ್ಟು ಹೋಗಿ ನೋಡಿಕೊಂಡು ಬನ್ನಿ. ಎಲ್ಲಾ ಕಡೆಯಲ್ಲೂ ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟ್‌ನಲ್ಲಿ ಇರತಕ್ಕಂಥ ಯಾವುದಾದರೂ ಹೊಸ ಇಂಡಸ್ಟ್ರಿ ಪ್ರಾರಂಭವಾಗಿದ್ದರೆ, ನಾನು ನಿಮಗೆ ಮೊದಲೇ ಹೇಳಿದ್ದೆ, ಮೈಸೂರಿನಿಂದ ಸ್ಪೆಷಲ್ ಆಗಿ ಮಲ್ಲಿಗೆ ಹಾರವನ್ನು ತಂದು ಹಾಕುತ್ತಿದ್ದೆ. ಹೋಗಿ ಬಂದು ಎರಡನ್ನೇ ಇವರು ಹೇಳುವುದು. ಒಂದು ಸಾಫ್ಟ್‌ವೇರ್. ಸಾಫ್ಟ್‌ವೇರ್ ಎಕ್ಸ್‌ಪೋರ್ಟ್ ಆಗುತ್ತಿದೆ ಎಂದು ಹೇಳುತ್ತೀರಿ. ಜೊತೆಗೆ ಅವರಿಗೆ ಟೋಟಲ್ ಎಕ್ಸೆಂಪ್ಷನ್ ಕೊಟ್ಟಿದ್ದಾ. ಯಾವುದೇ ಟ್ಯಾಕ್ಸೇಷನ್ ಇಲ್ಲ, ನೀವು ಬೇರೆ ಅವರಿಗೆ ಸಹಾಯ ಮಾಡುತ್ತಿದ್ದೀರಿ. ಎಲ್ಲಾ ಸಾಫ್ಟ್‌ವೇರ್ ಕಂಪನಿಗಳಿಗೂ ಸಹಿತ, ಅವರು ಜಮೀನು ತೆಗೆದುಕೊಂಡರೂ ಕೂಡ, ಬಿಲ್ಡಿಂಗ್ ಕಟ್ಟಿದರೂ ಸಹಿತ, ಕಂಪ್ಯೂಟರ್ ಇನ್‌ಸ್ಟ್ರುಮೆಂಟ್‌ಗಳಿಗೂ ಸಹಿತ ಸ್ಟಾಂಪ್ ಡ್ಯೂಟಿ ಎಕ್ಸೆಂಪ್ಷನ್ ಕೊಟ್ಟು ಹಳೆಯದ್ದೆಲ್ಲಾ ರೆಗ್ಯುಲರೈಸ್ ಮಾಡಿಕೊಳ್ಳುವುದಕ್ಕೆ ನಿನ್ನೆ 250 ಕೋಟಿ ರೂಪಾಯಿಗಳಿಗೆ ಹೊಸದಾಗಿ ನೀವು ಕೇಳಿದ್ದೀರಿ. ನಾನು ಅದಕ್ಕೆ ಒಂದು ಸೊನ್ನೆಯನ್ನು ಸೇರಿಸಿಕೊಳ್ಳಿ ಎಂದು ಹೇಳಿದ್ದೇನೆ. ಅಂದರೆ 2500 ಕೋಟಿಯಷ್ಟು ಬಳುವಳಿಯನ್ನು ನೀವು ಅವರಿಗೆ ಕೊಟ್ಟಿದ್ದೀರಿ. ಹೋಗಿ ಬಂದು ಎರಡೇ ಇವರು ಹೇಳುವುದು. ಒಂದು ಸಾಫ್ಟ್‌ವೇರ್, ಇನ್ನೊಂದು ಜ್ಯೂಯಲರಿ ಬೇರೆ ಏನಾಗಿದೆ? ಗಾರ್ಮೆಂಟ್ಸ್ - ಅದು ಅಲ್ಪಸ್ವಲ್ಪ ಆಗಿದೆ. ಅದನ್ನು ಕೊಂಡುಕೊಳ್ಳುವವರೇ ಇಲ್ಲ. ಎಲ್ಲಾ ನಿಂತುಹೋಗಿದೆ. This is a serious lapse of the government according to me. ಈಗ ಕಳೆದ ಎರಡು-ಮೂರು ವರ್ಷಗಳಿಂದ ನೀವು ಹೋಗಿ ಬಂದು ಏನು ಮಾಡುತ್ತೀರಿ ಎಂದರೆ ವಿಪ್ರೊ, ಇನ್‌ಫೋಸಿಸ್ ಮತ್ತು ಇನ್ಯಾವುದೋ ಐದು ಕಂಪನಿಗಳು, ಆಮೇಲೆ ಇದು ಏನಾಗಿದೆ ಎಂದರೆ, ನಮ್ಮ ಬಜೆಟ್‌ನ್ನು ಇವರು ತೋರಿಸುವುದಿಲ್ಲ. ಅವರು ಏನು ಪ್ರತಿವರ್ಷ ಬಜೆಟ್ ಇಡುತ್ತಾರೆ ಅದನ್ನು ತೋರಿಸಿಬಿಟ್ಟು ಅದರ ಕೀರ್ತಿ ನಮ್ಮದು ಎಂದು ಹೇಳಿಕೊಳ್ಳುತ್ತೀರಿ. ಇವರು ಹೆಸರು ಹಾಕಿಕೊಳ್ಳುವುದು. ಇದು ಸರಿಯಲ್ಲ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ಇದು ಸರಿಯಲ್ಲ.

ಅಧ್ಯಕ್ಷರು : ಯೀಲ್ಡ್ ಆಗಬೇಡಿ ಎಂದು ನಾನು ನಿಮಗೆ ಹೇಳಿದ್ದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೇ, ತಾವು ಇದನ್ನು ಪರಾಂಭರಿಸಬೇಕು. ಪತ್ರಿಕೆಯವರು ಬರೆದರೆ ಇದೆಲ್ಲಾ ರಾಜ್ಯದ ಜನತೆಗೆ ಗೊತ್ತಾಗಬೇಕು. ಹೇಗೆ ಅಂತ ಹೇಳುತ್ತೇನೆ, ಕೇಳಿ. ಈಗ ಇಂಡಸ್ಟ್ರಿಗಳಿಗೆಲ್ಲಾ ನೀವು ಹೋಗುತ್ತೀರಿ. ಎಲ್ಲಿಯಾದರೂ ಒಂದುಕಡೆ ಇಂಡಸ್ಟ್ರಿಯಲ್ ಎಸ್ಟೇಟ್‌ಗಳಲ್ಲಿ ಒಂದು ಕಡೆಯಾದರೂ ಜೀವ ಇರತಕ್ಕಂಥ ಇಂಡಸ್ಟ್ರಿಯನ್ನು ತೋರಿಸುತ್ತೀರೇನು? ಎಲ್ಲಾ ಬರಿಯಲ್ ಗ್ರೌಂಡ್ಸ್ ಆಗಿವೆ; ಎಲ್ಲವೂ ಸ್ಮಶಾನಗಳಾಗಿವೆ. ಇದು ನಿಮ್ಮ ಸಾಧನೆಯೇನು? ಇದನ್ನು ಹೇಳಿದರೆ, ಸಣ್ಣ ಕೈಗಾರಿಕೆಗಳ ಬಗ್ಗೆ ಪಾಪ ಕಾಶಪ್ಪನವರು, ಪಾಪದ ಪ್ರಾಣಿ, ಅವರ ಮೇಲೆ ಅದನ್ನು ಹಾಕಿಬಿಡುತ್ತೀರಿ. ಆದ್ದರಿಂದ.......

SRI R.V. DESHAPANDE: This is not the way to disturb a minister.

ಶ್ರೀ ಪಿ.ಜಿ.ಆರ್. ಸಿಂಧ್ಯ : ಬೇಜಾರು ಮಾಡಿಕೊಳ್ಳಬೇಡಿ ಸ್ವಾಮಿ. ನೀವು ಏಕೆ ಕೋಪ ಮಾಡಿಕೊಳ್ಳುತ್ತೀರಿ?

ಶ್ರೀ ಆರ್.ವಿ. ದೇಶಪಾಂಡೆ : ನಿಮಗೆ ರಿಪ್ಲೈ ಕೊಟ್ಟನಂತರ - You should honourably accept it. That is the sportsmanship. ನೀವು ಹೇಳಿದಾಗ ನಾನು ಸುಮ್ಮನೆ ಕುಳಿತಿದ್ದೆ. When I have given back, you should accept it royally.

SRI P.G.R. SINDHIA: You have not given me back. Cannot given me back. I am aware of my limitations. ನಾನು ಏನು ಹೇಳುತ್ತಿದ್ದೇನೆ ಎಂದರೆ ನಿಮ್ಮ ಸರ್ಕಾರ ಬಂದಮೇಲೆ ಈ ಮೂರು ವರ್ಷಗಳಲ್ಲಿ 224 ಅಸೆಂಬ್ಲಿ ಸೆಗ್‌ಮೆಂಟ್‌ಗಳಲ್ಲಿ ಪ್ರೈವೇಟ್ ಸೆಕ್ಟರ್‌ನಲ್ಲಿ, ಗೌವರ್ನಮೆಂಟ್ ಸೆಕ್ಟರ್‌ನಲ್ಲಿ ಕೋಆಪರೇಟಿವ್ ಸೆಕ್ಟರ್‌ನಲ್ಲಿ ಎಷ್ಟು ಜನರಿಗೆ ಕೆಲಸ ಸಿಕ್ಕಿದೆ? ಇದು ಒಂದು. ಎಷ್ಟೆಷ್ಟು ಕೋಟಿ ರೂಪಾಯಿಗಳ ಬಂಡವಾಳವನ್ನು ಈ 224 ವಿಧಾನಸ್ಭಾ ಕ್ಷೇತ್ರಗಳಲ್ಲಿ ಹಾಕಿದ್ದೀರಿ ಎನ್ನುವುದನ್ನು ಇನ್ನು ಆರು ತಿಂಗಳಲ್ಲಿ ನೀವು ಒಂದು ಶ್ವೇತಪತ್ರವನ್ನು ಪ್ರಕಟಮಾಡಿ, ಸಾಕು; ಇನ್ನೇನೂ ಬೇಡ. ನಿಮಗೆ ಒಂದು ದೊಡ್ಡ ಸೆಲ್ಯೂಟ್‌ನ್ನು ನಾವು ಹೊಡೆಯುತ್ತೇವೆ. ಈ ತರಹ ಇಲ್ಲೀಗಲ್ ಆಗಿರತಕ್ಕಂಥ ಎಷ್ಟು ಬೇಕಾದರೂ ಬಿಲ್‌ಗಳನ್ನು ತೆಗೆದುಕಗೊಂಡು ಬನ್ನಿ, ಪಾಸ್ ಮಾಡಿಕೊಡುವ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಸಿಂಧ್ಯಾರವರು ವಿಷಯಾನಂತರ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ನಾನು ಬಹಳ ಸ್ಪಷ್ಟವಾಗಿ ಹೇಳಿದೆ. ಕೈಗಾರಿಕೆ ಪ್ರಾರಂಭ ಮಾಡುವುದಕ್ಕೆ ಉತ್ತೇಜನ ಕೊಡುವುದಷ್ಟೇ ಸರ್ಕಾರದ ಕೆಲಸ. ನಾನು ನಿಮಗೆ ಕೈಗಾರಿಕೆ ಪ್ರಾರಂಭ ಮಾಡಿ ಎಂದರೆ - you will think where your interest is. ನಾನು ಹೇಳಿದರೆ ನೀವು ಕೈಗಾರಿಕೆಯನ್ನು ಪ್ರಾರಂಭ ಮಾಡುವುದಿಲ್ಲ. ನಿಮಗೆ ಕನಕಪುರದಲ್ಲಿ ಕೈಗಾರಿಕೆ ಪ್ರಾರಂಭ ಮಾಡಿ ಎಂದರೆ ಅದರ ಲಾಭ ಏನು ಎಂದು ನೋಡಿಕೊಂಡು you say 'No'. ನಿಮಗೆ ಕೆಲವು ಮಾಹಿತಿಯನ್ನು ನಾನು ಕೊಡಬೇಕಾಗುತ್ತದೆ. ಸಿಂಗಲ್ ವಿಂಡೋ ಏಜೆನ್ಸಿ ಬಗ್ಗೆ ನಮ್ಮ ಸರ್ಕಾಗ ಬಂದನಂತರ - it has cleared 45 projects. The single window agency has cleared 451 projects with an investment of Rs.7,918 crore with an employment potential of 2,02,739; 123 mega projects with a total investment of Rs. 55,298 cr. and employment of 1,48,000 persons were approved during the period when compared to 18 projects with an investment of Rs. 9970 cr. with an employment of 75,000 persons during September 1997-99. ಹಾಗಾಗಿ ಈ ಸರ್ಕಾರ ಬಂದನಂತರ 451 ಕರ್ನಾಟಕ ರಾಜ್ಯದಲ್ಲಿ ಹೊಸ ಪ್ರಪೊಸಲ್ಸ್‌ನ್ನು ಸಿಂಗಲ್ ವಿಂಡೋದಲ್ಲಿ ಕ್ಲಿಯರ್ ಮಾಡಿದ್ದಾರೆ. 123 ಮೆಗಾ ಪ್ರಾಜೆಕ್ಟ್ ಕ್ಲಿಯರ್ ಮಾಡಿದ್ದಾರೆ. For the sale period 1997-99, mega projects cleared was 18. ಹಾಗಾಗಿ ಇವತ್ತು ಸ್ಲೋ ಡೌನ್ ಇದೆ. ಪ್ರಾಬ್ಲಮ್ ಇದ್ದರೂ ಸಹ ಸರ್ಕಾರ ಎಲ್ಲರ ಸಹಕಾರದಿಂದ ಇವತ್ತು ರಾಜ್ಯದಲ್ಲಿ ಕೈಗಾರಿಕೆ ಬೆಳೆಯಬೇಕೆಂದು ಪ್ರಯತ್ನ ಮಾಡುತ್ತಿದೆ. ಉತ್ತರ ಕರ್ನಾಟಕದಲ್ಲಿ ತಾವು ಏನು ಮಾಡಿದಿರಿ ಅಂತ ಕೇಳಿದಿರಿ. ಈಗ ಬಿಲ್ ಬೇರೆ ಇದೆ. ಆದರೂ ತಾವು ಕೇಳುವ ಪ್ರಶ್ನೆಗೆ ನಾನು ಉತ್ತರ ಕೊಡಬೇಕು. ಇವತ್ತು ಬಾಗಲಕೋಟೆಯಲ್ಲಿ ಫುಡ್ ಪ್ರೋಸೆಸಿಂಗ್ ಪಾರ್ಕ್ ಶುರು ಆಗಿದೆ. ಕೇಂದ್ರ ಸರ್ಕಾರದ ಸಹಾಯದಿಂದ ಜೇವರ್ಗಿಯಲ್ಲಿ, ಬಾಗಲಕೋಟೆಯಲ್ಲಿ, ಬೆಳಗಾಂನಲ್ಲಿ ಫುಡ್ ಪ್ರೋಸೆಸಿಂಗ್ ಪ್ಲಾಂಟ್ ಮಾಡಿದ್ದೇವೆ. ಬಾಗಲಕೋಟೆಯಲ್ಲಿ ಈಗಾಗಲೇ

ಕೆಲಸ ಪ್ರಾರಂಭವಾಗಿದೆ. ಮಾಲೂರಿನಲ್ಲಿ ಈಗಾಗಲೇ ಕೆಲಸ ಪ್ರಾರಂಭವಾಗಿದೆ. ಜೇವರ್ಗಿಯಲ್ಲಿ ಬೆಳಗಾಂನಲ್ಲಿ ಲ್ಯಾಂಡ್ ಅಕ್ವಿಜೆಷನ್ ಕೆಲಸ ಪ್ರಾರಂಭವಾಗಿದೆ. ಅದೇ ಪ್ರಕಾರ ಗ್ರೋತ್ ಸೆಂಟರ್ಸ್ ಧಾರವಾಡದಲ್ಲಿ, ರಾಯಚೂರಿನಲ್ಲಿ ಮತ್ತು ಹಾಸನದಲ್ಲಿ ಮೂರು ಗ್ರೋತ್ ಸೆಂಟರ್ ಡೆವಲಪ್ ಮಾಡಿದ್ದೇವೆ. to an extent of 2185 acres.ಇದು ಕೆಲಸ ಅಲ್ಲವೇ? ರಾಯಚೂರಿನಲ್ಲಿ ಮಾಡಿದ್ದೇವೆ. ಇದೇ ಸರ್ಕಾರ ಮಾಡಿದ್ದು ಅಂತ ನಾನು ಹೇಳುವುದಿಲ್ಲ. ಸೆಕ್ಸೆಸಿವ್ ಗೌರ್ನಮೆಂಟ್ ಮಾಡಿದ್ದಾವೆ. ಇವತ್ತು ಕೈಗಾರಿಕೆಗಳು, ಮಿನಿ ಗ್ರೋತ್ ಸೆಂಟರ್ಸ್, ಮಾಲೂರು, ಕೋಲಾರ ಜಿಲ್ಲೆ. ಕಲಬುರ್ಗಿ ಜಿಲ್ಲೆ ಬೆಳಗಾಂ ಜಿಲ್ಲೆ, ಆಮೇಲೆ ಗದಗ್, ನಿಪ್ಪಾಣಿ, ಇವೆಲ್ಲಾ ಉತ್ತರ ಕರ್ನಾಟಕದ ಭಾಗಗಳಲ್ಲಿ ಆಗಿವೆ. ಆದ್ದರಿಂದ ನಮ್ಮ ಸರ್ಕಾರದಿಂದ ಏನೂ ಕೆಲಸ ಆಗಿಲ್ಲವೆಂದರೆ ಅದು ತಪ್ಪಾಗಬಹುದು. ಇವತ್ತು ಈ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಬಾಗಲಕೋಟೆಯಲ್ಲಿ ಎಷ್ಟು ಕೈಗಾರಿಕೆಗಳು ಬಂದಿವೆ ಎಂಬ ಬಗ್ಗೆ ನಾನು ಡೀಟೈಲ್ ಕೊಡುತ್ತೇನೆ. ಬೆಳಗಾಂನಲ್ಲಿ 26, ಬಳ್ಳಾರಿಯಲ್ಲಿ 7, ಬೀದರ್‌ನಲ್ಲಿ 6, ಬಿಜಾಪುರದಲ್ಲಿ 6 ಚಿಕ್ಕಮಗಳೂರಿನಲ್ಲಿ 2, ಚಿತ್ರದುರ್ಗದಲ್ಲಿ 1, ದಕಿಷ್ಣ ಕನ್ನಡ ಜಿಲ್ಲೆಯಲ್ಲಿ 13, ದಾವಣಗೆರೆಯಲ್ಲಿ 8, ಧಾರವಾಡದಲ್ಲಿ 45, ಗದಗ್ 1, ಗುಲ್ಬರ್ಗ 8, ಹಾಸನದಲ್ಲಿ 4, ಹಾವೇರಿಯಲ್ಲಿ 2, ಕೋಲಾರದಲ್ಲಿ 6, ಕೊಪ್ಪಳದಲ್ಲಿ 5, ಮೈಸೂರಿನಲ್ಲಿ 28, ಮಂಡ್ಯದಲ್ಲಿ 8, ರಾಯಚೂರಿನಲ್ಲಿ 9, ತುಮಕೂರಿನಲ್ಲಿ 12, ಮತ್ತು ಉತ್ತರ ಕನ್ನಡದಲ್ಲಿ 5. ಹೀಗೆ ಕೈಗಾರಿಕೆಗಳು ಬಂದಿವೆ. We have done our job. They have to do it. Industries department can only facilitate. ಶುರು ಮಾಡುವುದು ನನ್ನ ಕೆಲಸ ಅಲ್ಲ. ಎಂಟರ್‌ಪ್ರೆನರ್ ಅವರಿಗೆ ಲೋನ್ ಮಂಜೂರು ಆಗಬೇಕು. ಅವರಿಗೆ ನೂರಾರು ತೊಂದರೆಗಳು ಇರುತ್ತವೆ.

ಶ್ರೀ ಶಿವಾನಂದ ಎಸ್. ಪಾಟೀಲ್ : ಇಂಡಸ್ಟ್ರೀಸ್ ಕ್ಲೋಜ್ ಆದ ಬಗ್ಗೆ ಹೇಳಿ.

ಶ್ರೀ ಆರ್.ವಿ. ದೇಶಪಾಂಡೆ : ಅದರ ಬಗ್ಗೆ ಹೇಳುತ್ತೇನೆ. ಎಫ್.ಡಿ.ಐ. ಕೇಂದ್ರ ಸರ್ಕಾರದಿಂದ ಕ್ಲಿಯರೆನ್ಸ್ ಇವತ್ತು ಮಹಾರಾಷ್ಟ್ರ, ಡೆಲ್ಲಿ ಬಿಟ್ಟರೆ ಕರ್ನಾಟಕ ಮೂರನೇ ಸ್ಥಾನದಲ್ಲಿದೆ. ಎಫ್.ಡಿ.ಐ.ನಲ್ಲಿ ಕೇಂದ್ರ ಸರ್ಕಾರ ಕ್ಲಿಯರ್ ಮಾಡುವ ಪ್ರಾಜೆಕ್ಟ್‌ನಲ್ಲಿ ಮಹಾರಾಷ್ಟ್ರ, ಡೆಲ್ಲಿ ನಂತರ ಕರ್ನಾಟಕ ಇವತ್ತು ಮೂರನೇ ಸ್ಥಾನದಲ್ಲಿದೆ. ಅದರ ನಂತರ ನಮ್ಮ ಸಣ್ಣ ಕೈಗಾರಿಕೆಗಳ ಬಗ್ಗೆ ಬಹಳ ಪ್ರಸ್ತಾಪವಾಗಿದೆ. ನಿಜ, ಅವರು ತೊಂದರೆಯಲ್ಲಿದ್ದಾರೆ. ಆದರೆ ತಾವು ಹೇಳಿದ ಹಾಗೆ 60 ಪರ್ಸೆಂಟ್ ಅಲ್ಲ. ನಿಜವಾದ ಅಂಕಿಅಂಶಗಳು ಬೇಕು ಅಂತ ನಾವು ಸಹ ಸರ್ವೆ ಮಾಡುತ್ತಿದ್ದೇವೆ. ಐ.ಎಸ್.ಇ.ಸಿ. ಎನ್ನುವ ಒಂದು ಸಂಸ್ಥೆಗೆ.....

ಶ್ರೀ ಜಗದೀಶ್ ಶೆಟ್ಟರ್ : ಯಾವುದು ನಿಮಗೆ ಬೇಕೋ ಅದನ್ನು ಹೇಳುತ್ತಿದ್ದೀರಿ. ಎಷ್ಟು ಕೈಗಾರಿಕೆಗಳು ಮುಚ್ಚಿವೆ ಎನ್ನುವ ಬಗ್ಗೆ ನಿಮಗೆ ಮಾಹಿತಿ ಇಲ್ಲ, 50 ಪರ್ಸೆಂಟ್ ಎಂದು ಹೇಳಿ ಗುರುತು ಸರ್ವೆ ಮಾಡುತ್ತಿದ್ದೇವೆ ಎಂದು ಹೇಳಿದರೆ ನಮಗೇನೂ ಅರ್ಥವಾಗುತ್ತಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, 2 ಲಕ್ಷ 70 ಸಾವಿರ ಸಣ್ಣ ಕೈಗಾರಿಕಗಳು ಇವೆ. ಅನ್-ರಿಜಿಸ್ಟರ್ ಇರಬಹುದು. ನಮ್ಮ ಒಂದು ಅಂದಾಜು ಪ್ರಕಾರ 40 ಪರ್ಸೆಂಟ್ ಕೈಗಾರಿಕೆಗಳು ಅನಾರೋಗ್ಯವಾಗಿರಬಹುದು. ಆದರೆ 60 ಪರ್ಸೆಂಟ್ ಅಲ್ಲ. ಈ ಸಣ್ಣ ಕೈಗಾರಿಕೆಗಳಿಗೆ ಫಸ್ಟ್ ಟೈಮ್ ಐಎಸ್‌ಇಸಿ ಕಡೆಯಿಂದ ಒಂದೆರಡು ತಿಂಗಳಲ್ಲಿ ರಿಪೋರ್ಟ್ ಬರುತ್ತದೆ. ಆ ರಿಪೋರ್ಟ್‌ನಲ್ಲಿ ಏಕೆ ಕೈಗಾರಿಕೆಗಳು ಅನಾರೋಗ್ಯವಾಗುತ್ತಿವೆ? ಏನು ಮಾಡಬೇಕು

ಅಂತ ಒಂದು ರಿಪೋರ್ಟ್ ತೆಗೆದುಕೊಳ್ಳುತ್ತಿದ್ದೇವೆ. ಈಗ ತಾವು ಏನು ಕ್ರಮ ತೆಗೆದುಕೊಂಡಿರಿ ಅಂತ ಕೇಳಬಹುದು. ಇರಬಹುದು ನಿಜ, ಸಬ್ಸಿಡಿ ಕೊಡಬೇಕಾಗಿತ್ತು. ಇದರಿಂದ ಸಣ್ಣ ಕೈಗಾರಿಕೆಗಳಿಗೆ ತೊಂದರೆಯಾಗಿದ್ದು ನಿಜ, ನಾನು ಒಪ್ಪಿಕೊಳ್ಳುತ್ತೇನೆ. ಹಾಗಾಗಿ ಇವತ್ತು ಸರ್ಕಾರ ಬಾಂಡ್ಸ್ ಇಶ್ಯೂ ಮಾಡಿ ಅಥವಾ ಬೇರೆ ಯಾವುದಾದರೂ ವಿಧದಿಂದ ಈ ಸಮಸ್ಯೆಯನ್ನು ಬಗೆಹರಿಸಬೇಕು ಅಂತ ಸರ್ಕಾರದಲ್ಲಿ ಸೀರಿಯಸ್ ಆಗಿ ಒಂದು ಚಿಂತನೆ ನಡೆಯುತ್ತಿದೆ. ಎರಡನೆಯದು, ಮೊದಲನೇ ಬಾರಿಗೆ ದೇಶದಲ್ಲಿ ಸಣ್ಣ ಕೈಗಾರಿಕೆ ಅನಾರೋಗ್ಯವಾದಾಗ ಪುನರ್ವಸತಿ ಮಾಡುವ ಒಂದು ಪ್ಯಾಕೇಜ್ ಜಾರಿಗೆ ತಂದಿದ್ದೇವೆ. ಇದು ನಮ್ಮ ಕೈಗಾರಿಕಾ ನೀತಿಯಲ್ಲಿದೆ. ಏನೋ ಪ್ಯಾಕೇಜ್ ತಂದಿದ್ದೇವೆ? ಹಿಂದೆ ದೊಡ್ಡ ಕೈಗಾರಿಕೆಗಳ ಪ್ರಮಾಣ ಅಷ್ಟೇ ಇತ್ತು. ಬಿ,ಇ,ಎಫ್,ಆರ್. ನಲ್ಲಿ ರಿಜಿಸ್ಟರ್ಡ್ ಆದಾಗ ಅವರು ಅರ್ಹರಿದ್ದರು. ಆದರೆ ದೇಶದಲ್ಲಿಯೇ ಮೊದಲಬಾರಿಗೆ ಸಣ್ಣ ಕೈಗಾರಿಕೆಗಳು ಅನಾರೋಗ್ಯವಾದಾಗ ರಿಜರ್ವ್ ಬ್ಯಾಂಕ್ ಗೈಡ್‌ಲೈನ್ಸ್ ಮತ್ತು ಆ ಕೈಗಾರಿಕೆಗಳನ್ನು ಆರೋಗ್ಯಕರವಾಗಿ ಮಾಡಲಿಕ್ಕೆ ಸಾಧ್ಯವಿದ್ದರೆ ಸೇಲ್ಸ್ ಟ್ಯಾಕ್ಸ್ ಈ ಬೆನಿಫಿಟ್ ಅವರಿಗೆ ಕೊಡಬೇಕು ಎನ್ನುವ ಒಂದು ನಿರ್ಣಯವನ್ನು ಸರ್ಕಾರ ಮಾಡಿದೆ. ಡಬ್ಲ್ಯು.ಟಿ.ಒ. ಪರಿಣಾಮದಿಂದ ಹಲವಾರು ಕೈಗಾರಿಕೆಗಳ ಮೇಲೆ ಪರಿಣಾಮವಾಗಿದೆ. ನಾವು 21ನೇ ಶತಮಾನದಲ್ಲಿ ಸ್ಪರ್ಧೆಯಲ್ಲಿ ಡಬ್ಲ್ಯು.ಟಿ.ಒ.ದಲ್ಲಿ ನಾವು ಭಾಗವಹಿಸಬೇಕು, ಹಾಗಾಗಿ ಅಪ್‌ಗ್ರೇಡೇಷನ್ ಆಫ್ ಟೆಕ್ನಾಲಜಿ ಮಾಡುವುದಕ್ಕೆ ಮೊದಲನೇ ಬಾರಿ ಕರ್ನಾಟಕ ಸರ್ಕಾರ ಭಾರತ ದೇಶದಲ್ಲಿ 4 ಪರ್ಸೆಂಟ್ ಇಂಟರೆಸ್ಟ್ ಸಬ್ಸಿಡಿಯನ್ನು ಸಣ್ಣ ಕೈಗಾರಿಕೆಗಳಿಗೆ ಕೊಡುತ್ತಿದ್ದೇವೆ. ನಾನು ಏನು ಒಳ್ಳೆಯದು ಮಾಡಿದ್ದೇವೆ ಅದನ್ನು ಮೆಚ್ಚುವ ಜವಾಬ್ದಾರಿ ನಿಮ್ಮದಲ್ಲ. ಏನು ತಪ್ಪು ಮಾಡಿದ್ದೇವೆ ಅದರ ಬಗ್ಗೆ ಟೀಕೆ ಮಾಡಿ, ಅದು ನಿಮ್ಮ ಕರ್ತವ್ಯ. ಟೀಕೆ ಮಾಡಬೇಕಾಗುತ್ತದೆ. ಆ ತರಹದ ಸಲಹೆಗಳು ನಮಗೆ ಬೇಕು. ಆದರೆ ಏನು ಒಳ್ಳೆಯ ಕೆಲಸ ಮಾಡಿದ್ದೇವೆ ಅದನ್ನು ಮೆಚ್ಚುವ ಕೆಲಸ ನೀವು ಮಾಡಬೇಕು ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ ಈಗ ತಾವು ನಮ್ಮ ಎನ್.ಜಿ.ಇ.ಎಫ್. ಬಗ್ಗೆ ಹೇಳಿದಿರಿ. ಎನ್.ಜಿ.ಇ.ಎಫ್. ಬಗ್ಗೆ ಸಕ್ಸೆಸಿವ್ ಗೌರ್ನಮೆಂಟ್ ಆ ಇಂಡಸ್ಟ್ರಿ ಪ್ರೈವೇಟೈಜೇಷನ್ ಆಗಬೇಕೋ ಅಥವಾ ರಿವೈವ್ ಆಗಬೇಕೋ ಎನ್ನುವ ಬಗ್ಗೆ ಪ್ರಯತ್ನ ಮಾಡಿದ್ದಾರೆ. ಸಂಬಳಕ್ಕೂ ನಾವು ರೊಕ್ಕ ಕೊಟ್ಟಿದ್ದೇವೆ. ಇಡೀ ಇತಿಹಾಸದಲ್ಲಿ ಯಾವ ಸರ್ಕಾರ ಸಂಬಳಕ್ಕೆ ರೊಕ್ಕ ಕೊಟ್ಟಿದ್ದು ಇಲ್ಲ. ಅದು ಮಾನ್ಯ ದೇವೇಗೌಡರ ಕಾಲದಿಂದ, ಮಾನ್ಯ ಜೆ.ಎಚ್. ಪಟೇಲ್‌ರ ಕಾಲದಿಂದ ಮತ್ತು ಮಾನ್ಯ ಎಸ್.ಎಂ. ಕೃಷ್ಣರವರ ಕಾಲದಿಂದ ನಡೆಯುತ್ತಾ ಬಂದಿದೆ. ಆದ್ದರಿಂದ ಅದರ ಬಗ್ಗೆ ತಾವು ವಿಚಾರ ಮಾಡಬೇಕು, ಸರ್ಕಾರ ಎಷ್ಟು ವರ್ಷ ಕಾಯಬೇಕು? ಸರ್ಕಾರಿ ಕಂಪನಿಗಳಿಗೆ ಗೌರ್ನಮೆಂಟ್ ಟ್ರಜರಿಯಲ್ಲಿ ಇವತ್ತು ರೊಕ್ಕ ಕೊಡಬೇಕಾಗುತ್ತದೆ. ತಾವೇ ಹೇಳುತ್ತೀರಿ, ಅವರು ಕಷ್ಟದಲ್ಲಿದ್ದಾರೆ ಸಹಾಯ ಮಾಡಿ ಅಂತ. ರಸ್ತೆಗಳು ಮಾಡಿ ಅಂತ ಹೇಳುತ್ತೀರಿ, ಆಸ್ಪತ್ರೆಗಳನ್ನು ಮಾಡಿ ಅಂತ ಹೇಳುತ್ತೀರಿ, ಕುಡಿಯುವ ನೀರಿಗೆ ಹಣ ಕಡಿಮೆ ಅಂತ ಹೇಳುತ್ತೀರಿ, ಇವತ್ತು ನಾವು ಪಗಾರಕ್ಕೆ ಹಣ ಕೊಡಲಿಕ್ಕೆ ಸಾಧ್ಯವಾಗುತ್ತದೆ ಏನು? ನಾವು ಯೋಚನೆ ಮಾಡಬೇಕು. ಇವತ್ತು ಕೇಂದ್ರ ಸರ್ಕಾರ ಸಹ ಪ್ರೈವೇಟೈಜ್ ಮಾಡುತ್ತಿದೆ. ಕೆಲವು ಕ್ಲೋಜ್ ಮಾಡುತ್ತಿದೆ. ಅದರ ಅರ್ಥ ಅವರು ಕೈಗಾರಿಕೆ ವಿರುದ್ಧ ಇದ್ದಾರೆಂದು ಅಲ್ಲ. ಅಥವಾ ಪಬ್ಲಿಕ್ ಸೆಕ್ಟಾರ್ ವಿರುದ್ಧ ಇದ್ದಾರೆಂದು ಅಲ್ಲ ಇವತ್ತು ನನ್ನ ದೃಷ್ಟಿಯಿಂದ government has no business to be in business. ವ್ಯಾಪಾರ ಮಾಡುವುದು ನಮ್ಮ ಕೆಲಸ ಅಲ್ಲ.

It should be left to the private sector. ಆದರೆ ಒಳ್ಳೆಯ ಕೈಗಾರಿಕೆಗಳು ಇವೆ. ಸಾಧ್ಯವಾದರೆ ಅವುಗಳನ್ನು ನಡೆಸಿಕೊಂಡು ಹೋಗಬೇಕಾಗುತ್ತದೆ. ಬಹಳ ಅನಾರೋಗ್ಯಕರವಾಗಿರುವ ಕೈಗಾರಿಕೆಗಳ ಬಗ್ಗೆ ಪ್ರಯತ್ನ ಮಾಡಿದರೂ ಸಹ ಅನುಕೂಲವಾಗಲಿಲ್ಲ. ಅಂದರೆ ಕಾರ್ಮಿಕರ ಹಿತವನ್ನು ಗಮನದಲ್ಲಿಟ್ಟುಕೊಂಡು ಅದಕ್ಕೆ ನಾವು ಒಂದು ಪರಿಹಾರ ಕಂಡು ಹಿಡಿಯಬೇಕು. ಇವತ್ತು ಎನ್.ಜಿ.ಇ.ಎಫ್. ಪ್ರೈವೇಟೇಸೇಷನ್ ಪ್ರಾರಂಭ ಯಾವಾಗ ಆಯಿತು? ಸನ್ಮಾನ್ಯ ಶ್ರೀ ದೇವೇಗೌಡರು ಮುಖ್ಯಮಂತ್ರಿ ಆಗಿದ್ದಾಗ. ಮಾನ್ಯ ಕೃಷ್ಣರವರು ಮುಖ್ಯಮಂತ್ರಿ ಇದ್ದಾಗ ಅಲ್ಲ. ಪ್ರೈವೇಟೇಸೇಷನ್ ಎ.ಬಿ.ಬಿ. ಪ್ರಪೋಸಲ್.

ಇದು ಕ್ಯಾಬಿನೆಟ್ ಮುಂದೆ ಬಂದಿದ್ದು 1996ರಲ್ಲಿ. ಮೈಸೂರು ಲ್ಯಾಂಪ್ಸ್ ಪ್ರೈವೇಟೈಸೇಷನ್ ಮಾಡಿ ಅಂತ ಯಾರೂ ಹೇಳಿದರು. 1998ರಲ್ಲಿ ಸರ್ಕಾರ ಹೇಳಿತು. ಮಾನ್ಯ ಕೃಷ್ಣರವರ ಸರ್ಕಾರ ಅಲ್ಲ.

ಶ್ರೀ ಸಿ. ಚನ್ನಿಗಪ್ಪ : ಆವೊತ್ತು ನೀವೇ ಕೈಗಾರಿಕಾ ಮಂತ್ರಿಗಳಾಗಿದ್ದಿರಿ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, ನಾನು ಅದನ್ನು ಡಿನೈ ಮಾಡಲಿಲ್ಲ. ಮಾನ್ಯ ಸಿಂಧ್ಯಾರವರು ಹೇಳಿದರು ನೀವು ಪ್ರವೇಟೇಸೇಷನ್ ಮಾಡುತ್ತಿದ್ದೀರಿ ಅಂತ, ಅದಕ್ಕೆ ಇಲ್ಲ ಪ್ರವೇಟೇಸೇಷನ್ ಶುರು ಆಗಿದ್ದು 1996ರಿಂದ. ನಾನು ಮುಗಿಸಿಬಿಡುತ್ತೇನೆ....

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನಾವು ಕೆಲವು ವಿಚಾರಗಳನ್ನು ಹೇಳಬೇಕಾಗುತ್ತದೆ.

ಶ್ರೀ ಆರ್.ವಿ. ದೇಶಪಾಂಡೆ : ಪ್ರೈವೇಟೇಸೇಷನ್ ಮಾಡಬೇಕೆಂದು ನಾವು ಬಹಳ ಸಂತೋಷದಿಂದ ಮಾಡುತ್ತಿಲ್ಲ. ಇವತ್ತು ಕಂಪಲ್ಸ್‌ಷನ್ಸ್ ಇವೆ. ಜನರಿಗೆ ನಾವು ಪ್ರಣಾಳಿಕೆಯಲ್ಲಿ ಮಾತು ಕೊಟ್ಟಿದ್ದೇವೆ. ಗ್ರಾಮಾಂತರ ಪ್ರದೇಶದಲ್ಲಿ ರಸ್ತೆ ಮಾಡಬೇಕು, ಆಸ್ಪತ್ರೆ ಮಾಡಬೇಕು ಆದಕ್ಕೆ ಹಣದ ಕೊರತೆ ಇದೆ. ಇಂತಹ ಪರಿಸ್ಥಿತಿಯಲ್ಲಿ ಸರ್ಕಾರದಿಂದ ಎಷ್ಟು ವರ್ಷ ಅನಾರೋಗ್ಯಕರ ಕೈಗಾರಿಕೆಗಳನ್ನು ನಡೆಸಬೇಕು? ಎಷ್ಟು ವರ್ಷ ಸಂಬಳ ಕೊಡಬೇಕು? ಈ ಮನೆ ತೀರ್ಮಾನ ಮಾಡಲಿ. ಇಲ್ಲಾ ಎಲ್ಲಾ ಅನಾರೋಗ್ಯಕರ ಕೈಗಾರಿಕೆಗಳನ್ನು ನಡೆಸಿ, ಗ್ರಾಮಾಂತರ ಪ್ರದೇಶದಲ್ಲಿ ಏನೂ ಅಭಿವೃದ್ಧಿ ಬೇಡ, ನಮಗೆ ಮೂಲಭೂತ ಸೌಕರ್ಯಗಳು ಬೇಡ, ಅಂತ ಹೇಳಿ, ನಮ್ಮದೇನೂ ತಕರಾರು ಇಲ್ಲ. ಆ ತರಹದ ನಿರ್ಣಯ ತಾವು ತನ್ನಿ. ನಾವು ಒಪ್ಪುತ್ತೇವೆ. ಆದರೆ ಒಂದು ಜವಾಬ್ದಾರಿಯಿಂದ ಸರ್ಕಾರ ಕೆಲಸ ಮಾಡುವಾಗ ಜವಾಬ್ದಾರಿಯಿಂದ ಬೊಕ್ಕಸದ ಹಣ ಉಪಯೋಗ ಮಾಡಬೇಕಾಗುತ್ತದೆ. ಇವತ್ತು ಬಿ.ಆರ್.ಐ.ಎಫ್. ಬಗ್ಗೆ ನಮ್ಮ ವಿರೋಧಪಕ್ಷದ ನಾಯಕರು ಹೇಳಿದರು, ಹರಿಹರದಲ್ಲಿ ಕಿರ್ಲೋಸ್ಕರ್ ಕ್ಲೋಸ್ ಆಗಿದೆ. ಇವತ್ತು ಅಲ್ಲಿನ ಕಾರ್ಮಿಕರು ಕಷ್ಟದಲ್ಲಿದ್ದಾರೆ. ನಾನು ನಾಲ್ಕು ಮೀಟಿಂಗ್ ಮಾಡಿದ್ದೇನೆ. 12ನೇ ತಾರೀಖು ಮತ್ತೊಂದು ಮೀಟಿಂಗ್ ಇಟ್ಟಿದ್ದೇನೆ. ಸರ್ಕಾರ ಪ್ರಯತ್ನ ಮಾಡುತ್ತಿದೆ. ಬಿ.ಐ.ಎಫ್.ಆರ್. ಮುಂದೆ ಕೇಸ್ ಇದೆ. ಆದರೆ ಕೇಂದ್ರ ಸರ್ಕಾರದ ಪಾಲಿಸಿ ಪ್ರಕಾರ ಒಂದು ಪ್ರೈವೇಟ್ ಇಂಡಸ್ಟ್ರಿ ಸಿಕ್ ಆದಾಗ ಪುನರ್ವಸತಿ ಮಾಡುವ ಪ್ಯಾಕೇಜ್ ಕೊಡಬೇಕು. ಕಾರ್ಮಿಕರಿಗೆ ತೊಂದರೆ ಆಗಬಾರದು.

4.40 ಪಿ.ಎಂ.

ರಾಜ್ಯ ಸರ್ಕಾರದ ವ್ಯಾಪ್ತಿಯ ಕೈಗಾರಿಕೆಗಳಾದ ಮೈಸೂರು ಲ್ಯಾಂಪ್ಸ್ 'ಮತ್ತು ಎನ್.ಜಿ.ಇ.ಎಫ್. ನಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರಿಗೆ ವಿ.ಆರ್.ಎಸ್. ಜಾರಿಗೆ ಕೊಟ್ಟಿದ್ದೇವೆ. ಕೆಲವರಿಗೆ 2,3,4 ಲಕ್ಷ ಮತ್ತೆ ಕೆಲವರಿಗೆ 5 ಲಕ್ಷದವರೆಗೆ ಹಣ ಸಿಕ್ಕಿದೆ ಕಾರ್ಮಿಕರಿಗೆ, ನಾನು

ಇವತ್ತು ಕೇಂದ್ರ ಸರ್ಕಾರದ ತಪ್ಪು ಎಂದು ಹೇಳುವುದಿಲ್ಲ. ಆ ತರಹದ ಪಾಲಿಸೀಸ್ ಇವೆ. ಹಾಗಾಗಿ, ಇವತ್ತು ಸರ್ಕಾರಿ ಸ್ವಾಮ್ಯದ ಕೈಗಾರಿಕೆಗಳಿಗೆ, ಕಾರ್ಮಿಕರ ಹಿತವನ್ನು ಗಮನದಲ್ಲಿಟ್ಟುಕೊಂಡು ಎಲ್ಲೆಲ್ಲಿ ಸಾಧ್ಯ ಅಲ್ಲೆಲ್ಲಾ ಮಾಡಿದ್ದೇವೆ. ಇವತ್ತು ಒಂದು ಡಿಮ್ಯಾಂಡ್ ಇದೆ. ನಿಮ್ಮ ಸಹಕಾರ ಹೆಚ್ಚಿನದಾಗಿ ಬೇಕಾಗಿದೆ. ಸರ್ಕಾರ ಚಿಂತನೆ ಮಾಡುತ್ತಾ ಇದೆ. ಹುಬ್ಬಳ್ಳಿ ಎನ್.ಜಿ.ಇ.ಎಫ್. ಬಗ್ಗೆ ಹೇಳಿದಿರಿ. ಅದು ಒಳ್ಳೆಯ ಯೂನಿಟ್, ನನಗೆ ಗೊತ್ತು. ನಾನು ಡಿಸೈಡ್ ಮಾಡಿದ್ದೇನೆ, ಅದನ್ನು ಕ್ಲೋಸ್ ಮಾಡಬೇಡಿ, ಪುನಃ ಪ್ರೈವೇಟೈಸ್ ಮಾಡಿ, ಅಡ್ವರ್ ಟೈಸ್ ಮಾಡಲಿಕ್ಕೆ ನಾನು ಆದೇಶ ಕೊಟ್ಟಿದ್ದೇನೆ. ಹಾಗಾಗಿ, ನಮಗೂ ಮುಂಚಿನ ಸಮಾಧಾನ ಇಲ್ಲ. ನೀವು ದಾಂಡೇಲಿ ಬಗ್ಗೆ ಹೇಳಿದಿರಿ. ಆ ಕ್ಷೇತ್ರದಲ್ಲಿ 1973ನೇ ಇಸವಿಯಿಂದ ನಾನು ವಕಾಲತ್ತು ಮಾಡಿದ್ದೇನೆ. 1983ನೇ ಇಸವಿಯಿಂದ ಪ್ರತಿನಿಧಿಸುತ್ತಿದ್ದೇನೆ. ಆ ಕಾರ್ಖಾನೆಯಲ್ಲಿ ಸುಮಾರು 10 ಸಾವಿರ ಜನರ ಡೈರೆಕ್ಟ್, ಇನ್‌ಡೈರೆಕ್ಟ್ ಎಂಪ್ಲಾಯ್‌ಮೆಂಟ್ ಇದೆ. ಅಲ್ಲಿ ಇದುವರೆಗೆ ಒಂದು ಸ್ಟ್ರೈಕ್ ಆಗಿಲ್ಲ. ಅಲ್ಲಿ ನಾನೇ ಶಾಸಕ, ಅಲ್ಲಿ ಕಾರ್ಮಿಕರ ವಿರೋಧ ಇದ್ದರೆ, ಈ ರೀತಿ ಆಗುತ್ತಿತ್ತೇ? ಇವತ್ತು ಯಾವ ಕೈಗಾರಿಕೆಗಳು, ಅವರ ಕಾಲದಲ್ಲಿ ಆಗದಿದ್ದರೆ ನಾವೇನು ಮಾಡುವುದಕ್ಕೆ ಬರುತ್ತದೆ? ಹುಬ್ಬಳ್ಳಿಯಲ್ಲಿ ಕಿರ್ಲೋಸ್ಕರ್ ಫ್ಯಾಕ್ಟರಿ ಬಂದ್ ಆಯಿತು. ನಾವು, ನೀವು ಹೋಗಿ ಕೇಳುವುದಕ್ಕೆ ಆಗುತ್ತದೆಯೇ? ನೀವೇನು ಮಾಡಬಹುದು ಹೇಳಿ. ನಿಮ್ಮ ಹತ್ತಿರ ಇದ್ದರೆ ನೀವೇನು ಮಾಡುತ್ತಿದ್ದಿರಿ? ನಿಮ್ಮ ಮನೆ, ಹೊಲ ಮಾರಾಟ ಮಾಡಿ, ಅವರಿಗೆ ಹಣ ಕೊಡುತ್ತಿದ್ದಿರೇನು? ಹೇಳಿ, ಕೊಡುವುದಿಲ್ಲವಲ್ಲ? ಹಾಗಾಗಿ, ನಾವು ಮಂತ್ರಿ ಇದ್ದರೂಸಹ ನಮ್ಮ ಮೇಲೆ ಕೆಲವು ಜವಾಬ್ದಾರಿಗಳು ಇವೆ. ಆ ಜವಾಬ್ದಾರಿಯಿಂದ ಕೆಲಸ ಮಾಡಬೇಕಾಗುತ್ತದೆಯೇ ವಿನಹ, ಕಾಯಿದೆ ಕಾನೂನು ಬಿಟ್ಟು ನಾವು ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಅದೇ ಪ್ರಕಾರ, ಇವತ್ತು ನಮ್ಮ ಓವರ್ ಆಲ್ ಟ್ರೆಂಡ್..

ಶ್ರೀ ಎಸ್.ಎಸ್. ಪಾಟೀಲ್ : ಮುಚ್ಚುವ ಫ್ಯಾಕ್ಟರಿಗೆ ಚೇರ್ಮನ್ ಏಕೆ ಮಾಡಿದಿರಿ ಎಂಬುದನ್ನು ಹೇಳಿ.

ಶ್ರೀ ಆರ್.ವಿ. ದೇಶಪಾಂಡೆ : ಜಿ.ಡಿ.ಪಿ. ಗ್ರೋತ್ ಬಗ್ಗೆ ಕೇಂದ್ರ ಫೈನಾನ್ಸ್ ಮಿನಿಸ್ಟರ್ ಮೊನ್ನೆ ಏನು ಹೇಳಿದರು? GDP growth of India will be one of the highest in the world and we are going to achieve 5.5. I am saying... Karnataka is targetting a GDP growth of 7.3% in agriculture, industry manufacturing/ and service sectors. We have done it. We have surpassed the Govt. of Indias figure. Not only that, more than that, industrial growth we expect to reach between 8 to 10% compared to 6 or 6.5% of Government of India, by 2006. ಹಾಗಾಗಿ, ಹೊಸ ಕೈಗಾರಿಕಾ ನೀತಿ ತಂದಿದ್ದೇವೆ. 21ನೇ ಶತಮಾನಕ್ಕೆ ಅನುಗುಣವಾದಂಥ ಪರಿಸ್ಥಿತಿಗೆ ಏನಾಗಬೇಕು, ಅದು ರೀಸರ್ಚ್, ಐ.ಎಫ್.ಐ. ಸರ್ಟಿಫಿಕೇಷನ್, ಮೂಲಭೂತ ಸೌಕರ್ಯಗಳನ್ನು ಒದಗಿಸುವುದು, ಮಾನವ ಸಂಪನ್ಮೂಲ ಬೆಳೆಸುವುದಕ್ಕೆ ಎಲ್ಲಾ ರೀತಿಯ ಪ್ರಯತ್ನಗಳನ್ನು ಎಲ್ಲಾ ಇಲಾಖೆಗಳ ಸಹಕಾರದಿಂದ ಮತ್ತು ನಿಮ್ಮೆಲ್ಲರ ಸಹಕಾರದಿಂದ ಸರ್ಕಾರ ಮಾಡುತ್ತಾ ಇದೆ. ನಮ್ಮ ಸ್ನೇಹಿತರು ಮುಖ್ಯವಾಗಿ ಅಪೀಲು ಬಗ್ಗೆ ಹೇಳಿದ್ದಾರೆ. ತಾವು ಅಪೀಲು ಪ್ರಾವಿಷನ್ ಬಗ್ಗೆ ಕೇಳಿದ್ದೀರಿ. ತಾವು ಸ್ವಲ್ಪ ಮೆಮೋರ್‍ಯಾಂಡಮ್

ನೋಡಬೇಕಾಗಿತ್ತು. ಪುಟ-14ರಲ್ಲಿ regarding delegated legislation; appeal provision ಕ್ಲಾಸ್-4ರಲ್ಲಿ ಹೇಳಿದ್ದೇವೆ.

ಶ್ರೀ ಎಸ್.ಎಸ್. ಪಾಟೀಲ್ : ಅಲ್ಲಿ ಅಧ್ಯಕ್ಷರನ್ನು ಏಕೆ ಮಾಡಿದ್ದೀರಿ, ಇದಕ್ಕೆ ಉತ್ತರ ಹೇಳಿ. ಮತ್ತೆ ಸೋಪ್ಸ್ ಅಂಡ್ ಡಿಟರ್ಜೆಂಟ್‌ನಲ್ಲಿ ಒಬ್ಬ ಎಂ.ಡಿ. ಇದ್ದಾಗ 6 ಕೋಟಿ ರೂಪಾಯಿಗಳನ್ನು ಬ್ಯಾಂಕಿನಲ್ಲಿಟ್ಟಿದ್ದರು. ಮತ್ತೊಬ್ಬ ಎಂ.ಡಿ. ಮುಚ್ಚಿದ, ಈಗ ಆ ನೌಕರರುಗಳನ್ನು ಮನೆಗೆ ಕಳುಹಿಸುತ್ತೀರಿ. ಇದೇಕೆ ಈ ರೀತಿಯಾಯಿತು, ಇದಕ್ಕೆ ಉತ್ತರ ಹೇಳಿಬಿಡಿ.

ಶ್ರೀ ಆರ್.ವಿ. ದೇಶಪಾಂಡೆ : ಕೆಲವು ಸ್ನೇಹಿತರು ಅಪೀಲು ಬಗ್ಗೆ ಕೇಳಿದ್ದಾರೆ. ಅಪೀಲಿಗೆ ಪ್ರಾವಿಷನ್ ರೂಲ್ಸ್‌ನಲ್ಲಿ ಮಾಡುತ್ತೇವೆ ಅಥವಾ ಮೆಮೋರ್‍ಯಾಂಡಮ್ ಓದಿದರೆ ಗೊತ್ತಾಗುತ್ತದೆ. ಅದೇ ಪ್ರಕಾರ deemed clearance ಏನಿರಬೇಕು, ಅದು appeal ನಲ್ಲಿ ಬರುತ್ತದೆ. ಆಮೇಲೆ ಕಮಿಟಿ ಬಗ್ಗೆ ತಾವು ಕೇಳಿದಿರಿ.

ಶ್ರೀ ಸಿ. ಭೈರೇಗೌಡ : ತಾವು ಅಪೀಲು ಎಂದು ಹೇಳುತ್ತಿದ್ದೀರಿ. ಈಗಾಗಲೇ there is an appeal of Mr. Shivananda Patil before you. ಈಗ ಮೊದಲು ಬಂದಂಥ ಅರ್ಜಿ ಕೆಳಗಡೆ ಬಿದ್ದಿದೆ? ನಂತರ ಬಂದಂಥ ಅರ್ಜಿಗಳಿಗೆ ನೀವು ಮನ್ನಣೆ ಕೊಟ್ಟಿದ್ದೀರಿ. ಇದು ಯಾವ ಪಾರದರ್ಶಕತೆ? ಯಾವ ಅಪೀಲು ಇದು? ಇವತ್ತಿನದಿವಸ ಎಲ್ಲಿ ಹೋಗಬೇಕು? ಹೇಳಿ. ಇದಕ್ಕೆ ದಯವಿಟ್ಟು ಉತ್ತರ ಕೊಡಿ.

SRI R.V. DESHPANDE: Not me, it is before the single window agency.

SRI C. BYRE GOWDA: You are dealing with the same subject. You have to reply for that.

SRI R.V. DESHPANDE: Without giving reply I will not conclude. Single Window agency; High Power Committee and then Cabinet, this is the framework. ಈ ತರಹ ಮಾಡಬೇಕೆಂದು ವಿಚಾರ ಮಾಡುತ್ತಿದ್ದೇವೆ. ರೂಲ್ಸ್ ಫ್ರೇಮ್ ಆಗಬೇಕು, ಕೂಡಲೇ ರೂಲ್ಸ್ ಫ್ರೇಮ್ ಆಗಿ, ಸದನದ ಮುಂದೆ ರೂಲ್ಸ್ ಬರುತ್ತವೆ. ಆ ರೂಲ್ಸ್ ಪ್ರಕಾರ ಡೀಮ್ಡ್ ಕ್ಲಿಯರೆನ್ಸ್ ಏನಿರಬೇಕು, ಅಪೀಲ್ಸ್ ಏನಿರಬೇಕು ಅದರ ಬಗ್ಗೆ ಸವಿಸ್ತಾರವಾದ ವಿವರ ಅಲ್ಲಿ ಇರುತ್ತದೆ. ಹಾಗಾಗಿ, ಈ ಮಸೂದೆ ಒಂದು ದೃಷ್ಟಿಯಿಂದ ಕ್ರಾಂತಿಕಾರಕವಾದ ಮಸೂದೆ, ನೀವೆಲ್ಲರೂ ಸ್ವಾಗತ ಮಾಡುತ್ತೀರೆಂದು ಭಾವಿಸಿದ್ದೆ. ಆದರೆ, ಕೆಲವು ಸಾರಿ ಕೆಲವು prejudiced ಇರುತ್ತವೆ. ಅವರಿಗೆ ಕ್ರೆಡಿಟ್ ಏಕೆ ಹೋಗಬೇಕು ಎಂದು. ಹಾಗಾಗಿ, ಇದರ ಬಗ್ಗೆ ನನಗೇನೂ ಬೇಜಾರು ಇಲ್ಲ. ನಾನು ಕೈಗಾರಿಕಾ ಮಂತ್ರಿಯಾಗಿ ಒಳ್ಳೆಯ ಹೆಸರು ತೆಗೆದುಕೊಳ್ಳುವುದು ಬೇಡ, that will be decided by the industrialists ನಮ್ಮ ಸ್ನೇಹಿತರಾದ ಎಸ್.ಎಸ್. ಪಾಟೀಲರು ಕೇಳಿದರು. ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ ಬಗ್ಗೆ ಇದ್ದ ಪಾಟೀಲರು ಒಳ್ಳೆಯ ಅಧಿಕಾರಿ, ಒಳ್ಳೆಯ ಕೆಲಸ ಮಾಡಿದ್ದರು. ಅದರ ನಂತರದ ಅಧಿಕಾರಿಗಳೂ ಸಹ ಒಳ್ಳೆಯ ಕೆಲಸ ಮಾಡಿದ್ದಾರೆ. It was before the BIFR. Its network was out. Now it is likely to come out of BIFR. In consumer

market, there is competition by multinational companies. So this company is not sustained. Its market share is being reduced.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ನೀವು ದಯವಿಟ್ಟು ಆಫೀಸರ್ಸ್‌ನ್ನು ಡಿಪೆಂಡ್ ಮಾಡಿಕೊಳ್ಳುವುದಕ್ಕೆ ಹೋಗಬೇಡಿ.

- ಗೊಂದಲ -

ಶ್ರೀ ಎಸ್.ಎಸ್. ಪಾಟೀಲ್ : ಅವರಿಗೆ ಸಪೋರ್ಟ್ ಮಾಡುತ್ತಿದ್ದಾರೆ. ಒಬ್ಬ ಎಂ.ಡಿ. ಇದ್ದಾಗ 6 ಕೋಟಿ ರೂಪಾಯಿಗಳನ್ನು ಬ್ಯಾಂಕಿನಲ್ಲಿಟ್ಟು ಹೋಗಿದ್ದರು. ಮುಂದೆ ಬಂದವರು ಅದನ್ನು ಸಾಲದಲ್ಲಿ ಮುಳುಗಿಸಿ ಹೋಗಿದ್ದಾರೆ. ಇದನ್ನು ಕಮಿಟಿ ರಿಪೋರ್ಟ್‌ನಲ್ಲಿ ಕೊಟ್ಟಿದ್ದೇವೆ. ಇದು ಸಮಿತಿ ಅಭಿಪ್ರಾಯ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ: ನಿಮ್ಮ ಆಫೀಸರ್ಸ್ ಏನು ಮಾಡುತ್ತಿದ್ದೇರೆಂದು ಕಮಿಟಿ ರಿಪೋರ್ಟ್‌ನಲ್ಲಿದೆ.

ಶ್ರೀ ಆರ್.ವಿ. ದೇಶಪಾಂಡೆ : ಎರಡನೆಯದು, ನಮ್ಮ ಸ್ನೇಹಿತರಾದ ಶಿವಾನಂದ ಪಾಟೀಲರು ಹೇಳಿದರು. ಈ ನಮ್ಮ ಕೈಗಾರಿಕೆ ಯಾರಾದರೂ ಕೈಗಾರಿಕೆಯನ್ನು ಪ್ರಾರಂಭ ಮಾಡುತ್ತೇವೆಂದರೆ ನಾವೇಕೆ ಇಲ್ಲವೆಂದು ಹೇಳಬೇಕು. ನೀವು ಯಾವಾಗ ಹೇಳಿದಿರಿ, ಆಗ ನಾವು ಉತ್ತೇಜನ ಕೊಟ್ಟಿದ್ದೇವೆಯೇ ವಿನಹ ಯಾವಾಗಲೂ ಇಲ್ಲವೆಂದು ಹೇಳಿಲ್ಲ. ನಿಮಗೆ ಕೆಲವೊಮ್ಮೆ ಫೋನ್ ಮಾಡಿ ಹೇಳಿದ್ದೇನೆ. ಆದರೆ, ಪ್ರಶ್ನೆ ಏನಿದೆ, ಇವತ್ತು ಪ್ರಾಜೆಕ್ಟ್‌ಗಳಿಗೆ ನಾವು ಹೈಪವರ್ ಕಮಿಟಿಯಲ್ಲಿ ಯಾವುದು ಷುಗರ್ ಫ್ಯಾಕ್ಟರಿ ಪ್ರಪೋಸಲ್ಸ್ ಇವೆ, ಮಂಡ್ಯ, ಬಿಜಾಪುರ, ಬೆಳಗಾಂ ಕ್ಲಿಯರ್ ಮಾಡುತ್ತಿಲ್ಲ. ಈಗಾಗಲೇ ನಾವು ಬಹಳಷ್ಟು ಪ್ರಾಜೆಕ್ಟ್‌ಗಳಿಗೆ ಕ್ಲಿಯರೆನ್ಸ್ ಕೊಟ್ಟಿದ್ದೇವೆ. ಈಗಾಗಲೇ ಹಲವಾರು ಪ್ರಾಜೆಕ್ಟ್‌ಗಳು ಬಂದಿವೆ, ಕೆಲವು ಪ್ರಾಜೆಕ್ಟ್‌ಗಳಲ್ಲಿ ಇಂಪ್ಲಿಮೆಂಟೇಷನ್ ಸ್ಟೇಜ್‌ನಲ್ಲಿ ಇವೆ. ಈ ಷುಗರ್ ಕೇನ್ ಅವೈಲೆಬಿಲಿಟಿ ಏನಿದೆ, ಇದರ ಬಗ್ಗೆ ನಾವು ಒಂದು ಸಮಿತಿ ಮಾಡಿದ್ದೇವೆ. ಅವರು ರಿಪೋರ್ಟ್ ಕೊಟ್ಟಿದ್ದಾರೆ. ಸಧ್ಯಕ್ಕೆ ಇದ್ದ ಷುಗರ್ ಫ್ಯಾಕ್ಟರಿಗಳಿಗೆ ಎಷ್ಟು ಷುಗರ್ ಕೇಸ್ ಬೇಕು, ಏನೆಂದರೆ ಇರತಕ್ಕ ಫ್ಯಾಕ್ಟರಿಗಳಿಗೆ ಷುಗರ್-ಕೇನ್ ಸಿಗಲಿಲ್ಲವೆಂದರೆ, ಅದೂ ಅನಾರೋಗ್ಯಕರವಾದರೆ ಅದರಿಂದ ಫ್ಯಾಕ್ಟರಿಯೂ ಬಂದ್ ಆಗಬಹುದು. ನೂರಾರು ಕೋಟಿ ಸಾಲ ತರುತ್ತಾರೆ, ಅದಕ್ಕೂ ತೊಂದರೆಯಾಗಬಹುದು. ಕಾರ್ಮಿಕರಿಗೂ ತೊಂದರೆಯಾಗಬಹುದು. ಹಾಗಾಗಿ ಕೈಗಾರಿಕೆಗಳು ಆರೋಗ್ಯಕರವಾಗಿ ನಡೆಯಬೇಕು, ಅವುಗಳಿಗೆ ಸಾಕಷ್ಟು ರಾ-ಮೆಟೀರಿಯಲ್ಸ್ ತರಬೇಕು, ಆ ದೃಷ್ಟಿಯಿಂದ ನಾವು ವಿಚಾರ ಮಾಡುತ್ತಿದ್ದೇವೆ. ಅವರ ಪ್ರಸ್ತಾವನೆ ಕೊನೆಯಲ್ಲಿ ಸಿಂಗಲ್ ವಿಂಡೋ ಏಜೆನ್ಸಿ ಬಂದಾಗ ಅದನ್ನು ರಿಜೆಕ್ಟ್ ಮಾಡಿಲ್ಲ. ಅದು seriously under the consideration ಇದೆ. Once the report of sugarcane is finalised, definitely we will consider politically ಪ್ರೊಜುಡೈಸ್ ಮಾಡುವುದು ಮತ್ತೊಂದು ಮಾಡುವುದು ಇಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಪೊಲಿಟಿಕಲ್ ಆಗಿ ಅವರಿಗೆ ನೀವು ಕೊಟ್ಟಿದ್ದೀರಿ.

ಫೆಬ್ರವರಿ ತಿಂಗಳಲ್ಲಿ ಮನವಿ ಕೊಟ್ಟವರಿಗೆ ಕನ್ಸಿಡ್ ಮಾಡಲಿಲ್ಲ, ಏಪ್ರಿಲ್‌ನಲ್ಲಿ ಕೊಟ್ಟವರಿಗೆ ಕನ್ಸಿಡರ್ ಮಾಡಿದ್ದೀರಿ. ಅದನ್ನು ಹೇಗೆ ಕೊಟ್ಟಿದ್ದೀರಿ?

ಶ್ರೀ ಆರ್.ವಿ. ದೇಶಪಾಂಡೆ : ಇಲ್ಲಿ ಪೊಲಿಟಿಕಲ್ ಆಗಿ ಕೊಡುವ ಪ್ರಶ್ನೆ ಇಲ್ಲ. ನಾನು ಏನು ಹೇಳಿದೆ? ನಾವು ನಿಮ್ಮ ಅಪ್ಲಿಕೇಷನ್‌ನ್ನು ರಿಜೆಕ್ಟ್ ಮಾಡಿಲ್ಲ.

ಶ್ರೀ ಶಿವಾನಂದ ಎಸ್. ಪಾಟೀಲ್ : ನಾನು ತಮಗೆ ಮೊದಲೇ ಹೇಳಿದ್ದೇನೆ. ನಾವು ವಿಧೇಯಕವನ್ನು ಸ್ವಾಗತಿಸುತ್ತೇವೆ. ಏನೇ ಮಾಡಿದರೂ ಬಿಲ್ ಅಂತೂ ಪಾಸ್ ಆಗುತ್ತದೆ. ಪ್ರಿಜುಡ್ಯೂಸ್ಡ್ ಎಂದು ಹೇಳುತ್ತೀರಿ. ಆದರೆ ನಾನು ಆ ತರಹವಾಗಿ ಪ್ರಿಜುಡ್ಯೂಸ್ಡ್ ಆಗಿ ಚಾರ್ಜ್ ಮಾಡಿಲ್ಲ. ಮಾನ್ಯ ಚಿಮ್ಮನಕಟ್ಟಿಯವರು ಒಂದು ಮಾತನ್ನು ಹೇಳಿದ್ದಾರೆ. ಅವರಿಗೆ ಒಂದು ಮಾತನ್ನು ನಾನು ಹೇಳಬಯಸುತ್ತೇನೆ. ಡಿಸಿಸಿ ಬ್ಯಾಂಕ್ ಛೇರ್ಮನ್ ಆಗಿ ಫಸ್ಟ್ ಪ್ರೈವೇಟ್ ಶುಗರ್ ಫ್ಯಾಕ್ಟರಿಗೆ ಫೈನಾನ್ಸ್ ಮಾಡಿದ್ದು ಇದ್ದರೆ ಅದು ಬಿಜಾಪುರ ಡಿಸಿಸಿ ಬ್ಯಾಂಕ್. ಅದರ ಅಧ್ಯಕ್ಷನಾಗಿ ಈ ಮಾತನ್ನು ಹೇಳುತ್ತೇನೆ. ಇದನ್ನು ತಾವುಗಳು ಒಪ್ಪಿಕೊಳ್ಳಬೇಕು. ಬೇರೆ ಯಾರೂ ಈ ಕೆಲಸವನ್ನು ಮಾಡಿಲ್ಲ. ನಾವೇ ಬಂದು ಸಹಕಾರ ಸಂಘಗಳ ರಿಜಿಸ್ಟ್ರಾರ್‌ರವರು ಮುಂದೆ ನಿಂತು ಅವರ ಪರ್ಮಿಷನ್ ತೆಗೆದುಕೊಂಡು ಹೋಗಿ, ಅವರಿಗೆ ಕನ್‌ವಿನ್ಸ್ ಮಾಡಿ, ಖಾಸಗಿ ಶುಗರ್ ಫ್ಯಾಕ್ಟರಿಗೆ ಫೈನಾನ್ಸ್ ಮಾಡಿದ್ದೇವೆ. ಎಷ್ಟು ಶುಗರ್ ಫ್ಯಾಕ್ಟರಿಗಳಿಗೆ ಫೈನಾನ್ಸ್ ಮಾಡಿದ್ದೇವೆ, ಅದನ್ನು ನಾವು ಪೊಲಿಟಿಕಲ್ ಲೆವೆಲ್‌ನಲ್ಲಿ ಮಾಡಿಲ್ಲ. ಮಾನ್ಯ ಸಿದ್ದುನ್ಯಾಮಗೌಡರು ನಮ್ಮ ಪಾರ್ಟಿಯವರಲ್ಲ. ಮಾನ್ಯ ಎಸ್.ಆರ್. ಪಾಟೀಲರು ನಮ್ಮ ಪಾರ್ಟಿಯವರು ಅಲ್ಲ. ಮಾನ್ಯ ಚಿಮ್ಮನಕಟ್ಟಿಯವರು ನನ್ನ ಪಾರ್ಟಿಯವರು ಅಲ್ಲ. ಮಾನ್ಯ ಚಿಮ್ಮನಕಟ್ಟಿಯವರು ಒಂದು ಮಾತು ಏನು ಹೇಳಿದರು, ತಮ್ಮ ಆತ್ಮ ಮುಟ್ಟಿ ಹೇಳಿ. ನೀವೇ ಐದು ಕೋಟಿ ರೂ. ಕೊಟ್ಟಿದ್ದೀರಿ, ಏಕೆ ಅಪೋಸ್ ಮಾಡುತ್ತೀರಿ ಎಂದು ಹೇಳಿದ್ದೀರಿ. ನಾನು ಅಪೋಸ್ ಮಾಡುತ್ತಾ ಇಲ್ಲ. ಇಲ್ಲಿ ನಾನು ಏನು ಹೇಳಿದೆ. ನನಗಿಂತಲೂ ಹಿಂದಿನಿಂದ ಬಂದಂಥ ಪ್ರೊಪೋಸಲ್‌ಗಳು, ಬೇಕಾದರೆ ತಾವುಗಳು ಅಪ್ಲಿಕೇಷನ್‌ಗಳ ದಿನಾಂಕವನ್ನು ನೋಡಬಹುದು. ಶುಗರ್ ಡೈರೆಕ್ಟರೇಟ್‌ನಿಂದ ಮತ್ತು ಇಂಡಸ್ಟ್ರೀಸ್ ಮತ್ತು ಕಾಮರ್ಸ್ ಕಡೆಯಿಂದಲೂ ನಾನು ಡೇಟ್‌ಗಳನ್ನು ತರಿಸಿಕೊಂಡಿದ್ದೇನೆ. ನನ್ನ ಅಪ್ಲಿಕೇಷನ್ ಫೆಬ್ರವರಿ ತಿಂಗಳಲ್ಲಿ ಹೋಗುತ್ತದೆ.

ಶ್ರೀ ಆರ್.ವಿ. ದೇಶಪಾಂಡೆ : ನಾನು ಹೇಳಿದ್ದೇನೆ ಅಲ್ಲ. ತಮ್ಮ ಅಪ್ಲಿಕೇಷನ್‌ನ್ನು ರಿಜೆಕ್ಟ್ ಮಾಡಿಲ್ಲವಲ್ಲಾ, ನಾನು ನಿಮ್ಮ ಅಪ್ಲಿಕೇಷನ್‌ನ್ನು ಕನ್ಸಿಡರ್ ಮಾಡುತ್ತಾ ಇದ್ದೇನೆ.

ಶ್ರೀ ಸಿ. ಬೈರೇಗೌಡ : ಇಲ್ಲಿ ಮೊದಲು ಬಂದ ಅಪ್ಲಿಕೇಷನ್‌ನ್ನು ಮಂಜೂರಾತಿ ಮಾಡದೇ ನಂತರ ಬಂದುವುಗಳನ್ನು ಮಂಜೂರು ಮಾಡಿದ್ದಾರೆ.

ಶ್ರೀ ಸಿ. ಚೆನ್ನಿಗಪ್ಪ : ಮಾನ್ಯ ಸದಸ್ಯರು ಕೇಳಿದ್ದಕ್ಕೆ ತಾವುಗಳು ವಿವರ ನೀಡಿ...

ಶ್ರೀ ಆರ್.ವಿ. ದೇಶಪಾಂಡೆ : ಉತ್ತರ ಕೇಳಲಿಕ್ಕೆ ಸಮಾಧಾನದಿಂದ ಇರಬೇಕು. ಇಲ್ಲಿ ಸರಕಾರವಾಗಲೀ, ಸರಕಾರದ ಕಾರ್ಯದರ್ಶಿಯವರಾಗಲೀ ಯಾರೂ ಪ್ರಿಜ್ಯುಡೈಸ್ ಆಗಿ ಏನೂ ಮಾಡಿಲ್ಲ. ಈ ಬಿಲ್‌ನಲ್ಲಿ ಶುಗರ್ ಫಾಕ್ಟರಿ ಇಶ್ಯೂ ಬರುವುದಿಲ್ಲ. ದಯವಿಟ್ಟು ಸಹಕಾರ ನೀಡಬೇಕು ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಗೊಂದಲ

ಮಾನ್ಯ ಸಿಂಧ್ಯಾರವರು ಗಂಗಾವತಿ ವಿಚಾರವನ್ನು ಹೇಳಿದ್ದಾರೆ. ಅಲ್ಲಿ ಅಂಥದ್ದು ಯಾವುದೂ ಆಗಿಲ್ಲ. ತಾವುಗಳೆಲ್ಲರೂ ಜವಾಬ್ದಾರಿ ಸ್ಥಾನದಲ್ಲಿದ್ದೀರಿ. ಏಕೆ ಆ ರೀತಿ ಹೇಳಿದ್ದಿರೋ ಗೊತ್ತಿಲ್ಲ. ರಾಜ್ಯದಲ್ಲಿ ಸಣ್ಣ ಕೈಗಾರಿಕೆ ದೊಡ್ಡ ಕೈಗಾರಿಕೆಗಳು ಸಿಕ್ ಆದಾಗ, ಒನ್ ಟೈಂ ಸೆಟಲ್‌ಮೆಂಟ್ ಸ್ಕೀಂನ್ನು ಮಾಡಿದ್ದೇವೆ. ಆ ಸ್ಕೀಂನಲ್ಲಿ ಕೆಎಸ್‌ಎಫ್‌ಸಿ, ಕೆಎಸ್‌ಆರ್‌ಟಿಸಿ...... ಗುಲ್‌ಬರ್ಗ, ಬೀದರ್‌ದಲ್ಲಿ

ಗೊಂದಲ

ಮೊದಲನೇ ಬಾರಿ ಭಾರತದೇಶದಲ್ಲಿ ಕರ್ನಾಟಕದ ಕೈಗಾರಿಕೆಗಳಿಗೆ, ಅದರಲ್ಲಿಯೂ ಸಣ್ಣ ಕೈಗಾರಿಕೆಗಳಿಗೆ, price and purchase / preference ಕೊಟ್ಟಿದ್ದೇವೆ. You should admire that. For KSRTC we have said 75% should be reserved for Karnataka industries. They should be given price and purchase preference. ಯಾರು ಅಡ್ ಮೈರ್ ಮಾಡುವವರು? ತಾವು ಅದು ಮಾಡಬೇಕಾಗುತ್ತದೆ. ಅದನ್ನು ಮರೆಯಬಾರದು. Regarding the sugar factory we try to sit with you and solve the problem. ಇನ್ನೂ ನೂರಾರು ಶುಗರ್ ಫ್ಯಾಕ್ಟರಿಗಳನ್ನು ಮಾಡಿ. ನಮ್ಮ ವಿರೋಧವೇನೂ ಇಲ್ಲ. ಏನಿದ್ದರೂ ಕಾಯಿದೆಗೆ ಅನುಗುಣವಾಗಿ ಮಾಡಬೇಕಾಗುತ್ತದೆ. ನಾನು ಇಂಡಿವಿಜಿಯಲ್ ಮ್ಯಾಟರ್ ಮೇಲೆ ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ. ಆದಷ್ಟು ಮಟ್ಟಿಗೆ ಮಾನ್ಯ ಸದಸ್ಯರುಗಳು ತಮ್ಮ ಸಮಸ್ಯೆಗಳ ಬಗ್ಗೆ ಹೇಳಿದ್ದಾರೆ, ಅವುಗಳಿಗೆ ಉತ್ತರ ಕೊಡಲು ಪ್ರಯತ್ನ ಮಾಡಿದ್ದೇನೆ ಈ ಮಸೂದೆಯನ್ನು ಮಾನ್ಯರುಗಳೆಲ್ಲರೂ ಯುನಾನಿಮಸ್‌ಲಿ ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ದೇಶಪಾಂಡೆಯವರೇ, ಎನ್‌ಜಿಇಎಫ್ ಬಗ್ಗೆ ಹೇಳಿದ್ದೀರಿ ಈಗ ಅವರಿಗೆ 20 ಕೋಟಿ ರೂಪಾಯಿಗಳನ್ನು ಸರ್ಕಾರದವರು ವರ್ಕಿಂಗ್ ಕ್ಯಾಪಿಟಲ್ ಕೊಟ್ಟರೆ ಅಥವಾ ಅವರ ಏನು ಹೆಚ್ಚುವರಿ ಪ್ರಾಪರ್ಟಿ ಇದೆ, ಅದನ್ನು ಮಾರಾಟ ಮಾಡಿದರೆ ಅದನ್ನು ನಡೆಸಬೇಕೆಂದು ನಾನು ಆಗ ಒಂದು ಪ್ರಪೋಸಲ್ ಕೊಟ್ಟಿದ್ದೆ. ಅದರ ಬಗ್ಗೆ ತಾವೇನೂ ಹೇಳಿಲ್ಲ. ಮೋಟಾರ್ ಫ್ಯಾಕ್ಟರಿ ಘಟಕವನ್ನು ನಮ್ಮ ಎಸ್ ಟಿಪಿಸಿ ಯವರಿಗೆ ವಹಿಸಿಕೊಟ್ಟರೂ ಅದು ನಡೆದುಕೊಂಡು ಹೋಗುತ್ತದೆ. ಅನಂತರ ಟ್ರಾನ್ಸ್‌ಮೀಟರ್ ಘಟಕ, ಅದನ್ನು ಕೆಪಿಟಿಸಿಎಲ್‌ನವರಿಗೆ ವಹಿಸಿಕೊಟ್ಟರೂ ನಡೆಸಿಕೊಂಡು ಹೋಗಬಹುದು. ಅದಕ್ಕೆ ಪ್ರಪೋಸಲ್‌ಗಳಿವೆ. ಯೂನಿಯನ್‌ನವರೂ ಕೂಡ ಕೊಟ್ಟಿದ್ದಾರೆ. ತಮಗೂ ಎಲ್ಲಾ ವಿಚಾರಗಳು ಗೊತ್ತಿವೆ. ಅವುಗಳನ್ನು ತಾವುಗಳು ಗಮನಿಸಿದರೆ, ಎನ್‌ಜಿಇಎಫ್‌ನ್ನು ಉಳಿಸಿಕೊಂಡು ಹೋಗಬಹುದು. ಅದರ ಬಗ್ಗೆ ಚಿಂತನೆಯನ್ನು ಮಾಡಬೇಕು. ಅದನ್ನು ಬಿಟ್ಟು ಎಲ್ಲವನ್ನೂ ಮುಚ್ಚುವಂತಾದ್ದು ಆಗಬಾರದು. ಆ ಕುರಿತು ಗಂಭೀರವಾದ ಚಿಂತನೆಯಾಗಲಿ.

ಶ್ರೀ ಶಿವಾನಂದ ಎಸ್. ಪಾಟೀಲ್ : ನಾನು ಒಂದು ವಿಚಾರವನ್ನು ತಮಗೆ ಕನ್ವಿನ್ಸ್ ಮಾಡಲಿಕ್ಕೆ ಹೇಳುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ಶುಗರ್ ಫ್ಯಾಕ್ಟರಿಯ ಬಗ್ಗೆ ಈಗ ಪ್ರಸ್ತಾಪಿಸುವುದು ಬೇಡ. ಶುಗರ್ ಫ್ಯಾಕ್ಟರೀಸ್ ಬಗ್ಗೆ ಪ್ರತ್ಯೇಕವಾಗಿ ಸಚಿವರು ಇದ್ದಾರೆ. ಆದರೂ ನಾನು ನನ್ನ

ಮಾಹಿತಿಗಳನ್ನು ಕೊಟ್ಟಿದ್ದೇನೆ. ನಾನು ಎಷ್ಟು ಸಾರಿ ಆ ಬಗ್ಗೆ ಉತ್ತರ ಹೇಳುವುದು? I have said, sympathetically I will consider.

ಶ್ರೀ ಜಗದೀಶ್ ಶೆಟ್ಟರ್ : ಸಿಂಗಲ್ ವಿಂಡೋ ಕುರಿತು ಹೇಳಿದ್ದೀರಿ. ಇದನ್ನು ಕೂಡ ಹೇಳಿ....

SRI R.V. DESHPANDE : I have never said no. I have helped him. Let him say no. ಮಾಡುವುದಿಲ್ಲವೆಂದು ಹೇಳಿಲ್ಲ.

ಶ್ರೀ ಶಿವಾನಂದ ಎಸ್. ಪಾಟೀಲ್ : ನೀವು ಹೇಳಿದ್ದು ಮುಂದೆ ಏನಾಯಿತು?

SRI R.V. DESHPANDE : You should be honest. whenever you, have come I will try to help you.

ಶ್ರೀ ಶಿವಾನಂದ ಎಸ್. ಪಾಟೀಲ್ : ಇಲ್ಲಿ ನಾನು ರಾಜಕೀಯ ಮಾಡಬೇಕೆಂದು ಇಂಟ್‌ರೆಸ್ಟ್ ಇದ್ದರೆ ನಾನು ಮಾತನಾಡಲಿಕ್ಕೆ ಬರುತ್ತಿರಲಿಲ್ಲ. ಹಾಗಿದ್ದರೆ ನಿಮ್ಮ ಬಿಲ್‌ನ್ನು ವಿರೋಧಿಸಿ ಹೊರಗೆ ಹೋಗುತ್ತಾ ಇದ್ದೆ. I was the first person to welcome this Bill. ಏಕೆಂದರೆ .. ನಾವು ಹೇಗೆ ಸಫರ್ ಆಗಿದ್ದೇವೆ ಎಂದು ನಮಗೇ ಗೊತ್ತಿದೆ. ಆದಕ್ಕೆ ಇನ್ನೂ ಸಫರ್ ಮಾಡುವುದು ಬೇಡ ಎಂದು ನಿಮ್ಮಲ್ಲಿ ರಿಕ್ವೆಸ್ಟ್ ಮಾಡುತ್ತಿದ್ದೇವೆ. ನಿಮ್ಮಲ್ಲಿ ಆಫೀಸರ್ಸ್ ಇಂಥ ಮಿಸ್ಟೇಕ್‌ಗಳನ್ನು ಮಾಡುತ್ತಾರೆ. ನಮ್ಮ ಅಪ್ಲಿಕೇಷನ್ ರೆಫರ್ಡ್ ಟು ಕೇನ್ ಕಮಿಷನರ್ ಎಂದು ಹೇಳುತ್ತಾರೆ. ಹಾಗಾದರೆ ನಮ್ಮ ಅಪ್ಲಿಕೇಷನ್ ಮಾತ್ರ ಏಕೆ ಕೇನ್ ಕಮಿಷನರ್‌ಗೆ ಹೋಗಬೇಕು? ನನಗಿಂತಲೂ ಹಿಂದೆ ಬಂದ ಮೂರು ಅಪ್ಲಿಕೇಷನ್‌ಗಳು ಕೇನ್ ಕಮಿಷನರ್‌ಗೆ ಹೋಗಬಾರದೇಕೆ? ಅದು ಮಂಜೂರು ಆಗಲಿಲ್ಲವೆಂದರೆ

ಶ್ರೀ ಆರ್.ವಿ. ದೇಶಪಾಂಡೆ : ಇವರ ಅಪ್ಲಿಕೇಷನ್ ಫೆಬ್ರವರಿಯಲ್ಲಿ ಬಂದಿದ್ದು, ಅನಂತರ ಬಂದ ಅರ್ಜಿ ಪರಿಗಣಿಸಿದ್ದಾರೆ. ಅಂದರೆ I will personally call for the file and enquire into the matter and take action. What more can I do?

SRI SHIVANANDA S. PATIL: This much reply I wanted.

ಅಧ್ಯಕ್ಷರು : ನಿಮ್ಮಷ್ಟು, ಬಿಲ್ ಪಾಸ್ ಮಾಡಿಕೊಡುತ್ತೇವೆಂದು ತಾವೇ ಹೇಳಿದ್ದೀರಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೇ, ನಾನು ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರಲ್ಲಿ ಏನು ಹೇಳಿದರೂ ನಮಗೆ ಕನ್‌ವಿನ್ಸ್ ಆಗುವುದಕ್ಕೆ ಸಾಧ್ಯವಿಲ್ಲ. ನಾನು ತಮಗೆ ಹೇಳಿದ್ದೇನೆ, ರೆಕಾರ್ಡ್ಸ್‌ನಲ್ಲಿಯೂ ಹೋಗಿದೆ. ಈ ಬಿಲ್‌ನ್ನು ಗೌವರ್ನ್‌ಮೆಂಟ್ ಆಫ್ ಇಂಡಿಯಾದವರು ಯಾವುದೇ ಕಾರಣಕ್ಕೂ ಒಪ್ಪಿಗೆಯನ್ನು ಕೊಡುವುದಿಲ್ಲ. ಆದರೂ ಇವರ ತೃಪ್ತಿಗೋಸ್ಕರ, ವೈಭವೀಕರಣಕ್ಕೋಸ್ಕರ ಅನೇಕ ಅಂಕಿಅಂಶಗಳನ್ನು ಅವರು ಕೊಟ್ಟಿದ್ದಾರೆ. ನಾನು ಅದಕ್ಕೆ ಏನಾದರೂ ಹೇಳಿದರೆ ಬೇಸರವಾಗುತ್ತದೆ. ಇನ್ನು ಆರು ತಿಂಗಳುಗಳಾದರೂ ತಾವುಗಳು ಇರುತ್ತೀರಿ. ಸದನಕ್ಕೆ ತಾವು ಒಂದು ಭರವಸೆಯನ್ನು ಕೊಡಿ. 224 ಕ್ಷೇತ್ರಗಳಲ್ಲಿ ಇನ್ನು ಆರು ತಿಂಗಳುಗಳ ಒಳಗಡೆ ಎಷ್ಟೆಷ್ಟು ಇನ್‌ವೆಸ್ಟ್‌ಮೆಂಟ್ ಬಂದಿದೆ, ಆ ಇಂಡಸ್ಟ್ರೀಗಳು ಯಾವುವು? ನಾನು ಅಪ್ರೂವಲ್‌ಗಳನ್ನು ಕೇಳುವುದಿಲ್ಲ, 224 ಕ್ಷೇತ್ರಗಳಲ್ಲಿ ಆರು ತಿಂಗಳುಗಳಲ್ಲಿ ಎಷ್ಟು ಇಂಡಸ್ಟ್ರೀಸ್‌ಗಳು ಪ್ರಾರಂಭವಾಗಿವೆ? ಎಷ್ಟು ಇನ್‌ವೆಸ್ಟ್‌ಮೆಂಟ್ ಬಂದಿದೆ? ಎಷ್ಟು ಜನಕ್ಕೆ

ಕೆಲಸ ಸಿಕ್ಕಿದೆ ಎನ್ನುವುದನ್ನು ಇನ್ನೂ ಆರು ತಿಂಗಳ ಒಳಗಡೆ ಸದನಕ್ಕೆ ವಿವರಗಳನ್ನು ತಿಳಿಸಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, 224 ತಾಲ್ಲೂಕುಗಳಲ್ಲಿ ಎಷ್ಟು ಸಣ್ಣ, ಅತಿ ಸಣ್ಣ, ದೊಡ್ಡ, ಮಧ್ಯಮ, ಕೈಗಾರಿಕೆಗಳು ಬಂದಿವೆ ಎಂಬ ವಿವರಗಳನ್ನು ನಾನು ಸದನಕ್ಕೆ ಒಪ್ಪಿಸುತ್ತೇನೆ. ಮಾನ್ಯ ಸಿಂಧ್ಯಾರವರಿಗೂ ಕಳುಹಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನಮಗೆ ವಿವರಗಳನ್ನು ಆರು ತಿಂಗಳಲ್ಲಿ ಕೊಡಿಸಿ. ಹಾಗೆಯೇ ಮುಚ್ಚಿರುವ ಫ್ಯಾಕ್ಟರಿಗಳು ಎಷ್ಟು? ಮನೆಗೆ ಎಷ್ಟು ಜನರನ್ನು ಕಳುಹಿಸಿದ್ದೀರಿ? ಈ ವಿವರಗಳನ್ನು ದಯಮಾಡಿ ಕೊಡಿ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಸಿಂಧ್ಯಾಜೀಯವರೇ, ಕೈಗಾರಿಕೆಗಳ ಬಗ್ಗೆ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇನೆ. ಇನ್ನು ಮುಂದೆ ಸರಕಾರವು ಯಾವ ಕೈಗಾರಿಕೆಗಳನ್ನೂ ಪ್ರಾರಂಭ ಮಾಡುವುದಿಲ್ಲ. ಎರಡನೇಯದಾಗಿ ಪ್ರೈವೇಟ್ ಸೆಕ್ಟಾರ್ ಕೈಗಾರಿಕೆಯನ್ನು ಪ್ರಾರಂಭ ಮಾಡಲು ಬಂದಾಗ, ಅವರಿಗೆ ಎನ್‌ಕರೇಜ್ ಮಾಡುತ್ತೇವೆ, ಫೆಸಿಲೇಟ್ ಮಾಡುತ್ತೇವೆಯೇ ವಿನಹ ಅದಕ್ಕಿಂತ ಹೆಚ್ಚು ಏನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನಾನು ಇದನ್ನು ಏತಕ್ಕೆ ಕೇಳುತ್ತಿದ್ದೇನೆ ಅಂದರೆ, ಕಾಂಗ್ರೆಸ್ (ಮ್ಯಾನುಫೆಸ್ಟೋ 1999ರಲ್ಲಿ ಇವರೂ ಅದಕ್ಕೆ ಪಾರ್ಟಿಯಾಗಿದ್ದರು ಮತ್ತು ಅದರಲ್ಲಿ ಬರೆದಿದ್ದಾರೆ. ಕೋಟ್ಯಾಂತರ ರೂಪಾಯಿಗಳ ಬಂಡವಾಳವನ್ನು ತೆಗೆದುಕೊಂಡು ಬರುತ್ತೇವೆ, ಕೈಗಾರಿಕೆಗಳನ್ನು ಪ್ರಾರಂಭ ಮಾಡುತ್ತೇವೆ, ನಮ್ಮ ಸರಕಾರ ಬಂದಮೇಲೆ ಈ ಉದ್ಯೋಗ ಕೊಡುತ್ತೇವೆ ಎಂದು ಹೇಳಿದ್ದಾರೆ. ಹೇಳಿದ ಮೇಲೆ ಎಷ್ಟು ಜನರಿಗೆ ಉದ್ಯೋಗವನ್ನು ಕೊಟ್ಟಿದ್ದೀರಾ? ಎಷ್ಟು ಜನರಿಗೆ ಮನೆಗೆ ಕಳುಹಿಸಿದ್ದೀರಿ ಪ್ರೈವೇಟ್ ಸೆಕ್ಟಾರ್ ಲೆಕ್ಕ ತಿಳಿಸಿ.

SRI R.V. DESHAPANDE : You should have complimented the Minister. I have said I will give the information within fifteen days. ಕಾಂಪ್ಲಿಮೆಂಟ್ ಮಾಡುವುದನ್ನು ಬಿಟ್ಟು, ಇವತ್ತು ಅವರು ಮೂಡ್‌ನಲ್ಲಿ ಇಲ್ಲ.

ಶ್ರೀ ಶಿವಾನಂದ ಎಸ್. ಪಾಟೀಲ್ : ನಾವು ಕಾಂಪ್ಲಿಮೆಂಟ್ ಮಾಡದೆ ನೀವು ಅಲ್ಲಿ ಹೋಗಿದ್ದೀರಿ, ಮತ್ತೆ ಇಲ್ಲಿಗೆ ಯಾವಾಗ ಬರುತ್ತೀರಿ ಹೇಳಿಬಿಡಿ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಸಣ್ಣ ಕೈಗಾರಿಕೆ ಸಚಿವರು ಇಲ್ಲೇ ಕೂತಿದ್ದಾರೆ. ಮುಂಡರಗಿಯಲ್ಲಿ ಮೂರು ವರ್ಷದಿಂದ ಏನೂ ಆಗಿಲ್ಲ, ಜಾಲಿ ಬೆಳೆದಿದೆ. ಹೋಗಿ ನೋಡ್ರಿ ಅದನ್ನು. ಕೈಗಾರಿಕಾ ವಲಯ ಅಭಿವೃದ್ಧಿಪಡಿಸಲು ಸರ್ಕಾರದ ದುಡ್ಡು ಹಾಕಿ ನಾಲ್ಕು ಕಟ್ಟಡ ಕಟ್ಟಿಬಿಟ್ಟರೆ ಅಲ್ಲಿಂದ ಇಲ್ಲಿಯವರೆಗೆ ಬರೀ ಜಾಲಿ ಬೆಳೆದಿದೆ. ಏನು ಉದ್ಯೋಗ ಕೊಡುತ್ತೀರಿ? ಸಣ್ಣ ಕೈಗಾರಿಕೆ ಸಚಿವರು ಇಲ್ಲೇ ಕೂತು ಮಾತನಾಡುವುದು ಬೇಡ, ಹೋಗಿ ನೋಡ್ರಿ.

ಶ್ರೀ ಆರ್.ವಿ. ದೇಶಪಾಂಡೆ : ಸಣ್ಣ ಕೈಗಾರಿಕೆ ಮಂತ್ರಿಗೂ ನನಗೂ ಒಂದು ಆಹ್ವಾನ ಕೊಟ್ಟು ಕರೆಯಿರಿ, ನಾವು ಬಂದು ಅದೇನು ಜಾಲಿ ಮತ್ತೊಂದಿದೆ ಅಂತ ನೋಡಿ ಊಟ ಮಾಡಿ

ಹೋಗುತ್ತೇವೆ. ಆದರೆ ರಾಜಕೀಯವಾಗಿ ಏನಾದರೂ ಮಾತನಾಡಿ. ಈ ಮನೆಗೆ ಅಭಿಮಾನ ಇರಬೇಕು ಯಾವ ಪ್ರಮಾಣ ಕೈಗಾರಿಕೆ ಇಲ್ಲಿ ಬೆಳೆದಿದ್ದಾರೆ ಅಂತ. We are third or fourth in the country today. Pride ಇರಬೇಕು. ಇವತ್ತು any international leader first come to Bangalore and then goes to Delhi. You should be proud about that ಅದು ಬಿಟ್ಟು ಏನೂ ಮಾಡಲಿಲ್ಲ ಅಂದರೆ ಅದರಿಂದ ಏನಾಗುತ್ತದೆ ಅಂದರೆ investors confidence will be shaken. The human resource here, the limited infrastructure and the law and order and claimatic conditions are so suitable that the industries are developed. And I am not claiming that I did it; I said successive governments have done it. You are trying to defend yourself saying that nothing has happended. But when you were in power what happened? Nothing happened?

ಶ್ರೀ ಪಿ.ಎಚ್. ಪೂಜಾರ್ : ಮಾನ್ಯ ಅಧ್ಯಕ್ಷರೆ, ವಿಶೇಷವಾಗಿ ಬಾಗಲಕೋಟೆ ಬಗ್ಗೆ ಹೇಳಿದಿರಿ, ಸಾಮಾನ್ಯ ಚರ್ಚೆಯಲ್ಲೂ ತಾವು ಭಾಗವಹಿಸಿದಿರಿ. ಆಗ್ರೋಪಾರ್ಕ್ ಮಾಡುತ್ತಿದ್ದೀರಿ ಬಾಗಲಕೋಟೆಯಲ್ಲಿ, ಇಲ್ಲಿವರೆಗೆ ನಾಲ್ಕೈದು ಸಣ್ಣ ಇಂಡಸ್ಟ್ರಿಗಳು ಬಂದಿವೆಯಂತ; ನಮಗಂತೂ ಇಲ್ಲಿಯವರೆಗೆ ಗೊತ್ತಾಗಲಿಲ್ಲ, ಸಾವಕಾಶವಾಗಿ ನಡೆದಿದೆ, ಆ ಪ್ರೋಸೆಸ್ ಬಗ್ಗೆ ಮೆನ್ನೆ ತಾವು ಉತ್ತರ ಕೊಟ್ಟಿದ್ದೀರಿ,

ಶ್ರೀ ಆರ್.ವಿ. ದೇಶಪಾಂಡೆ : ಬಾಗಲಕೋಟೆಯಲ್ಲಿ ಕೆಲಸ ನಡೀತಾ ಇದೆ. ರೋಡ್ಸ್ ಆಗಿದೆ ಡ್ರೈನೇಜ್ ಆಗಿದೆ ಶೀತಾಗಾರಗಳ ಕೆಲಸವೆಲ್ಲಾ ಆಗಬೇಕು. ಯಾವ ಇಂಡಸ್ಟ್ರಿಯೂ ಬಂದಿಲ್ಲ.

ಶ್ರೀ ಪಿ.ಎಚ್. ಪೂಜಾರ್ : ಬಂದರೆ ಸ್ವಾಗತ ಮಾಡುತ್ತೇನೆ ಸ್ವಾಮಿ. ಅಗ್ರೋಪಾರ್ಕ್‌ನಂತಹ ಒಳ್ಳೆಯ ಕಾರ್ಯಕ್ರಮ ಹಾಕಿಕೊಂಡಿದ್ದೀರಿ, ನಾನು ಸ್ವಾಗತ ಮಾಡಿದ್ದೇನೆ. ಉತ್ತರ ಕರ್ನಾಟಕಕ್ಕೆ ಇಂಡಸ್ಟ್ರಿಗೆ ಏನೋ ಇನ್ ಸೆಂಟಿವ್ ಸಿಗಬೇಕಲ್ಲಾ ಇಂಡಸ್ಟ್ರಿಯಲ್ ಗ್ರೋತ್ ಸೆಂಟರ್ ನಮೂನೆ ಟ್ಯಾಕ್ಸ್ ರಿಯಾಯಿತಿ ಇವೆಲ್ಲಾ ಕೊಡಿ. ಮೊದಲೇ ಬಾಗಲಕೋಟೆ ಮುಳುಗಡೆಯಾದ ಜಿಲ್ಲೆ. ಅನುಕೂಲ ಮಾಡಿಕೊಡ್ರಿ.

ಶ್ರೀ ಆರ್.ವಿ. ದೇಶಪಾಂಡೆ : 1-1-2000ದ ಎಲ್ಲಾ ಇನ್‌ಸೆಂಟಿವ್ಸ್ ಹೋಗಿವೆ. Only Stamp duty exemption, entry tax then conversion etc, three four small things are being given. Only the pipeline cases ಅದೂ ಮುಗೀತಾ ಬಂತು. We are not giving. ಟ್ಯಾಕ್ಸ್ ರಿಯಾಯ್ತಿ ಕೊಡಿ ಅಂತೀರಿ, ಟ್ಯಾಕ್ಸ್ ರಿಯಾಯ್ತಿ ಕೊಟ್ಟರೆ ವ್ಯಾಪಾರ ಮಾಡುತ್ತೇವೆ ಅಂತೀರಿ. ನೀವು ಅಲ್ಲಿಂದ ನಿರ್ಣಯ ಮಾಡಿರಿ, ನನಗೆ ಹೇಳಿರಿ. ಏನು ಮಾಡಲಿ? Tax incentive ಕೊಡಲೋ ಇಲ್ಲ ವ್ಯಾಪಾರ ಮಾಡುತ್ತೀರೋ? ಟ್ಯಾಕ್ಸ್ ಇನ್‌ಸೆಂಟಿವ್ ಕೊಟ್ಟಮೇಲೆ ವ್ಯಾಪಾರ ಮಾಡಬೇಕಾಗುತ್ತದಲ್ಲಾ ಹಾಗಾಗಿ ಹಾಗಾಗಿ ನಾವೆಲ್ಲಾ ಟ್ಯಾಕ್ಸ್ ಇನ್‌ಸೆಂಟಿವ್ ಬಂದ್ ಮಾಡಿದ್ದೇವೆ. ಆದರೂ ಹೊಸ food processing

policy, today actually I did not attend ಮೂರು ಗಂಟೆಗೆ Cabinet Sub Committee ಇತ್ತು, ಹೊಸ Food Processing Policy ತರುತ್ತಾ ಇದ್ದೇವೆ. ರಾಜ್ಯದಲ್ಲಿ ರೈತರು ಏನು ಬೆಳೆಯುತ್ತಾರೆ ಅದಕ್ಕೆ ವಾಲ್ಯೂ ಆಡಿಶನ್ ಇಲ್ಲ. ಆ ವ್ಯಾಲ್ಯೂ ಅಡಿಶನ್ ಸೇರಿಸಿ ಹೊಸ ಪಾಲಿಸಿ ತರುತ್ತಾ ಇದ್ದೇವೆ. ಅದರಲ್ಲಿ food processing ಅನ್ನು ಬೆಳೆಸಲು ಎಲ್ಲಾ ತರಹದ ಇನ್‌ಸೆಂಟಿವ್ಸ್ ಕೊಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಇವತ್ತೇ ತಮಗೆ ಅದನ್ನು ನನಗೆ ಹೇಳಲಿಕ್ಕೆ ಆಗುವುದಿಲ್ಲ. policy Cabinet ಮುಂದೆ ಹೋಗಬೇಕು. ನಿರ್ಣಯವಾದ ಮೇಲೆ ಗೊತ್ತಾಗುತ್ತದೆ ಯಾವ ತರಹದ ನೀತಿ ನಾವು ಕೊಡುತ್ತೇವೆ ಅಂತ.

ಶ್ರೀ ವಿಜಯಕುಮಾರ ಶೆಟ್ಟಿ : ಮಾನ್ಯ ಅಧ್ಯಕ್ಷರೇ, ನಮ್ಮ ಕೈಗಾರಿಕಾ ಸಚಿವರು ಹಲವಾರು ಸುಧಾರಣೆಗಳನ್ನು ತರಲು ಪ್ರಯತ್ನ ಮಾಡುತ್ತಿದ್ದಾರೆ. ನಾನು ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಇತ್ತೀಚೆಗೆ ಎಂಆರ್‌ಪಿಎಲ್ ಬಹಳ ಕಷ್ಟದಲ್ಲಿದ್ದ ಸಂದರ್ಭದಲ್ಲಿ ಅವರು ಬಂದು 50 ಲಕ್ಷದ ನೀರಿನ ವ್ಯವಸ್ಥೆಗೆ ಸಹಕಾರ ಮಾಡಿದ್ದಾರೆ. ಆದರೆ ಈಗ ನೋಡಲಿಕ್ಕೆ ಹೋಗುವಾಗ ಮೊನ್ನೆ ತಾನೇ ಸ್ಟಾಂಪ್‌ಡ್ಯೂಟಿಯನ್ನು ಅವರಿಗೆ ಮನ್ನಾ ಮಾಡಿಕೊಟ್ಟಿದ್ದಾರೆ. ಮೇಲನೋಟಕ್ಕೆ ಇಲ್ಲಿ ಉದ್ಯಮಿಗಳಿಗೆ ಹೆಚ್ಚು ಪ್ರೋತ್ಸಾಹ ಕೊಡುವ ವಾತಾವರಣ ಇಲ್ಲಿ ಕಾಣಿಸುತ್ತಿದೆ. ನಾನು ಹೇಳುವುದು ಈ ಸಮಿತಿ ಮಾಡಿದ್ದೀರಿ, ಇದರಲ್ಲಿ ನಾವು ಇಲ್ಲಿ ಮಂತ್ರಿಗಳ ಚೇಂಬರಿನಲ್ಲಿ ಅಥವಾ MS buildingನ ಅಧಿಕಾರಿಗಳ ಚೇಂಬರ್‌ನಲ್ಲಿ ಕೂತು ಈ ವ್ಯವಸ್ಥೆ ಮಾಡುತ್ತಿದ್ದೀರಿ. ಈ ವಸ್ತುಸ್ಥಿತಿಯನ್ನು ನೀವು ಮನಗಾಣಬೇಕಾದರೆ, ಶಾಸಕರನ್ನು ಈ ಸಮಿತಿಯಲ್ಲಿ ಹಾಕಬೇಕು. ಎರಡನೆಯದು ಪ್ರತ್ಯೇಕವಾಗಿ ನಿರ್ವಸಿತರಾದ ಜನರಿಗೆ ಈ ಉದ್ದಿಮೆಗಳಲ್ಲಿ ಕನಿಷ್ಟ 50 ಶೇಕಡದಷ್ಟಾದರೂ ನೌಕರಿ ಕೊಡುತ್ತೇವೆಂಬುದನ್ನು ಸಚಿವರು ಈಗ ಹೇಳಬೇಕು. ಇದಕ್ಕೆ ಬೇಕಾದ ತಿದ್ದುಪಡಿಯನ್ನು ಇದರಲ್ಲಿ ಮಾಡಬೇಕು. ಅದು ಮಾತ್ರವಲ್ಲದೆ private entrepreneurs ಯಾರಿದ್ದಾರೆ ಸರ್ಕಾರದ ಯಾವುದೇ ಹಿಡಿತ ಅವರ ಮೇಲಿಲ್ಲ, ಸರ್ಕಾರದ ಎಲ್ಲಾ ಪ್ರಯೋಜನಗಳನ್ನು ಪಡೆದುಕೊಳ್ಳುತ್ತಾರೆ, ಅವರ ಇಂಡಸ್ಟ್ರಿ ಸ್ಥಾಪನೆಯಾದಮೇಲೆ ಸರ್ಕಾರದ ಹಿಡಿತ ಯಾವುದೇ ಉದ್ದಿಮೆ ಮೇಲಿರುವುದಿಲ್ಲ. ಇದರಿಂದಾಗಿ ನಮಗೆ ಬಹಳ ಕಷ್ಟವಾಗುತ್ತಿದೆ. ಸಚಿವರು ಇದರ ಬಗ್ಗೆ ವಿಶೇಷವಾಗಿ ಗಮನಹರಿಸಿ ಇದನ್ನು ಈ ವಿಧೇಯಕದಲ್ಲಿ ಅಳವಡಿಸಬೇಕೆಂದು ಈ ಸಂದರ್ಭದಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ಈಗಾಗಲೇ ನಾವು ಎಲ್ಲೆಲ್ಲಿ ಲ್ಯಾಂಡ್ ತೆಗೆದುಕೊಳ್ಳುತ್ತೇವೆ, ಆದಷ್ಟು ಎಲಿಜಿಬಲ್ ಇದ್ದರೆ ಅವರಿಗೆ ನೌಕರಿ ಕೊಡಬೇಕೆಂದು ಸರ್ಕಾರದ ಆದೇಶವಿದೆ. ಮಾನ್ಯ ಸದಸ್ಯರು ಹೇಳಿರುವ ಬಗ್ಗೆ ಅದನ್ನು ಕಡ್ಡಾಯ ಮಾಡಲು ಸಾಧ್ಯವೇ ಎಂದು ನಾನು ವಿಚಾರಿಸುತ್ತೇನೆ, ಹಾಗೂ ಪರಿಶೀಲಿಸುತ್ತೇನೆ. ಎರಡನೆಯದು ಶಾಸಕರನ್ನು ಈ ಸಮಿತಿಯಲ್ಲಿಡಬೇಕೆಂದು ಹೇಳಿದ್ದಾರೆ. ಅದು ಸ್ವಲ್ಪ ಕಷ್ಟವಾಗಬಹುದು, ಏಕೆಂದರೆ proposals which are to be cleared for projects ಶಾಸಕರು ಅದರಲ್ಲಿ ಏನು ಮಾಡಬಹುದು? Infrastructure, water, power ಇವಕ್ಕೆಲ್ಲಾ ಅವರೇ ಜವಾಬ್ದಾರಿ ಹೊರಬೇಕಾಗುತ್ತದೆ. I should be honest ಅದನ್ನು ನಾನು

ಪರಿಶೀಲಿಸುತ್ತೇನೆ.

ಶ್ರೀ ಸಿ. ಚನ್ನಿಗಪ್ಪ : ಮಾನ್ಯ ಅಧ್ಯಕ್ಷರೆ, ಒಂದು ಕ್ಷೇತ್ರದಲ್ಲಿ ಇಂಡಸ್ಟ್ರೀಸ್ ತರಬೇಕಾದರೆ ಆಯಾ ಶಾಸಕರನ್ನು ಸದಸ್ಯರನ್ನಾಗಿ ಮಾಡಿಕೊಂಡರೆ ಬಹಳ ಒಳ್ಳೆಯದು. ಮಾನ್ಯ ಸಚಿವರು 4 ವರ್ಷದ ಹಿಂದೆ ದಾಬಸ್‌ಪೇಟೆಯಲ್ಲಿ 1300 ಎಕರೆ ಜಮೀನು ತೆಗೆದುಕೊಂಡು ನೇಮಕಾತಿ ಕೊಡುತ್ತೇವೆ ಎಂದು ಹೇಳಿದ್ದರು. ಒಬ್ಬರಿಗೂ ನೌಕರಿ ಕೊಟ್ಟಿಲ್ಲ, ದಯಮಾಡಿ ಪರಿಶೀಲನೆ ಮಾಡಬೇಕು.

ಶ್ರೀ ಕೆ. ಶ್ರೀನಿವಾಸಗೌಡ (ಕುಡುವನಹಳ್ಳಿ) : ಮಾನ್ಯ ಸಚಿವರಲ್ಲಿ ನನ್ನ ವಿನಂತಿ ಏನೆಂದರೆ, ಶಾಸಕರನ್ನು ಆ ಸಮಿತಿ ಸದಸ್ಯರನ್ನಾಗಿ ಮಾಡಿದರೆ ತಪ್ಪಾಗುತ್ತದೆ, ಅನೇಕ ಕಷ್ಟಕಾರ್ಪಣ್ಯಗಳನ್ನು ಅವರು ನೋಡಬೇಕಾಗುತ್ತದೆ. ಆದ್ದರಿಂದ ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡುವುದು ಬೇಡ.

ಅಧ್ಯಕ್ಷರು : ಅಧ್ಯಕ್ಷರಾಗಿ ಬೇಡ, ಆದರೆ ಅವರ ಪಾರ್ಟಿಸಿಪೇಷನ್ ಇದ್ದರೆ ಉತ್ತಮ.

ಶ್ರೀ ವಿಜಯಕುಮಾರ್ ಶೆಟ್ಟಿ : ಅಧ್ಯಕ್ಷರಾಗಿ ಬೇಡ, ಸದಸ್ಯರಾಗಿ ಹಾಕಬೇಕು.

ಅಧ್ಯಕ್ಷರು : ಪ್ರಸ್ತಾವರೇನೆಂದರೆ, ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) ವಿಧೇಯಕ, 2002, ಅನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು:

ಖಂಡ 2

ಅಧ್ಯಕ್ಷರು : ಪ್ರಸ್ತಾವ ಏನೆಂದರೆ "ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ 2 ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡಕ್ಕೆ ತಿದ್ದುಪಡಿ:

SRI R.V. DESHPANDE : (Minister for Large and Medium Industries) : I here by give notice of my intention to move the following amendment to the Karnataka Industries (Facilitation) Bill, 2002 (L.A. Bill No. 5 of 2002), namely:-

CLAUSE - 3

"That in the said Bill, in Clause 3, for sub-clause(1), the following shall be substituted namely:-

"(1) The State Government may by notification constitute a single point clearance committee called on State High Level Clearance Committee constituting of such members as may be specified therein".

ಪ್ರಸ್ತಾವ ಮಂಡಿಸಲ್ಪಟ್ಟಿತು.

AMENDMENT TO CLAUSE - 6

Sri R.V. Deshpande (Mr. for Large & Medium Indutries): I beg to more:-

"That In the said Bill, in Clause 6, for sub-clause(1), the following shall be substituted namely:-

"(1) The State Government may by notification constitute a single window clearance committee for the State called as the "State Level Single Window Clearance Committee" constituting of such members as may be specified therein".

ಪ್ರಸ್ತಾವ ಮಂಡಿಸಲ್ಪಟ್ಟಿತು.

ಶ್ರೀ ಆರ್.ವಿ. ದೇಶಪಾಂಡೆ : ಅಧ್ಯಕ್ಷರೇ ಇದನ್ನು ಮಾಡುವುದು ಒಂದೇ ಉದ್ದೇಶ ಸಿಂಧ್ಯಾಜಿ ಮತ್ತು ಇತರ ಸದಸ್ಯರು ಹೇಳಿದರು. 6 ಜನ ಸಂಪುಟ ಸಚಿವರಿದ್ದೀರಿ, 5 ಅಧಿಕಾರಿಗಳಿದ್ದಾರೆ ಅಂತ. ಮಾನ್ಯ ಶಿವಾನಂದ ಪಾಟೀಲರು ಹೇಳಿದರು. ಆಂಧ್ರದಲ್ಲಿ ಮುಖ್ಯಮಂತ್ರಿಗಳೇ ಇದ್ದಾರೆ ಅಂತ; ಹಾಗಾಗಿ ಇಲ್ಲೂ ಸಹ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ high level committee ಮಾಡಬೇಕೆಂದು ಚಿಂತನೆ ಆಗಿದೆ. ರೂಲ್ಸ್‌ನಲ್ಲಿ ಹಾಗೆ ಮಾಡಿದರೆ ನಮಗೆ ಹೇಗೆ ಬೇಕೋ ಹಾಗೆ ಮಾಡಲು ಬರುತ್ತದೆ. delete or add ಮಾಡಬಹುದು.

ಶ್ರೀ ಕೆ.ಬಿ. ಮಲ್ಲಿಕಾರ್ಜುನ್ : ಇದರ ಬಗ್ಗೆ ಒಂದು ಅಧಿಸೂಚನೆ ಹೊರಡಿಸಿ. ಏಕೆಂದರೆ ಇದು ಒಂದು ವರ್ಷವಾದರೂ ಇರುತ್ತದಾ? ಯಾವುದಾದರೂ ಅರ್ಜಿ ಬಂದಾಗ ಅಧಿಸೂಚನೆ ಹೊರಡಿಸಿಕೊಂಡು ಮಾಡುತ್ತೀರಾ ಅಂತ ನಾನು ವಿವರಣೆ ಕೇಳಿದ್ದೆ.

ಶ್ರೀ ಆರ್.ವಿ. ದೇಶಪಾಂಡೆ : ಇದು ಕಮಿಟಿ ರಚನೆ ಮಾಡುವುದಕ್ಕೆ , ಅರ್ಜಿ ಕೊಡುವುದಕ್ಕೆ ಹೇಗಾಗುತ್ತದೆ? ಇದು ಒಂದೇ ಕಮಿಟಿ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ್ : ನೀವು ಮಾಡುವ ಕಮಿಟಿಯ ಟರ್ಮ್ ಎಷ್ಟು?

ಶ್ರೀ ಆರ್.ವಿ. ದೇಶಪಾಂಡೆ : ಈ ಕಮಿಟಿಗೆ ಟರ್ಮ್ ಇಲ್ಲ, ನಾಳೆ ಸರ್ಕಾರ ಬದಲಾವಣೆ ಮಾಡಬೇಕೆಂದರೆ ಮಾಡಬಹುದು. ಎರಡನೆಯದು ಈ high power committee chairman ಆಗಿ ನಾನೇ ಇದ್ದೇನೆ. ಯಾವ ಸರ್ಕಾರವೂ ಇದನ್ನು ಬದಲಾವಣೆ ಮಾಡಿಲ್ಲ. ಇದು ಮುಂಚಿನಿಂದಲೂ ಇದೆ. Single window agency concept ಇದು ಹೊಸದಾಗೇನಲ್ಲ, 1985ರಿಂದ ಬಂದಿದೆ. ಸಿಂಗಲ್ ವಿಂಡೋ ಏಜೆನ್ಸಿ ಯಾವುದು? ಜಿಲ್ಲಾ ಮಟ್ಟದಲ್ಲಿ ಮೂರು ಕೋಟಿ ರೂ. three crores to fifty crores is to cleared by the single window agency. And High power committee will clear above fifty crores as per the industrial policy. If anything above that it has to go to the cabinet. Cabinet is different and the fine ministers are difference. ಆ ಆಕೇಷನ್ ಜನರಲಿ ಬರುವುದಿಲ್ಲ.

ಖಂಡ 3ಕ್ಕೆ ತಿದ್ದುಪಡಿ:

ಶ್ರೀ ಆರ್.ವಿ.ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು): ಮಾನ್ಯ ಅಧ್ಯಕ್ಷರೇ, ಖಂಡ-3ಕ್ಕೆ ನಾನು ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ.

" ಸದರಿ ವಿಧೇಯಕದಲ್ಲಿ 3ನೇ ಖಂಡದಲ್ಲಿ (1) ನೇ ಉಪಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು ಎಂದರೇ:- (1) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ಅದರಲ್ಲಿ ನಿರ್ದಿಷ್ಟಪಡಿಸಬಹುದಾದಂತ ಅಂಥ ಸದಸ್ಯರುಗಳನ್ನು ಒಳಗೊಂಡ ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿ ಎಂದು ಕರೆಯಲಾಗುವ ಏಕ ಹಂತ ಒಪ್ಪಿಗೆ ನೀಡಿಕೆ ಸಮಿತಿಯನ್ನು ರಚಿಸಬಹುದು".

ಪ್ರಸ್ತಾವ ಮಂಡಿಸಲ್ಪಟ್ಟಿತು

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "ಸದರಿ ವಿಧೇಯಕದಲ್ಲಿ 3ನೇ ಖಂಡದಲ್ಲಿ (1) ನೇ ಉಪಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು ಎಂದರೆ:- (1) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ಅದರಲ್ಲಿ ನಿರ್ದಿಷ್ಟಪಡಿಸಬಹುದಾದಂತ ಅಂಥ ಸದಸ್ಯರುಗಳನ್ನು ಒಳಗೊಂಡ ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿ ಎಂದು ಕರೆಯಲಾಗುವ ಏಕ ಹಂತ ಒಪ್ಪಿಗೆ ನೀಡಿಕೆ ಸಮಿತಿಯನ್ನು ರಚಿಸಬಹುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ 3 ತಿದ್ದುಪಡಿಯಾದ ರೀತಿಯಲ್ಲಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ: "ಖಂಡ 3 ತಿದ್ದುಪಡಿಯಾದ ರೀತಿಯಲ್ಲಿ ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 3 ತಿದ್ದುಪಡಿಯಾದ ರೀತಿಯಲ್ಲಿ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 4 ಮತ್ತು 5

ಅಧ್ಯಕ್ಷರು: ಪ್ರಸ್ತಾವ ಏನೆಂದರೆ:- "ಖಂಡ 4 ಮತ್ತು 5 ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 4 ಮತ್ತು 5 ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ : 6

ಶ್ರೀ ಆರ್.ವಿ.ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು): ಮಾನ್ಯ ಅಧ್ಯಕ್ಷರೇ, ಖಂಡ-6ಕ್ಕೆ ನಾನು ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ.

" ಸದರಿ ವಿಧೇಯಕದಲ್ಲಿ 6ನೇ ಖಂಡದಲ್ಲಿ (1) ನೇ ಉಪಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು ಎಂದರೇ:- (1) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ಅದರಲ್ಲಿ ನಿರ್ದಿಷ್ಟಪಡಿಸಬಹುದಾದಂತ, ಅಂಥ ಸದಸ್ಯರುಗಳನ್ನು ಒಳಗೊಂಡ ರಾಜ್ಯ ಮಟ್ಟದ ಏಕ ಗವಾಕಿ ಒಪ್ಪಿಗೆ ನೀಡಿಕೆ ಸಮಿತಿ ಎಂದು ಕರೆಯಲಾಗುವ ಏಕ ಗವಾಕ್ಷಿ ಒಪ್ಪಿಗೆ ನೀಡಿಕೆ ಸಮಿತಿಯನ್ನು ರಚಿಸಬಹುದು".

ಪ್ರಸ್ತಾವ ಮಂಡಿಸಲ್ಪಟ್ಟಿತು

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "ಸದರಿ ವಿಧೇಯಕದಲ್ಲಿ 6ನೇ ಖಂಡದಲ್ಲಿ (1) ನೇ ಉಪಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು ಎಂದರೆ:- (1) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ಅದರಲ್ಲಿ ನಿರ್ದಿಷ್ಟಪಡಿಸಬಹುದಾದಂತೆ, ಅಂಥ ಸದಸ್ಯರುಗಳನ್ನು ಒಳಗೊಂಡ ರಾಜ್ಯ ಮಟ್ಟದ ಏಕ ಗವಾಕ್ಷಿ ಒಪ್ಪಿಗೆ ನೀಡಿಕೆ ಸಮಿತಿ ಎಂದು ಕರೆಯಲಾಗುವ ಏಕ ಗವಾಕ್ಷಿ ಒಪ್ಪಿಗೆ ನೀಡಿಕೆ ಸಮಿತಿಯನ್ನು ರಚಿಸಬಹುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ 6 ತಿದ್ದುಪಡಿಯಾದ ರೀತಿಯಲ್ಲಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ: "ಖಂಡ 6 ತಿದ್ದುಪಡಿಯಾದ ರೀತಿಯಲ್ಲಿ ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 6 ತಿದ್ದುಪಡಿಯಾದ ರೀತಿಯಲ್ಲಿ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 7 ರಿಂದ 23ರವರೆಗೆ

ಅಧ್ಯಕ್ಷರು: "ಖಂಡ 7 ರಿಂದ 23 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 7 ರಿಂದ 23 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು.)

ಖಂಡ : 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ: "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು).

ಪ್ರಸ್ತಾವದ ಅಂಗೀಕಾರ

ಶ್ರೀ ಆರ್.ವಿ.ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು): ಮಾನ್ಯ ಅಧ್ಯಕ್ಷರೇ, "2002ರ ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) ವಿಧೇಯಕವನ್ನು ತಿದ್ದುಪಡಿಯಾದ ರೀತಿಯಲ್ಲಿ ಅಂಗೀಕರಿಸಬೇಕೆಂದು ಕೋರುತ್ತೇನೆ".

ಅಧ್ಯಕ್ಷರು : ಪ್ರಸ್ತಾವ ಏನೆಂದರೆ: "2002ರ ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

12. ಪ್ರಕಟಣೆ

ಅಧ್ಯಕ್ಷರು : ವಿಧಾನಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿರುತ್ತದೆ. ಕರ್ನಾಟಕ ವಿಧಾನಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತವಾದ